# TET AND GPSTR ಪರೀಕ್ಷಾ ಕೈಪಿಡಿ

EDITION -2

2019,2022

# ಸಮಾಜ ವಿಜ್ಞಾನ ಬೋಧನಾಶಾಸ್ತ್ರ




ಮಾಹಿತಿ ಸಂಪಾದಕರು : ಜೆ ಎಸ್ ಎಸ್

ಮಾಹಿತಿ ಸಂಪಾದಕರು : ಜೆ ಎಸ್ ಸೋಮನಾಳ

# ಸಮಾಜ ವಿಜ್ಞಾನ ಬೋಧಾನಶಾಸ್ತ್ರ

ಕರ್ನಾಟಕ ಸರಕಾರ ನಡೆಸುವ ಶಿಕ್ಷಕರ ಅರ್ಹತಾ ಪರೀಕ್ಷೆ ಹಾಗೂ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿಗಗಿ ತಯಾರಿಸಲಾಗಿದೆ.

JSS CAREER ACADEMY

| ಕ್ರ ಸಂ | ಪರಿವಿಡಿ | ಪು, ಸ |
|---|---|---|
| 1 | ಇತಿಹಾಸದ ಅರ್ಥ ,ಸ್ವರೂಪ,ವ್ಯಾಪ್ತಿ ,ಮತ್ತು ಮಹತ್ವ | |
| 2 | ಇತಿಹಾಸದ ಗುರಿ ಮತ್ತು ಮೌಲ್ಯಗಳು | |
| 3 | ಬೋಧನಾ ಉದ್ದೇಶಗಳು | |
| 4 | ಪೌರನೀತಿಯ ಬೋಧನಾ ಉದ್ದೇಶಗಳು | |
| 5 | ಇತಿಹಾಸದ ಪ್ರಕಾರಗಳು | |
| 6 | ವಿಷಯಗಳ ನಡುವಿನ ಸಹ ಸಂಬಂಧ | |
| 7 | ಇತಿಹಾಸದ ಬೋಧನಾ ವಿಧಾನಗಳು | |
| 8 | ಸಮುದಾಯ ಸಂಪನ್ಮೂಲಗಳ | |
| 9 | ಇತಿಹಾಸದ ಆಯಾಮಗಳು | |
| 10 | ದೃಕ್ ಶ್ರವಣೋಪಕರಣಗಳು | |
| 11 | ಮಾದರಿಗಳು | |
| 12 | ರಚನವಾದ ಅರ್ಥ ಮತ್ತು ವ್ಯಾಖ್ಯೆ | |
| 13 | ಪಠ್ಯಕ್ರಮದ ರಚನೆಯ ವಿಧಾನಗಳು | |
| 14 | 5 E ಮಾದರಿ ಮತ್ತು ತರಗತಿಯಲ್ಲಿ ಅಳವಡಿಸಿಕೊಳ್ಳುವ ವಿಧಾನ , ಪಾಠ ಯೋಜನೆ | |
| 15 | ಘಟಕ ಯೋಜನೆ | |
| 16 | ಸಂಪನ್ಮೂಲ ಘಟಕ ಯೋಜನೆ | |
| 17 | ಮೌಲ್ಯ ಮಾಪನ.ಅರ್ಥ, ಗುಣಲಕ್ಷಣಗಳು ಪ್ರಮುಖ ಸಾಧನಗಳು | |
| 18 | ಡಿಜಿಟಲ್ ಮೌಲ್ಯಮಾಪನ | |
| 19 | ಸಹಕರ ಕಲಿಕೆ ಮತ್ತು ಸಂಘಟನಾತ್ಮಕ ಕಲಿಕೆ | |
| 20 | ಮೌಲ್ಯೀಕರಿಸುವಲ್ಲಿ ನವಿನ ತಂತ್ರಗಳು ,ಆನ್ ಲೈನ್ ಮೌಲ್ಯಮಾಪನ.ತರೆದ ಪುಸ್ತಕ ವಿದಾನ | |
| 21 | ಕಲಿಕಾ ವಲಯಗಳು :ಹೋರೆಯಿನ್ ಅಂಡ್ರರನ್ ಪ್ರಕಾರ ಕಲಿಕಾ ವಲಯಗಳು, | |
| 22 | | |


JSS CAREER ACADEMY

# ಸಮಾಜ ವಿಜ್ಞಾನ ಬೋಧನಾಶಾಸ್ತ್ರ

## ಇತಿಹಾಸ

- ಇಂದು ನಾವು ಮುಗು ಕಂದ್ರೀತ ಶಿಕ್ಷಣದ ವ್ಯವಸ್ಥೆಯಲ್ಲಿದ್ದವೆ.ಅಂದರೆ ಈ ವ್ಯವಸ್ಥೆಯಲ್ಲಿ ಮಗು ಶಿಕ್ಷಣದ ಕೇಂದ್ರ ಬಿಂದು ಆಗಿದ್ದು ಅವನ ಆಸಕ್ತಿ ಅಭಿರುಚಿಗೆ ಅನುಗುಣವಾಗಿ ಬೋಧನಾ ಕಾರ್ಯ ನಡೆಯುವುದು.
- ಇತಿಹಾಸವನ್ನು ಸಮಾಜ ವಿಜ್ಞಾನಗಳ ರಾಣಿ ಅಥವಾ ಮಾತೆಯೆಂದು ಕರೆಯುತ್ತಾರೆ.
- ಇದರಲ್ಲಿ ಮೊದಲ ನೆಲೆಗೊಂಡ ವಿಷಯಗಳು ತತ್ವಶಾಸ್ತ್ರ, ರಾಜನೀತಿ, ಲಲಿತ ಕಲೆ ಇತ್ಯಾದಿ
- ಸಮಾಜ ವಿಜ್ಞಾನ ಎಂದರೆ :- ಸಮಾಜ ಮತ್ತು ಮಾನವನ ಎಲ್ಲಾ ರೀತಿಯ ನೂತನ ಮಾಹಿತಿಗಳನ್ನು
ಸಮಗ್ರೀಕರಿಸುವ ವಿಷಯವನ್ನು ಸಮಾಜ ವಿಜ್ಞಾನ ಎಂದು ಕರೆಯಲಾಗುತ್ತದೆ..
- ಇತಿಹಾಸ , ಪೌರನೀತಿ, ಭೂಗೋಳ, ಮತ್ತು ಅರ್ಥಶಾಸ್ತ್ರ ವಿಷಯಗಳನ್ನೊಳಗೊಂಡ ವಿಷಯವೇ ಸಮಾಜ ವಿಜ್ಞಾನ ಆಗಿದೆ ,ಇಂದು ಶಾಲೆಯಲ್ಲಿ ಈ ವಿಷಯಗಳನ್ನೇ ಬೋಧನೆ ಮಾಡಲಾಗುತ್ತದೆ.

ಸಮಾಜ ವಿಜ್ಞಾನ ವ್ಯಾಖ್ಯೆಗಳು:-

- **The new encyclopedia of social science**
- ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿನ್ನಲೆಯಲ್ಲಿ ಮಾನವನ ವರ್ತನೆಯನ್ನು ತಿಳಿಸುವ ವಸ್ತುವಿಷಯವೇ ಸಮಾಜ ವಿಜ್ಞಾನ
- **Inernational enclyopedia and David sills** ಅವರಪ್ರಕಾರ :- ಯಾವ ವಿಷಯಗಳು ಸಾಮಾಜಿಕ ವರ್ತನೆ, ಮತ್ತು ಸಂಘ -ಸಂಸ್ಥೆಗಳ ಸಾಮಾಜಿಕ ಹಾಗೂ ವರ್ತನಾ ವಿಜ್ಞಾನಗಳ ಬಗ್ಗೆ ಮಾಹಿತಿ ನೀಡಬಲ್ಲ ವಿಷಯವೇ ಸಮಾಜ ವಿಜ್ಞಾನ ಆಗಿದೆ.
- ಜೇಮ್ಸ್ ಹೈ ಅವರ ಪ್ರಕಾರ :- ಸಾಮಾಜಿಕ ಪ್ರಕ್ರಿಯೆಯನ್ನು ನಿರ್ಮಿಸುವ , ದೈಹಿಕ ಮತ್ತು ಮಾನಸಿಕ ಕ್ರಿಯೆಗಳನಿರಂತರ ಹಾಗೂ ಅನ್ಯೋನ್ಯ ಕಲಿಕಾ ಸಂಬಂಧಗಳನ್ನು ಅಭ್ಯಸಿಸುವುದೇ ಸಮಾಜ ವಿಜ್ಞಾನ

JSS CAREER ACADEMY

- ಚಾರ್ಲ್ಸ್ ಬಿಯರ್ಡ್ :- ಕಲ್ಲು, ಕೋಲು ,ನಕ್ಷತ್ರ,ಮತ್ತು ಭೌತಿಕ ವಸ್ತುಗಳಿಂದ ಬಿನ್ನವಾಗಿರುವಂತಹ ಮಾನವಿಕ ವಿಷಯಗಳನ್ನು ಆಲೋಚಿಸುವಂತಹ ಜ್ಞಾನದ ಶಾಖೆಯೇ ಸಮಾಜ ವಿಜ್ಞಾನ

## ಸಮಾಜ ವಿಜ್ಞಾನದ ಲಕ್ಷಣಗಳು

- ಈ ವಿಷಯವು ಮಾನವರು ವಾಸಿಸುವ ಸಾಮಾಜಿಕ ಪರಿಸರದ ನಡುವಿನ ಸಂಬಂಧ ಹಾಗೂ ವಿಕಾಸದ ಬಗ್ಗೆ ತಿಳಿಸುವುದು.
- ಈ ವಿಷಯವು ಸಮಾಜದಲ್ಲಿ ಬರುವ ಎಲ್ಲಾ ವಿಷಯಗಳನ್ನು ತಿಳಿಸುವ ಎಲ್ಲಾ ಕಾರ್ಯ ಮಾಡುವುದು.
- ಇದು ಸೈದ್ಧಾಂತಿಕ ನೆಲೆಗೆ ಹೆಚ್ಚಿನ ಒತ್ತು ನೀಡುವುದು, ಅದರ ಅನ್ವಯಿಕ ಭಾಗವೇ ಸಮಾಜ ವಿಜ್ಞಾನದ ಅಭ್ಯಾಸವಾಗಿದೆ.
- ಇದು ಗತಕಾಲದ ಘಟನೆಗಳಿಗೆ ಸಿಮಿತವಾಗಿರದೆ.ವರ್ತಮಾನ ಹಾಗೂ ಸಮಾಕಾಲಿನ ಸಮಸ್ಯೆಗಳು ಅಥವಾ ವಿಧಾನಗಳನ್ನು ತಿಳಿಯುವುದಕ್ಕೆ ಸಹಾಯಕ.
- ಸಮಾಜದಲ್ಲಿ ಸಮಾಜದ ವೈವಿಧ್ಯಮಯ ಮಾನವಿಕ ಸಂಬಂಧಗಳ ಕುರಿತು ಅಧ್ಯಯನ ಮತ್ತು ಪರಿಶೋಧನಾ ಕಾರ್ಯ ಮಾಡುವುದು.
- ಸಮಾಜದಲ್ಲಿ ನಿತ್ಯನೂತನ ಸತ್ಯಸಂಗತಿಗಳನ್ನು ಕಂಡು ಹಿಡಿಯುವ ಕಾರ್ಯ ಮಾಡುವುದು.
- ಇದು ಅರ್ಥಶಾಸ್ತ್ರ ಹಾಗೂ ಮನಃಶಾಸ್ತ್ರ ಒಳಗೊಂಡಂತೆ ಕಾರ್ಯ ಮಾಡುವುದು.
- ಸಮಾಜ ವಿಜ್ಞಾನವು ಶಿಶುಕೇಂದ್ರೀತ ವಿಷಯವಾಗಿದೆ.
- ಇದು ಸಮಾಜದ ಉಗಮ,ಸಂಘಟನೆ ಹಾಗೂ ಬೆಳವಣಿಗೆಯ ಬಗ್ಗೆ ತಿಳಿಸುವುದು
- ಇದು ಜನತೆ ಒಳಗೊಂಡ ರೀತಿ, ನೀತಿ, ಆಚಾರ, ವಿಚಾರ ಮುಂತಾದ ವಿಷಯಗಳನ್ನು ತಿಳಿಸುವುದು.

## ಸಮಾಜ ವಿಜ್ಞಾನದ ಶಾಖೆಗಳು

- ಇತಿಹಾಸ
- ಪೌರನೀತಿ
- ಭೂಗೋಳ
- ಅರ್ಥಶಾಸ್ತ್ರ

JSS CAREER ACADEMY

- ವ್ಯವಹಾರ ಅಧ್ಯಯನ
- ಸಮಾಜಶಾಸ್ತ್ರ (ಪ್ರಸ್ತುತ ಪೌಢ ಶಾಲಾ ಹಂತಕ್ಕೆ ಇರುವ ಶಾಖೆಗಳಾಗಿವೆ) ಇದರಲ್ಲಿ ಇನ್ನೂ ಹಲವಾರು ಶಾಖೆಗಳಿವೆ.ಅವುಗಳೆಂದರೆ
- ಶಿಕ್ಷಣ
- ವೇದಾಂತ
- ಮಾನವ ವಿಜ್ಞಾನ ಇತ್ಯಾದಿ

**ವಿಷಯದ ವ್ಯಾಪ್ತಿ ಎಂದರೆ** :- ಒಂದು ವಿಷಯದ ಆಳ, ಅರಿವು, ವಿಸ್ತಾರ ಮತ್ತು ಆ ವಿಷಯದ ಬೇರೆ ಬೇರೆ ಅಂಶಗಳಾಗಿವೆ.

**ಸಮಾಜ ವಿಜ್ಞಾನ ವಿಷಯದ ವ್ಯಾಪ್ತಿ**

- ಮಾನವ ಮತ್ತು ಸಮಾಜದ ಸಂಘ ಸಂಸ್ಥೆಗಳ ನಡುವೆ ಸಂಬಂಧ ಕಲ್ಪಸುವುದು.
- ಇದು ಸ್ಥಳೀಯ, ರಾಜ್ಯ, ರಾಷ್ಟ್ರೀಯ, ಅಂತರಾಷ್ಟ್ರೀಯದ ಪ್ರಚಲಿತ ವಿಷಯಗಳನ್ನು ಕುರಿತು ಅಧ್ಯಯನ ಮಾಡುವುದು.
- ಸಮಾಜದ ಮೂಲಭೂತ ಸಮಸ್ಯೆಗಳ ಕುರಿತು ಅಧ್ಯಯನ ಮಾಡುವುದ. ಉದಾ :- ಬಡತನ, ಹಸಿವು ,ನಿರುದ್ಯೋಗ, ಶಿಕ್ಷಣ, ರೋಗ ರುಜಿನಗಳು ಇತ್ಯಾದಿ
- ಸಮಾಜದ ವಿಷಯಗಳನ್ನು ಸಮಗ್ರೀಕರಿಸುವುದು.ವಿಷಯವನ್ನು ತಾರ್ಕಿಕವಾಗಿ ಮತ್ತು ಹಂತ ಹಂತವಾಗಿ ತಿಳಿಸುವ ಮೂಲಕ ವಿದ್ಯಾರ್ಥಿಗಳನ್ನು ಪ್ರಸ್ತುತ ಸಮಾಜಕ್ಕೆ ಹೊಂದಿಕೊಳ್ಳವಂತೆ ಮಾಡುವುದು.
- ಪ್ರಜಾಪ್ರಭುತ್ವದ ಆಡಳಿತಕ್ಕೆ ಮಾರ್ಗದರ್ಶನ ಮಾಡುವುದು.

**ಪ್ರಾಮುಖ್ಯತೆ**

- ಇದು ಅನೇಕ ವಿಷಯಗಳನ್ನು ಒಳಗೊಂಡ ಜ್ಞಾನ ಭಂಡಾರವಾಗಿದೆ.
- ಉದಾ :- ಇತಿಹಾಸ ,ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಪೌರನೀತಿ ಇತ್ಯಾದಿ
- ಮಾನವ ಮತ್ತು ಸಮಾಜ ಪರಿಸರದ ನಡುವಿನ ಸಂಬಂಧ ತಿಳಿಯಲು ಸಹಾಯಕ.
- ಮಾನವನ ಉಗಮ ,ಸಾಮಾಜಿಕ ಸಂಘಟನೆ, ಹಾಗೂ ವಿಕಾಸದ ಬಗ್ಗೆ ತಿಳಿಸುವುದು.
- ವಿದ್ಯಾರ್ಥಿಗಳಿಗೆ ಪ್ರಾಚೀನ ಹಾಗೂ ಸಮಕಾಲೀನ ಸಮಾಜದ ಸನ್ನಿವೇಶ ಗಳನ್ನು ಒದಗಿಸಿಕೊಡುವುದು.ಇತ್ಯಾದಿ

JSS CAREER ACADEMY

## ಇತಿಹಾಸ ಪರಿಚಯ

- ಇತಿಹಾಸ ವಿಷಯವನ್ನು ಮಾನವಿಕ ವಿಷಯಗಳ ತಾಯಿ ಅಥವಾ ರಾಣಿ ಎಂದು ಕರೆಯಲಾಗುತ್ತದೆ.
- ಇತಿಹಾಸವು ಮಾನವನ ಜೀವನದ ಅವಿಭಾಜ್ಯ ಅಂಗವೆಂದು ಹೇಳಬಹುದು. ಈ ವಿಷಯದ ಮಹತ್ವ ವನ್ನು ಭಾರತದ ಸಂವಿಧಾನ ಶಿಲ್ಪಿ ಹಾಗೂ ದಲಿತರ ಬದುಕಿಗೆ ಬೆಳಕಾದ ಡಾ ಬಿ ಆರ್ ಅಂಬೇಡ್ಕರ್ ಅವರು " ಇತಿಹಾಸ ತಿಳಿಯದವನು ಇತಿಹಾಸ ನಿರ್ಮಿಸಲಾರ" ಎಂದು ಹೇಳಿದ್ದಾರೆ.

## ಇತಿಹಾಸದ ಅರ್ಥ ;-

- ಇತಿಹಾಸ ಎಂಬ ಕನ್ನಡ ಪದವು ಆಂಗ್ಲ ಭಾಷೆಯ " ಹಿಸ್ಟೋರಿ" ಎಂಬ ಗ್ರೀಕ್ ಭಾಷೆಯಿಂದ ಬಂದಿದೆ, ಈಗೇಂದರೆ ವಿಚಾರಣೆ ಅಥವಾ ತನಿಖೆ ಎಂದರ್ಥ ಇದೆ.
- ಸಂಸ್ಕೃತದಲ್ಲಿ ಇತಿಹಾಸವೆಂದರೆ ಇತಿ+ಹ+ಅಸ ಹೀಗೆ ಇತ್ತು ಅಥವಾ ಖಚಿತವಾಗಿ ಘಟಿಸಿದ ಅಥವಾ ನಡೆದ ಘಟನೆಗಳೆಂದರ್ಥ
- ಇತಿಹಾಸದ ಮೂಲ ಉದ್ದೇಶ :- ಸತ್ಯಾನ್ವೇಷಣೆ ಮಾಡುವುದು.
- ಇತಿಹಾಸದ ಪಿತಾಮಹ :- ಹೆರೋಡೋಟಸ್ (ಗ್ರೀಕ್) (ಕೃತಿ :; ದಿ ಹಿಸ್ಟ್ರಿ ಆಪ್ ಪರ್ಷಿಯನ್ ವಾರ್:- ಇದು ಇತಿಹಾಸದ ಮೊದಲ ಕೃತಿ ಆಗಿದೆ.)
- ಸಾಮಾನ್ಯವಾಗಿ ಇತಿಹಾಸವೆಂದರೆ ಗತಕಾಲದಲ್ಲಿ ನಡೆದ ಘಟನೆಗಳನ್ನು ತಿಳಿಯುವುದು ಆಗಿದೆ.

ವ್ಯಾಖ್ಯೆಗಳು:-

- ಹೆರೋಡೋಟಸ್ ಪ್ರಕಾರ :- ಮುಂದಿನ ಪೀಳಿಗೆಗೆ ನೆನಪಿಡಬೇಕಾದ ಮಹಾವೀರರ ಕಥೆ ಅಥವಾ ಮಹತ್ವ ಪೂರ್ಣವಾದ ಘಟನೆಗಳೇ ಇತಿಹಾಸ
- ಸಂತ ಆಗಸ್ಟೈನ್ ಪ್ರಕಾರ :- ಇತಿಹಾಸವು ದೇವರು ಮತ್ತು ಸೈತಾನನ ನಡುವಿನ ಸಂಘರ್ಷದ ಕಥೆಯೇ ಇತಿಹಾಸ(ಕೃತಿ :- ದ ಸಿಟಿ ಆಫ್ ಗಾಡ್)
- ಕಾರ್ಲ್ ಮಾರ್ಕ್ಸ್ :- ಉಳ್ಳವರು ಮತ್ತು ಇಲ್ಲದವರ ನಡುವಿನ ಸಂಘರ್ಷ ಇತಿಹಾಸ
- ಜೇ ಬಿ ಬ್ಯೂರಿ :- ಇತಿಹಾಸವು ಒಂದು ವಿಜ್ಞಾನ ಹೆಚ್ಚುವಲ್ಲ ,ಕಡಿಮೆಯೂ ಅಲ್ಲ.
- ಇವರೇ ಹೇಳುವಂತೆ ಇತಿಹಾಸವು ಒಂದು ಪ್ರಾಚೀನ ಕಲೆ ಮತ್ತು ವಿಜ್ಞಾನವಾಗಲು ಹೊರಟಿರುವ ಇತ್ತೀಚಿನ ಅಕ್ಷಾಂಕ್ಷಿ ಎಂದು ವಿಷಯವನ್ನು ವ್ಯಕ್ತ ಪಡಿಸಿದ್ದಾರೆ.

JS CAREER ACADEMY

- ಅರ್ನಾಲ್ಡ್ ಟಾಯ್ನಬಿ ;- ನಾಗರಿಕ ಕಥೆಗಳ ಏಳು ಬೀಳಿನ ಕಥೆಯೇ ಇತಿಹಾಸ
- 1902 ರಂದು ಜೆ ಬಿ ಬ್ಯೂರಿ ಅವರು ಇತಿಹಾಸವು ವಿಜ್ಞಾನ ಎಂದು ಕರೆದಿದ್ದಾರೆ.
- 19 ನೇ ಶತಮಾನದಲ್ಲಿ ರಾಂಕೆ ಎಂಬುವರಿಂದ ಇತಿಹಾಸವು ನಿಜವಾದ ಇತಿಹಾಸದ ಪ್ರಗತಿ ಕಂಡಿತು.(ಜರ್ಮನ್)
- ಇತಿಹಾಸವು ವರ್ತಮಾನ ಹಾಗೂ ಭೂತಕಾಲದ ನಡುವಿನ ಕೊಂಡಿಯಾಗಿ ಕಾರ್ಯನಿರ್ವಹಣೆ ಮಾಡುವುದು.
- ಇತಿಹಾಸಕ್ಕೆ ಸ್ಥಳ, ಕಾಲ, ವಿಚಾರಗಳೆಂಬ ದಿಶೆಗಳುಂಟು.
- ಚೀನಾವನ್ನು ಇತಿಹಾಸಕಾರರ ನಂದನವನ ಎಂದು ಕರೆಯಲಾಗುತ್ತದೆ.

ಇತಿಹಾಸದ ಸ್ವರೂಪ ;-

- ಇತಿಹಾಸ ಮಾನವನ ಕೇಂದ್ರ ಬಿಂದು

ರವೀಂದ್ರನಾಥ ಟ್ಯಾಗೋರ್ ಹೇಳುವಂತೆ ಇರುವುದು ಒಂದೇ ಇತಿಹಾಸ ಅದೇ ಮಾನವ ಇತಿಹಾಸ.

- ಮಾನವ ಸರ್ವತೋಮುಖ ಜೀವನ ಹೇಗೆ ಸಾಗಿ ಬಂದಿದೆ? ಎಂಬುದನ್ನು ಅಭ್ಯಾಸ ಮಾಡುವುದು.

ಉದಾ :- ಅವನ ನೋವು ನಲಿವು ,ಸೋಲು ಗೆಲವು ಇತ್ಯಾದಿ

- ಹಿಂದಿನ ನಾಗರಿಕರ ಜೀವನ ವ್ಯವಸ್ಥೆ, ಅವರ ತ್ಯಾಗ ಮತ್ತು ಅವರ ಬಲಿದಾನವನ್ನು ಪರಿಚಯ ಮಾಡಿಕೊಡುವುದು.
- ಇತಿಹಾಸವು ವಿವಿಧ ಕಾಲಘಟ್ಟದ ಮಾನವನ ಜೀವನದ ಕುರಿತು ಅಧ್ಯಯನ ಮಾಡುವುದು.
- ಇತಿಹಾಸವು ಐತಿಹಾಸಿಕ ಘಟನೆಗಳ ನಡುವಿನ ಸಂಬಂಧ ಅಥವಾ ಅಂತರ ಸಂಬಂಧ ತಿಳಿಯುವುದಕ್ಕೆ ಸಹಾಯಕ

ಇತಿಹಾಸದ ಪ್ರಾಮುಖ್ಯತೆ;-

- **ಇತಿಹಾಸವು ಗತಕಾಲದ ಘಟನೆಯನ್ನು ನೆನಪಿಸುತ್ತದೆ.**

ಒಂದು ದೇಶದ ಗತಕಾಲವು ಒಂದು ವ್ಯಕ್ತಿಯ ಸ್ಮೃತಿಯಿದ್ದಂತೆ ಸ್ಮೃತಿ ಹೋದರೆ ಅದರೊಂದಿಗೆ ಚಿತ್ತಸ್ವಾಸ್ಥ್ಯವೂ ಹೋಗುತ್ತದೆ ಎಂದು ಹೇಳಿದವರು ವಿಲ್ ಡುರೆಂಟ್

- ವ್ಯಕ್ತಿಗೆ ನೆನಪು ಇದ್ದಂತೆ ಮನುಕುಲಕ್ಕೆ ಇತಿಹಾಸ ಎಂದು ಹೇಳಿದವರು ಹೇಸ್ ಮತ್ತು ಮೂನ್
- **ಪ್ರಸ್ತುತ ಜನಾಂಗಕ್ಕೆ ಧಾರ್ಮಿಕ ಸಹಿಷ್ಣುತೆ ತಿಳಿಸುವುದು.**

JSS CAREER ACADEMY

ಭಾರತದ ಧರ್ಮ ಸಹಿಷ್ಣುತೆ ಮಾನವ ಜನಾಂಗದ ಉಳಿವಿಗೆ ಏಕೈಕ ಮಾರ್ಗವಾಗಿದೆ ಎಂದು ಹೇಳಿದವರು ಅರ್ನಾಲ್ಡ್ ಟಾಯ್ನಬಿ

- **ಸ್ಫೂರ್ತಿಯ ಮೂಲವಾಗಿದೆ.**
- ಮಹಾಪುರುಷರು ಇಂದಿಲ್ಲ ಆದರೆ ಅವರ ಜೀವನ ಚರಿತ್ರೆ ಮಾತ್ರ ಸ್ಫೂರ್ತಿಯಾಗಿ ಉಳಿದಿವೆ ಎಂದು ಹೇಳಿದವರು **ಥಾಮಸ್ ಕಾರ್ಲೈಲ್**
- **ಇತಿಹಾಸವು ವಿದ್ಯಾರ್ಥಿಯಲ್ಲಿ ದೇಶಾಭಿಮಾನ ಮೂಡಿಸುವುದು.**
- **ಇತಿಹಾಸವು ಸಮಾಜ ವಿಜ್ಞಾನದ ಪ್ರಯೋಗ ಶಾಲೆ ಆಗಿದೆ.**
- **ಇತಿಹಾಸವು ಉದಾತ್ತ ಧೇಯ್ಯಗಳನ್ನು ಬೆಳೆಸುತ್ತದೆ**

**ಇತಿಹಾಸವು ಉದಾತ್ತ ಧ್ಯೇಯಗಳ ಗಣಿಯಾಗಿದೆ ಮತ್ತು** ಸನ್ ಮಾರ್ಗ ತೋರುವ ದಾರಿದೀಪವಾಗಿದೆ ಎಂದು ಹೇಳಿದವರ :- **ಜಾರ್ಜ್ ಸಂತಯನ**

- ನಮ್ಮ ದೃಷ್ಟಿ ಕೋನ ವಿವರಿಸುವುದು.
- ಇತಿಹಾಸವು ವಿಶ್ವ ಶಾಂತಿಯನ್ನು ಬೆಳೆಸುವುದು.
- ಇತಿಹಾಸವು ಸ್ಪರ್ಧಾತ್ಮಕ  ಪರೀಕ್ಷೆಗೆ ಉಪಯುಕ್ತ ಆಗಿದೆ.
- ಇತಿಹಾಸವು ವ್ಯಕ್ತಿಯಲ್ಲಿರುವ ಪೂರ್ವಗ್ರಹ ವಿಷಯುಗಳನ್ನು ಹೊಗಲಾಡಿಸುವುದ.
- ರಾಷ್ಟ್ರೀಯ ಭಾವೈಕ್ಯತೆ ಮೂಡಿಸುವುದು.
- ಇತಿಹಾಸದಿಂದ ಕಾಲಜ್ಞಾನ ಉಂಟಾಗುವುದು.
- ಇತಿಹಾಸವು ಮಾನವರನ್ನು ಬುದ್ಧಿವಂತರನ್ನಾಗಿ ಮಾಡುವುದು.(ಹೇಳಿದವರು- ಬೇಕನ್)
- ಇತಿಹಾಸವು ರಾಜಕೀಯ, ಆರ್ಥಿಕ,  ಸಾಮಾಜಿಕ ,ಸಾಂಸ್ಕೃತಿಕ, ಧಾರ್ಮಿಕ ,ಆಡಳಿತ, ಕಲೆ ,ಸಾಹಿತ್ಯ ವಿಜ್ಞಾನ ಮುಂತಾದವುಗಳ ಕುರಿತು ಮಾಹಿತಿ ನೀಡುವುದು.
- ಇದು ಮಹಾನ್ ವ್ಯಕ್ತಿಗಳ ಆದರ್ಶ, ಸಾಹಸ ,ಅಭ್ಯಾಸ ಮುಂತಾದವುಗಳನ್ನು ತಿಳಿವುದಕ್ಕೆ ಸಹಾಯಕ.
- ಇದು ಭೂತಕಾಲ,ವರ್ತಮಾನ ಕಾಲ, ಭವಿಷ್ಯತ್ ಕಾಲದ ಕೊಂಡಿಯಾಗಿದೆ.
- **ಫ್ರೀಮನ್ ಅವರು :- ಭೂತಕಾಲದ ರಾಜಕೀಯ ವಿಷಯವನ್ನು ವರ್ತಮಾನ ಕಾಲದ ಇತಿಹಾಸ ಇಂದಿನ ರಾಜಕೀಯವೇ ಭವಿಷ್ಯತ್ತಿನ ಇತಿಹಾಸ**
- ಇತಿಹಾಸವು ರಾಷ್ಟ್ರ ಭಕ್ತಿಯನ್ನು ಬೆಳಸುವುದು.

JSS CAREER ACADEMY

ಉದಾ :- ಮಹಾತ್ಮ ಗಾಂಧಿ, ಭಗತ್ ಸಿಂಗ್ ,ಆಜಾದ್ ಚಂದ್ರಶೇಖರ್ ಮುಂತಾದ ನಾಯಕರ ಸ್ವಾತಂತ್ರ್ಯ ಹೋರಾಟದ ಜೀವನದಿಂದ ರಾಷ್ಟ್ರ ಭಕ್ತಿ ಬೆಳೆಯುವುದು.

- ಇದು ಮಾನವರಲ್ಲಿ ಸಹಬಾಳ್ವೆ ಹಾಗೂ ನೈತಿಕಯನ್ನು ಬೆಳೆಸುವುದು

ಇತಿಹಾಸ ಒಂದು ವಿಜ್ಞಾನ ವಲ್ಲ ಎನ್ನುವುದಕ್ಕೆ ಕಾರಣಗಳು;-

- ವಿಜ್ಞಾನ ಎಂದರೆ :- ಸತ್ಯವನ್ನು ಕಂಡು ಹಿಡಿಯುವುದು (ಸತ್ಯ ಅನ್ವೇಷಣೆ)

**ಇದಕ್ಕೆ ಪ್ರಮುಖ ಕಾರಣಗಳು**

- ಇತಿಹಾಸದಲ್ಲಿ ಸಾಮಾನ್ಯೀಕರಣ ಮಾಡಲಾಗುವುದಿಲ್ಲ
- ಇಲ್ಲಿ ಸಾರ್ವತ್ರಿಕ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ.
- ಇತಿಹಾಸ ವನ್ನು ಪ್ರಯೋಗಕ್ಕೆ ಒಳಪಡಿಸಲು ಹಾಗೂ ತಾಳೆ ನೋಡಲು ಬರುವುದಿಲ್ಲ.
- ಇಲ್ಲಿ ವೈಜ್ಞಾನಿಕ ನಿಯಮಗಳನ್ನು ರಚನೆ ಮಾಡುವುದಕ್ಕೆ ಸಾಧ್ಯವಿಲ್ಲ.

ಇತಿಹಾಸವು ವಿಜ್ಞಾನವೇ?

- ಇತಿಹಾಸವನ್ನು ಚರಿತ್ರೆಯ ವಿಜ್ಞಾನದ ಭಾಗವೆಂದು ಕರೆದವರು :- ಎಡ್ವರ್ಡ್ ಮೇಯರ್
- ಇತಿಹಾಸವನ್ನು ಒಂದು ವಿಜ್ಞಾನ ಎಂದು ಕರೆದವರು :- **ಹಕ್ಸಲೀ ಮತ್ತು ಟೆಗ್ಗಾರ್ಟ**

**ಕಾರಣಗಳು**

- ಸತ್ಯಾನ್ವೇಷಣೆ ನಡೆಯುವುದು.
- ಸಾಕ್ಷ್ಯಾಧಾರಗಳ ಮೇಲೆ ವೈಜ್ಞಾನಿಕ ಅಧ್ಯಯನ,ಕ್ರಮಬದ್ಧವಾದ ಪರಿಶೋಧನೆ ಇತ್ಯಾದಿ ನಡೆಯುವುದು.
- **ಡೇವಿಡ್ ಬ್ಯುರಿ ಅವರು :- ಚರಿತ್ರೆಯು ಸ್ವಲ್ಪವು ಅನುಮಾನವಿಲ್ಲದ ಸಂಪೂರ್ಣ ವಿಜ್ಞಾನ ಎಂದು ಹೇಳಿದ್ದಾರೆ.**

ಇತಿಹಾಸ ಕಲೆ

- ಕಲೆ ಎಂದರೆ :- ಮನುಕುಲದ ಸಮಸ್ಯೆಗಳನ್ನು ಬಗೆಹರಿಸುವ ,ಅನ್ವಯಿಸುವ ಜ್ಞಾನವೇ ಕಲೆ
- ಗತಕಾಲದ ಘಟನೆಗಳ ಆಧಾರದ ಮೇಲೆ ಪ್ರಸ್ತುತ ಸಮಸ್ಯೆಗಳನ್ನು ಬಗೆಹರಿಸುವುದರಿಂದ ಇದೊಂದು ಕಲೆಯಾಗಿದೆ.
- ಇತಿಹಾಸಕರನಿಗೆ ಐತಿಹಾಸಿಕ ಸಂಗತಿಗಳು ಅಸ್ಥಿಪಂಜರ ಇದ್ದಂತೆ ಅದಕ್ಕೆ ಜೀವಕಳೆ ಬರಬೇಕದಾರೆ ಇತಿಹಾಸಕರನಿಗೆ ಕಾಲ್ಪನಿಕ ಶಕ್ತಿ ಬೇಕಾಗುವುದು

JS CAREER ACADEMY

- **ವಿ ಡಿ ಘಾಟೆ :; ಕಲ್ಪನಾಶಕ್ತಿ ,ಸಹಾನುಭೂತಿ ಅಂತಹ ಶ್ರೇಷ್ಠ ಸಾಹಿತ್ಯಕ ಗುಣಗಳನ್ನು ಹೊಂದಿರುವ ಪ್ರತಿಭಾವಂತ ಇತಿಹಾಸಕಾರನು ಮಾತ್ರ ಇತಿಹಾಸವನ್ನು ಜೀವಂತವಾಗಿಸಿಬಲ್ಲನು , ಅವನು ಕೊಡುವ ಗತಕಾಲದ ಜೀವಂತ ವ್ಯಕ್ತಿಗಳ ಸ್ಪಷ್ಟ ಚಿತ್ರವು ಇತಿಹಾಸವನ್ನು ಒಂದು ಕಲೆಯನ್ನಾಗಿ ಮಾಡಿದೆ.**

ಕೋಲಿಂಗ್ ವುಡ್ ಅವರ ಪ್ರಕಾರ

ಇತಿಹಾಸ ವಿಷಯವನ್ನು **ಇತಿಹಾಸ ತಜ್ಞ ಅಥವಾ ಶಿಕ್ಷಕರು ಎ**ರಡು ದೃಷ್ಟಿ ಕೋನದಿಂದ ನೋಡುವವರು.ಅವುಗಳೆಂದರೆ

- **ಆಂತರಿಕ ದೃಷ್ಟಿಕೋನ ;-** ಐತಿಹಾಸಿಕ ಘಟನೆಯಲ್ಲಿ ಭಾಗವಹಿಸಿದ ವ್ಯಕ್ತಿ ಆಲೋಚನೆ ,ಭಾವನೆ ತಿಳಿಯುವುದು.
- **ಬಾಹ್ಯ ದೃಷ್ಟಿಕೋನ :-** ಇಲ್ಲಿ ಐತಿಹಾಸಿಕ ಘಟನೆಯಲ್ಲಿ ಎಲ್ಲಿ? ಯಾವಾಗ? ಹೇಗೆ? ಏಕೆ? ಏನು ? ಇತ್ಯಾದಿ ತಿಳಿಯುವುದು.
- ಒಟ್ಟಾರೆಯಾಗಿ ಇತಿಹಾಸವನ್ನು ಒಂದು ವಿಜ್ಞಾನ ಅಥವಾ ಕಲೆ ಎಂದು ಕರೆಯಲಾಗುತ್ತದೆ.

**ಇತಿಹಾಸಕ್ಕೆ ಒಟ್ಟು ನಾಲ್ಕು ಆಯಾಮಗಳಿವೆ**

- ಸ್ಥಳ
- ಜನತೆ
- ಕಾಲ
- ಅಭಿಪ್ರಾಯ

**ಇತಿಹಾಸದ ವ್ಯಾಪ್ತಿಯ ವಿಸ್ತಾರ.**

- ಸ್ಥಳೀಯ ಇತಿಹಾಸದಿಂದ
- ರಾಷ್ಟ್ರೀಯ ಇತಿಹಾಸದಿಂದ
- ಅಂತರರಾಷ್ಟ್ರೀಯ ಇತಿಹಾಸ ಮಟ್ಟಕ್ಕೆ ಇದು ವಿಸ್ತಾರವಾಗಿದೆ

**ಇತಿಹಾಸದ ವರ್ಗೀಕರಣ :-**

**ಜಾಗತಿಕ ಇತಿಹಾಸ :-**

JS CAREER ACADEMY

ಪ್ರಪಂಚದಲ್ಲಿ ಮಾನವನ ಉಗಮದಿಂದ ಇಲ್ಲಿತನಕ ಈ ಭೂಮಿಯ ಮೇಲಿನ **ಘಟನೆಯ** ಕಥೆಗಳೇ ಜಾಗತಿಕ ಇತಿಹಾಸಯಾಗಿದೆ.

- ಇದು ಕೇವಲ ಒಂದು ದೇಶಕ್ಕೆ ಸೀಮಿತವಾಗಿರದೆ ಇಡಿ ಭೂ ಮಂಡಲದ ಇತಿಹಾಸವಾಗಿದೆ.
- ಮಕ್ಕಳು ಇತಿಹಾಸ ಕಲಿಯುವುದಕ್ಕೆ ಗವಿ ಮನುಷ್ಯನಿಂದ ಪ್ರಾರಂಭಿಸಿ ತಮ್ಮ ದೇಶದ ಇತಿಹಾಸ ಕಲಿಯಬೇಕು ಎನ್ನುವುದು ಮನಃಶಾಸ್ತ್ರದ ಪ್ರಕಾರ ಸರಿಯಾಗಿದೆ.

**ರಾಷ್ಟ್ರೀಯ ಇತಿಹಾಸ**

ಪ್ರತಿಯೊಂದು ದೇಶಕ್ಕೆ ತನ್ನದೆಯಾದ ಇತಿಹಾಸ ಇರುವುದು ಇದನ್ನೇ ರಾಷ್ಟ್ರೀಯ ಇತಿಹಾಸ ಎಂದು ಕರೆಯಲಾಗುತ್ತದೆ.

ಉದಾ : ಭಾರತದ ಇತಿಹಾಸ ,ಪ್ರಾನ್ಸ್ ಇತಿಹಾಸ ,ಯುರೋಪಿನ್ ಇತಿಹಾಸ

- **V A** ಸ್ಮಿತ್ ಅವರು “ಭಾರತವು ಅಸಂಖ್ಯಾತ ಮಾನವ ಕುಲವನ್ನು ಅಧ್ಯಯನ ಮಾಡುಬಹುದಾದ ಮಾನವಶಾಸ್ತ್ರದ ಪ್ರಯೋಗಾಲಯ ಆಗಿದೆ” ಎಂದು ಹೇಳಿದ್ದಾರೆ.

ಪ್ರಾದೇಶಿಕ ಇತಿಹಾಸ :-

ಪ್ರತಿಯೊಂದು ದೇಶವು ತನ್ನದೇಯಾದ ರಾಜ್ಯಗಳನ್ನು ಹೊಂದಿದೆ. ಆ ರಾಜ್ಯಗಳು ಹೊಂದಿರುವ ಇತಿಹಾಸವೇ ಪ್ರಾದೇಶಿಕ ಇತಿಹಾಸ

ಉದಾ :- ಕರ್ನಾಟಕ ಇತಿಹಾಸ,ತಮಿಳನಾಡು ಇತಿಹಾಸ

**ಸ್ಥಳೀಯ ಇತಿಹಾಸ ;-**

- ಸ್ಥಳೀಯ ಇತಿಹಾಸವು ಇತಿಹಾಸದ ಮನೆಯ ಹೆಬ್ಬಾಗಿಲು ಅಥವಾ ಮನೆಯ ಬಾಗಿಲು ಆಗಿದೆ.
- ಇದಕ್ಕೆ ಸ್ಥಾನಿಕ ಇತಿಹಾಸ ಹಾಗೂ ಇತಿಹಾಸದ ಅಧ್ಯಯನದ ರಾಜ್ಯಮಾರ್ಗ ಅಥವಾ ಹೆದ್ದಾರಿ ಎಂದು ಸಹ ಕರೆಯುತ್ತಾರೆ.

**ಸ್ಥಳೀಯ ಇತಿಹಾಸ ಎಂದರೆ** :- ವಿದ್ಯಾರ್ಥಿಗೆ ಅಥವಾ ವ್ಯಕ್ತಿಗೆ ಪರಿಚಯ ಇರುವ ಸ್ಥಳೀಯ (ಹಳ್ಳಿ ಅಥವಾ ಪಟ್ಟಣ) ಐತಿಹಾಸಿಕ ಪ್ರಮುಖ ವಸ್ತುವಿಷಯ ಮತ್ತು ಸ್ಥಳಗಳಾಗಿವೆ.

ಉದಾ :- ಬೆಲೂರು ಇತಿಹಾಸ , ವಿಜಯಪುರ ಇತಿಹಾಸ , ಪಟ್ಟದಕಲ್ಲು ಇತಿಹಾಸ,ಮುದ್ದೇಬಿಹಾಳ (ನಗರ ಇತಿಹಾಸ)

- ಇದು ವಿದ್ಯಾರ್ಥಿಯಲ್ಲಿ ಪೂರ್ವಜರ ಸಂಸ್ಕೃತಿ, ಗೌರವ , ಮಾನವೀಯ ಮೌಲ್ಯಗಳ ಬಗ್ಗೆ ಗೌರವದ ಮನೋಭಾವನೆ ಮೂಡುವುದು.

JSS CAREER ACADEMY

## ಇತಿಹಾಸದ ಅಧ್ಯಯನ ಮಾಡುವುದರಿಂದ ಮಕ್ಕಳಿಗೆ ಆಗುವ ಲಾಭಗಳು

- ರಾಷ್ಟ್ರೀಯ ಭಾವೈಕ್ಯತೆ ಮೂಡುವುದು
- ಇತಿಹಾಸದ ಪುನರ ರಚನೆ ಸಾಧ್ಯ ಇದೆ.
- ಸ್ಥಳೀಯ ಪದ್ಧತಿ ಹಾಗೂ ಸಂಪ್ರದಾಯದ ಗೌರವ ಮೂಡುವುದು.
- ಕಲಿಕಾ ಪ್ರೇರಣೆ ಆಗುತ್ತದೆ.
- ವಿದ್ಯಾರ್ಥಿಯಲ್ಲಿ ಐತಿಹಾಸಿಕ ಕಲ್ಪಾನಶಕ್ತಿ ಹಾಗೂ ಮನೋಭಾವ ಮೂಡುವುದು.
- ಸ್ಥಳೀಯ ಇತಿಹಾಸ ಪಠ್ಯಪೂರಕ ಚಟುವಟಿಕೆಗಳಿಗೆ ಪೂರಕ ಆಗಿದೆ.
- ಸಂಸ್ಕೃತಿ ತಿರುಳು ತಿಳಿಯುವುದು
- ಕಾಲ ಮತ್ತು ಸ್ಥಳ ಪ್ರಜ್ಞೆ ಉಂಟಾಗುವುದು.
- ರಾಷ್ಟ್ರೀಯ ಅಭಿವೃದ್ಧಿಗೆ ವಿವಿಧ ಜನಾಂಗಗಳು ನೀಡಿದ ಕೊಡುಗೆ ಗೊತ್ತಾಗುವುದು.
- ವಿಶಾಲ ಮನೋಭಾವ ಮೂಡುವುದು.

# ಭೂಗೋಳಶಾಸ್ತ್ರ

ಭೂಗೋಳ ಶಾಸ್ತ್ರ ಪದವು ಜಿಯೋಗ್ರಾಫಿ ಎಂಬ ಆಂಗ್ಲ ಭಾಷೆಯ ಸಮಾನ.ಇದು ಮೂಲತಃ ಗ್ರೀಕ್ ಭಾಷೆಯ ಜಿಯೋ ಮತ್ತು ಗ್ರಾಫಿಯಾ ಎಂಬೆರಡು ಪದಗಳಿಂದ ಬಂದಿದೆ. ಈಗೇಂದರೆ

- ಜಿಯೋ ಎಂದರೆ :- ಭೂಮಿ
- ಗ್ರಾಫಿಯಾ ಎಂದರೆ :- ಅಧ್ಯಯನ / ವಿಜ್ಞಾನ /ಶಾಸ್ತ್ರ ಎಂದರ್ಥ

ಅಂದರೆ ಭೂಮಿಯ ಕುರಿತು ಅಧ್ಯಯನ ಮಾಡುವುದಾಗಿದೆ.

- ಜಿಯೋಗ್ರಾಫಿಯ ಎಂಬ ಪದವನ್ನು ಮೊದಲ ಬಾರಿಗೆ ಪರಿಚಯ ಅಥವಾ ಬಳಸಿದ ಗ್ರೀಕ್ ತಜ್ಞೆ ಎರಟಾಸ್ತನಿಸ್ ಆಗಾಗಿ ಇವರನ್ನು **ಭೂಗೋಳ ಶಾಸ್ತ್ರದ ಪಿತಮಹ ಎಂದು ಕರೆಯಲಾಗುತ್ತದೆ**

ವ್ಯಾಖ್ಯೆಗಳು

ಬ್ಯಾಕೋವ್ಸ್ :- ಇದು ಮಾನವನ ಸಸ್ಯವರ್ಗ ಹಾಗೂ ಪ್ರಾಣಿಗಳೊಡನೆ ಹೊಂದಿರುವ ಸಂಬಂಧ ಅಧ್ಯಯನ ಮಾಡುವುದು ಎಂದು ಹೇಳಿದ್ದಾರೆ.

ಬ್ಲಾಚೆ :- ಭೂಗೋಳ ಶಾಸ್ತ್ರ ಸ್ಥಳ ಕುರಿತು ಅಧ್ಯಯನ ಮಾಡುವುದು.

ಬೌಮನ್ :- ಏನು ? ಎಲ್ಲಿ ? ಏಕೆ ? ಯಾವುದರಿಂದ ಮಾಡಲ್ಪಟ್ಟಿದೆ ಎಂದು ಅಧ್ಯಯನ ಮಾಡುವುದು.

ಮಾರ್ಹೆ ಪ್ರಕಾರ :- ಮಾನವನ ಮನೆಯಾದ ಭೂಮಿಯ ಬಗ್ಗೆ ಅಧ್ಯಯನ ಮಾಡುವುದು

JSS CAREER ACADEMY

## ಭೂಗೋಳ ಶಾಸ್ತ್ರದ ಸ್ವರೂಪ

- ಈ ವಿಷಯವನ್ನು ಎಲ್ಲಾ ವಿಜ್ಞಾನಗಳ ತಾಯಿ ಎಂದು ಕರೆಯಲಾಗುತ್ತದೆ
- ಭೂಗೋಳ ಶಾಸ್ತ್ರವು ಒಂದು ಪರಿಸರ ವಿಜ್ಞಾನ ಆಗಿದೆ.

## ಭೂಗೋಳದ ಪ್ರಕಾರಗಳು

ಪ್ರಾಕೃತಿಕ ಪರಿಸರ :

- ಇದು ಭೂಮಿಯಲ್ಲಿನ ಗಿಡ,ಮರ ಕಲ್ಲು ಬಂಡಿ,ಮೈದಾನ ,ಖನಿಜ, ಪ್ರಸ್ಥಭೂಮಿ, ಮಳೆ, ಬೆಳೆ,ಮಣ್ಣು,ನೀರು ಇತ್ಯಾದಿಗಳ ಕುರಿತು ಅಧ್ಯಯನ ಮಾಡುವುದು.ಇದು ಭೂ ಹಂಚಿಕೆ ಕುರಿತು ಅಧ್ಯಯನ ಮಾಡವುದು ಆ ಹಂಚಿಕೆಯನ್ನು ಭೂಪಟದ ಸಹಾಯದಿಂದ ತಿಳಿಯಬಹುದು. ಉದಾ:ಹವಾಮಾನ,ಸಾಗರ,ನದಿ,ಮಣ್ಣು,ಶಿಲಾಗೋಳ,ವಾಯುಗೋಳ,ಇತ್ಯಾದಿ ಇದರಲ್ಲಿ ಎರಡು ಪ್ರಕಾರಗಳಿವೆ

ಅ) ಜೈವಿಕ ಪರಿಸರ

**ಆ) ಅಜೈವಿಕ ಪರಿಸರ**

**ಸಾಂಸ್ಕೃತಿಕ ಪರಿಸರ;-** ಇದು ಮಾನವನಿಂದ ನಿರ್ಮಿತವಾದ ಪರಿಸರ ಆಗಿದೆ. ಅರಿಸ್ಟಾಟಲ್ ಹೇಳುವಂತೆ ಮಾನವ ಸಂಘ ಅಥವಾ ಮಾನವ ಜೀವಿಯಾಗಿದ್ದು ಅತನ ,ಕಲೆ,ಸಾಹಿತ್ಯ, ಸಾರಿಗೆ,ಸಂಪರ್ಕ,ಸರ್ಕಾರ ಇತ್ಯಾದಿಗಳ ಕುರಿತು ಅಧ್ಯಯನ ಮಾಡುವುದು.

**ಭೌತಿಕ ವಿಜ್ಞಾನ ;-** ಭೂರಚನೆ ,ಶಿಲೆಗಳ, ಖನಿಜಗಳು ಭೂಕಂಪ,ಜ್ವಾಲಾಮುಖಿ ಖಗೋಳಶಾಸ್ತ್ರದ ಬಗ್ಗೆ ಅಧ್ಯಯನ ಮಾಡುವುದು.

## ಭೂಗೋಳಶಾಸ್ತ್ರ ಪ್ರಾಮುಖ್ಯತೆ

- ಬೇರೆ ಬೇರೆ ದೇಶಗಳ ಜನರ ಜೀವನ ಮತ್ತು ಸಂಸ್ಕೃತಿಯನ್ನು ಅರಿಯಲು ಸಹಾಯಕ
- ಬೇರೆ ಬೇರೆ ದೇಶದ ಜನರ ಆರ್ಥಿಕ ಬೇಡಿಕೆಗಳನ್ನು ತಿಳಿಯಲು ಸಹಾಯಕ.
- ಪರಿಸರದ ಬಗ್ಗೆ ಅರಿವು ಹಾಗೂ ಅದಕ್ಕೆ ಅನುಗುಣವಾಗಿ ಜೀವನ ರೂಪಿಸಿಕೊಳ್ಳಲು ಸಹಾಯಕ.
- ದೇಶದ ಭೌಗೋಳಿಕ. ಸ್ಥಿತಿಗತಿಗಳ ಬಗ್ಗೆ ಸರಿಯಾದ ಜ್ಞಾನ ಒದಗಿಸುವುದು.

JSS CAREER ACADEMY

- ಅಂತರರಾಷ್ಟ್ರೀಯ ಗಡಿಯ ಬಗ್ಗೆ ಮತ್ತು ತಮ್ಮ ನೆರೆಹೊರೆ ರಾಷ್ಟ್ರಗಳ ಭೂಗೋಳದ ಮಾಹಿತಿ ನೀಡುವುದು.
- ಪ್ರಾದೇಶಿಕ ಯೋಜನೆ ರೂಪಿಸಿಲು ಸಹಾಯಕ.
- ಆರ್ಥಿಕ ಸಂಪನ್ಮೂಲಗಳಾದ ಖನಿಜ ,ಕಲ್ಲಿದ್ದಲು, ಪೆಟ್ರೋಲಿಯಂ ಇತ್ಯಾದಿ ಸಂರಕ್ಷಣೆ ಸಹಾಯಕ.
- ಸಾರಿಗೆ ಸಂಪರ್ಕ ಅಭಿವೃದ್ಧಿ ಆಗುವುದು.

## ಪೌರನೀತಿ

ಪೌರನೀತಿ ವಿಷಯವು ವಿದ್ಯಾರ್ಥಿಗಳಲ್ಲಿರುವ ಸ್ವಾರ್ಥವನ್ನು ಧಮನ ಮಾಡಿ ಸರ್ವರ ಒಳಿತಿಗಾಗಿ ಸಮರ್ಪಣೆ ಮಾಡಿಕೊಳ್ಳುವಲ್ಲಿ ತರಬೇತಿಯನ್ನು ನೀಡುವುದು. ಇದು ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ಅಥವಾ ಪ್ರಜಾಸತ್ತಾತ್ಮಕ ಗುಣ ಬೆಳೆಸುವುದಕ್ಕೆ ಸಾಹಾಯಕವಾಗಿದೆ.

ಪೌರ ಎಂದರೆ :- ದೇಶದ ಪ್ರಜೆ/ ಸದಸ್ಯ ಎಂದರ್ಥ ಸಾಮಾನ್ಯವಾಗಿ ಒಂದು ಭೂ ಪ್ರದೇಶದಲ್ಲಿ ಶಾಶ್ವತ ವಾಸವಾಗಿ ಅಲ್ಲಿಯ ಸರಕಾರವು ನೀಡುವ ಎಲ್ಲಾ **ನಾಗರೀಕ ಮತ್ತು ರಾಜಕೀಯ ಹಕ್ಕುಗಳನ್ನು** ಸಂವಿಧಾನಬದ್ಧ ಹಕ್ಕು ,ಕಾನೂನು ಹಕ್ಕು ಅನುಭವಿಸುವ ವ್ಯಕ್ತಿಯನ್ನು ಪ್ರಜೆ ಅಥವಾ ಪೌರ ಎಂದು ಕರೆಯಲಾಗುತ್ತದೆ.

- ಪೌರನೀತಿವು ಸರಕಾರ, ಸಂವಿಧಾನ, ಪ್ರಜಾಪ್ರಭುತ್ವ, ಮುಂತಾದ ವಿಷಯಗಳನ್ನು ಕುರಿತು ಅಧ್ಯಯನ ಮಾಡುವುದು.
- **ಪೌರನೀತಿ ಅರ್ಥ :- ಇದು ಆಂಗ್ಲ ಭಾಷೆಯ citizen ಎಂಬ ಪದವು ಲ್ಯಾಟಿನ್ ಭಾಷೆಯ civics ಎಂಬ ಪದದಿಂದ ಉತ್ಪನ್ನವಾಗಿದೆ. Civis ಎಂದರೆ :- ಪೌರತ್ವ ಎಂದರ್ಥ (citizen :- ನಾಗರೀಕ)Cititas ಎಂದರೆ ನಗರ ರಾಜ್ಯ ಎಂದರ್ಥ**
- ಯಾರೇ ಒಬ್ಬ ಪೌರನು ನಗರ ರಾಜ್ಯ ಅಥವಾ ದೇಶದಲ್ಲಿ ವಾಸ ಮಾಡುವವನು ಅವನನ್ನು **citizen** ಎಂದು ಕರೆಯಲಾಗುತ್ತದೆ
- ದೇಶದಲ್ಲಿ ವಾಸಿಸುವ ನಾಗರೀಕರಿಗೆ ಎಲ್ಲಾ ರೀತಿ ಹಕ್ಕು ದೊರೆಯುವುದು.

ಉದಾ :- ರಾಜಕೀಯ ಹಕ್ಕು, ನಾಗರೀಕ ಹಕ್ಕು, ಸಂವಿಧಾನಬದ್ಧ ಹಕ್ಕು ,ಕಾನೂನು ಹಕ್ಕು ಇತ್ಯಾದಿಗಳು.

ವ್ಯಾಖ್ಯೆಗಳು:

JSS CAREER ACADEMY

**ಇ ಎಮ್ ವೈಟ್ ಅವರ ಪ್ರಕಾರ :-** ಪೌರನೀತಿ ಪೌರರಿಗೆ ಸಂಬಂಧಿಸಿದ ಗತಕಾಲ,ವರ್ತಮಾನ, ಭವಿಷ್ಯತ್ ಕಾಲಗಳನ್ನು ಒಳಗೊಂಡಂತೆ ಸ್ಥಳೀಯ ,ರಾಷ್ಟ್ರೀಯ, ಮತ್ತು ಅಂತರರಾಷ್ಟ್ರೀಯ ವಿಷಯಕ್ಕೆ ಸಂಬಂಧಿಸಿದ.

**ಆಕ್ಸ್‌ಫರ್ಡ್ ನಿಘಂಟು :-** "ಪೌರನೀತಿ ಪೌರತ್ವದ ಹಕ್ಕು ಮತ್ತು ಬಾಧ್ಯತೆಗಳ ಸಿದ್ದಾಂತವಾಗಿದೆ.

**ಎ ಟಿ ಷಾಹರವರ ಪ್ರಕಾರ** :- ರಾಜಕೀಯವಾಗಿ ವ್ಯವಸ್ಥೆಗೊಂಡಿರುವ ಜನರ ಒಂದು ಗುಂಪಿನ ಒಬ್ಬ ಸದಸ್ಯನಾಗಿ ಜೀವಿಸುತ್ತಿರುವ ಮಾನವನ ಹಕ್ಕುಗಳು,ಮತ್ತು ಕರ್ತವ್ಯಗಳೊಡನೆ ವ್ಯವಹರಿಸುವ ಮಾನವ ಜ್ಞಾನದ ಒಂದು ಶಾಖೆಯೇ ಪೌರನೀತಿ

**ಎಫ್ ಜೆ ಗೌಲ್ಡರ್ ಅವರ ಪ್ರಕಾರ :-**"ಯಾವುದಾದರ ಮೂಲಕ ಪುರುಷ ಅಥವಾ ಸ್ತ್ರೀಯರು ಕರ್ತವ್ಯಗಳನ್ನು ನೆರವೇರಿಸುತ್ತಾರೆಯೋ ಮತ್ತು ರಾಜಕೀಯ ಸದಸ್ಯತ್ವವನ್ನು ಪಡೆಯುತ್ತಾರೆಯೋ ಆ ಸಂಸ್ಥೆಗಳ ರೂಢಿಗಳು, ಚಟುವಟಿಕೆಗಳು,ಮತ್ತು ಚೈತನ್ಯಗಳ ಅಧ್ಯಯನವೇ ಪೌರನೀತಿ"

**ಸ್ವರೂಪ:-**

- ಸಾಮಾಜಿಕ ವಿದ್ಯಮಾನಗಳನ್ನು ಅತ್ಯತ್ತಮ ವಾಗಿ ಅಧ್ಯಯಮಾಡುವುದು.
- ಸರಕಾರದ ಬಗ್ಗೆ ಹಾಗೂ ಅದರ ಆಗುಹೋಗಗಳು ಮತ್ತು ಸಮಸ್ಯೆಯ ಬಗ್ಗೆ ತಿಳಿಯಬಹುದು.
- ಪೌರನೀತಿಯು ಪ್ರಜೆಗಳಿಗೆ ಅವರ ಹಕ್ಕುಗಳ ಬಗ್ಗೆ ತಿಳಿಸಿ ಕೊಡುವುದು.
- ಇದು ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಅಂಶಗಳನ್ನು ಬೆಳೆಸುವುದು.
- ಉತ್ತಮಗುಣ, ವಿಶಾಲ ಮನೋಭಾವದ ಪ್ರಜೆಗಳನ್ನು ತಯಾರು ಮಾಡುವುದು.
- ಪ್ರಜಾಪ್ರಭುತ್ವ ಯಶಸ್ವಿಗೆ ಬೇಕಾದ ಅಂಶಗಳು ಅಥವಾ ತಂತ್ರಗಳ ಕುರಿತು ಯುವಕರಿಗೆ ಅರಿವು ಮೂಡಿಸಿ ಕೊಡುವುದು.
- ಪ್ರಸ್ತುತ ಸಮಾಜಕ್ಕೆ ಆಡಳಿತಾತ್ಮಕವಾಗಿ ,ರಾಜಕೀಯ, ಸಾಮಾಜಿಕ, ಮುಂತಾದ ವಿಷಯಗಳಲ್ಲಿ ಮಾರ್ಗದರ್ಶನ ಮಾಡುವುದು.
- ಸರಕಾರದ ಸ್ಥಿತಿಗತಿ ಕುರಿತು ವರದಿ ಮಾಡುವುದು ಹಾಗೂ ಸೂಕ್ತ ಮಾರ್ಗದಲ್ಲಿ ನಡೆಯುವಂತೆ ಮಾರ್ಗದರ್ಶನ ಮಾಡುವುದು.
- ಮತದಾನದ ಹಕ್ಕಿನ ಪಾವಿತ್ರ್ಯತೆ ಕುರಿತು ನಾಗರಿಕರಲ್ಲಿ ತಿಳುವಳಿಕೆ ಮೂಡಿಸುವುದು.
- ಪೌರರಲ್ಲಿ ರಾಜಕೀಯ ಹಾಗೂ ಸಾಮಾಜಿಕ ಪ್ರಜ್ಞೆ ಬೆಳೆಸುವುದು.

**ಪೌರನೀತಿ ಪ್ರಾಮುಖ್ಯತೆ**

JSS CAREER ACADEMY

- ನಮ್ಮ ಸರಕಾರವು ಯಾವ ತಳಹದಿಯ ಮೇಲೆ ರಚನೆಗೊಂಡಿದೆ ಎಂದು ತಿಳಿಸಿ ಕೊಡುವುದು.
- ಇದು ನಮ್ಮ ಸಂವಿಧಾನದ ಸ್ವರೂಪ,ಹಕ್ಕುಗಳು,ಹಾಗೂ ಕರ್ತವ್ಯಗಳ ಬಗ್ಗೆ ತಿಳಿಸಿ ಕೊಡುವುದು.
- ವಿದ್ಯಾರ್ಥಿಗಳಲ್ಲಿ ಪ್ರಜಾಸತ್ತಾತ್ಮಕ ಮೌಲ್ಯಗಳು ಹಾಗೂ ಸನ್ನಡತೆಯನ್ನು ಬೆಳೆಸುವುದು.
- ಪ್ರಸ್ತುತ ಪ್ರಪಂಚದ ರಾಜಕೀಯ ಹಾಗೂ ಸಾಮಾಜಿಕ ಮೌಲ್ಯ ತಿಳಿಯಲು ಸಹಾಯಕ
- ಮತದಾನದ ಬಗ್ಗೆ ಅರಿವು ಮೂಡಿಸುವುದು.
- ಭವಿಷ್ಯತ್ ಪೌರರಲ್ಲಿ ಪೌರತ್ವ ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ರಾಷ್ಟ್ರೀಯ ಮತ್ತು ವಿಶ್ವ ರಾಷ್ಟ್ರ ಪ್ರಜ್ಞೆಗಳೆಂಬ ಪ್ರಜೆಗಳನ್ನುಂಟು ಮಾಡುವುದು.
- ಸ್ವತಂತ್ರ ತಿರ್ಮಾನ ತೆಗೆದುಕೊಳ್ಳವಂತೆ ಮಾಡುವುದು

**ಸಮಾಜ ವಿಜ್ಞಾನ ವೈಜ್ಞಾನಿಕ ಅಧ್ಯಯನವೇ?**

**ಅರಿಸ್ಟಾಟಲ್ ಅವರು** :- ಸಮಾಜ ವಿಜ್ಞಾನವನ್ನು ಮಾನವನನ್ನು ಅಧ್ಯಯನ ಮಾಡುವ ವಿಜ್ಞಾನ ಎಂದು ಹೇಳಿದ್ದಾರೆ.

- **ಲಿಯೋಪೋಲ್ಡ್**: ಸಮಾಜ ವಿಜ್ಞಾನಕ್ಕೆ ಐತಿಹಾಸಿಕ ವಿಧಾನವನ್ನು ಅಳವಡಿಸಿ ವಿಜ್ಞಾನ ಮಾದರಿಯ ಲೇಪನ ಮಾಡಿದರು.
- ಸಮಾಜ ವಿಜ್ಞಾನ ಮಾಹಿತಿಯನ್ನು ಪರೋಕ್ಷ ವೀಕ್ಷಣೆಯ ಮೂಲಕ ಮಾಹಿತಿಯನ್ನು ಸಂಗ್ರಹಿಸುವುದು.
- ಸಮಾಜ ವಿಜ್ಞಾನ ವೈಜ್ಞಾನಿಕ ಅಧ್ಯಯನವಾಗಿದೆ.

**ಪಠ್ಯಪುಸ್ತಕದದ ವಿಶ್ಲೇಷಣೆ :-**

- ಸಮಾಜ ವಿಜ್ಞಾನ ಪಠ್ಯಪುಸ್ತಕ ವಿಶ್ಲೇಷಣೆ ಎಂದರೆ :- ಯಾವುದೇ ಒಂದು ನಿರ್ದಿಷ್ಟ ತರಗತಿಗೆ ಸಂಬಂಧಿಸಿದಂತೆ ರಚಿಸಲ್ಪಟ್ಟ ಸಮಾಜ ವಿಜ್ಞಾನ ಪಠ್ಯಪುಸ್ತಕವು ಹೊಂದಿರುವ ಆಂತರಿಕ ಮತ್ತು ಬಾಹ್ಯ ರೂಪಗಳ ಬಗ್ಗೆ ತಿಳಿಸುವುದು.
- **ಆಂತರಿಕವಾಗಿ**:- ವಿಷಯ ವಸ್ತು ನಿರೂಪಣೆ, ವಿಶ್ಲೇಷಣೆ, ಕಾಲಾನುಕ್ರಮ,ಗುರಿ ಉದ್ದೇಶಗಳನ್ನು, ಮೌಲ್ಯಮಾಪನ ವಿಶ್ಲೇಷಣೆ ಮಾಡುವುದು.
- **ಬಾಹ್ಯವಾಗಿ** :- ಪುಸ್ತಕದ ಮುಖಪುಟ ,ಬಳಸಿರುವ ಕಾಗದ ,ಬೆಲೆ ಮುಂತಾದ ಅಂಶಗಳನ್ನು ವಿಶ್ಲೇಷಣೆ ಮಾಡುವುದಾಗಿದೆ.

JSS CAREER ACADEMY

## ಪಠ್ಯಪುಸ್ತಕ ವಿಶ್ಲೇಷಣೆ ಮಹತ್ವ:-

- ಆಯಾ ತರಗತಿಯ ಹಂತಗಳಿಗೆ ಅನುಗುಣವಾಗಿ ನಿರ್ದಿಷ್ಟ ಬೋಧನಾ ಉದ್ದೇಶಗಳಿಗೆ ರಚನೆ ಮಾಡಲ್ಪಟ್ಟಿದೆ ಎಂದು ತಿಳಿಯುವುದು.
- ಪಠ್ಯಪುಸ್ತಕದಲ್ಲಿರುವ ಅಂಶಗಳು ಬೋಧನಾ ಉದ್ದೇಶ ಹಾಗೂ ಗುರಿಗಳ ಪೂರೈಕೆ ಪೂರಕವಾಗಿವೇ ಎಂದು ತಿಳಿಯುವುದು.
- ಪಠ್ಯಪುಸ್ತಕದಲ್ಲಿ ಬಳಸಿರುವ ಭಾಷೆ, ವಿಷಯದ ನಿರೂಪಣೆ, ಉದಾ ಮುಂತಾದಗಳ ವಿದ್ಯಾರ್ಥಿಗಳ ವಯಸ್ಸಿನ ಅನುವಾಗಿದಯೇ ಎಂದು ನೋಡುವುದು.
- ಪಠ್ಯಪುಸ್ತಕದಲ್ಲಿ ಬಳಸಿರುವ  ಚಿತ್ರ, ಭೂಪಟ,ನಕ್ಷೆ,ಅಕ್ಷಾಂಶ,ಮತ್ತು ರೇಖಾಂಶ ಮುಂತಾದವುಗಳನ್ನು ತಿಳಿಯುವುದು.
- ಪಠ್ಯಪುಸ್ತಕವು ಮನೋವೈಜ್ಞಾನಿಕ ಹಿನ್ನಲೆಯಲ್ಲಿ ರಚನೆ ಮಾಡಲಾಗಿದಯೇ ಎಂದು ತಿಳಿಯುವುದು.
- ಪಠ್ಯಪುಸ್ತಕದಲ್ಲಿ ಬಳಸಿರುವ ಮೌಲ್ಯಮಾಪನದ ತಂತ್ರ ಹಾಗೂ ಸಾಧನಗಳ ಸೂಕ್ತವಾಗಿಯೆ ಎಂದು ತಿಳಿಯುವುದು.

## ಇತಿಹಾಸ ಬೋಧನಾ ಗುರಿಗಳು :-

- **ಗುರಿ ಅರ್ಥ** :- ಧೀರ್ಘಕಾಲೀನ ಅವಧಿಯಲ್ಲಿ ಸಾದಿಸಬಹುದಾದಂತಹ ಉದ್ದೇಶ ಪೂರಿತ ಚಟುವಟಿಕೆಯನ್ನು ಗುರಿ ಎನ್ನುತ್ತೇವೆ.
- ವಿದ್ಯಾರ್ಥಿಗಳಲ್ಲಿ ನೀತಿ ತತ್ವ ಬೆಳೆಸುವುದು
- ರಾಷ್ಟ್ರಪ್ರೇಮ  ಹಾಗೂ ದೇಶಾಭಿಮಾನ  ಬೆಳೆಸುವುದು
- ಭಾರತೀಯ ಸಂಸ್ಕೃತಿಯ ಅರಿವು ಮೂಡಿಸುವುದು
- ಕಾಲ ಹಾಗೂ ಸ್ಥಳದ ಪ್ರಜ್ಞೆ ಬೆಳೆಸುವುದು
- ಐತಿಹಾಸಿಕ ದೃಷ್ಟಿ ಕೋನ ಬೆಳೆಸುವುದು
- ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವುದು
- ಅಂತರಾಷ್ಟ್ರೀಯ ತಿಳುವಳಿಕೆ ಮೂಡಿಸುವುದು.
- ಪೌರನೀತಿ ಗುರಿಗಳು
- ಪ್ರಜಾಪ್ರಭುತ್ವದಲ್ಲಿ ನಂಬಿಕೆ ಬೆಳೆಸುವುದು

JSS CAREER ACADEMY

- ➢ ಸತ್ಯ ಅಹಿಂಸೆ ಮುಂತಾದಗಳ ಕುರಿತು ಅರಿವು ಮೂಡಿಸುವುದು.
- ➢ ರಾಜಕೀಯ ಪ್ರಜ್ಞೆ ಬೆಳಸುವುದು
- ➢ ವೈಯಕ್ತಿಕ ಕೆಲಸವನ್ನು ಸಾರ್ವಜನಿಕ ದೃಷ್ಟಿಯಿಂದ ಮಾಡುವಂತೆ ಮಾಡುವುದು
- ➢ ನಾಯಕತ್ವ ಹಾಗೂ ವಿಶಾಲ ಮನೋಭಾವದ ಗುಣ ಬೆಳೆಸುವುದು
- ➢ ಪೌರನ ಹಕ್ಕು ಹಾಗೂ ಕರ್ತವ್ಯಗಳ ಕುರಿತು ಅರಿವು ಮೂಡಿಸುವುದು.
- ➢ ಹಕ್ಕುಗಳ ಬಗ್ಗೆ ಅರಿವು ಮೂಡಿಸುವುದು ಹಾಗೂ ನೈಜ ಜೀವನದಲ್ಲಿ ಅವುಗಳ ಪರಿಚಯ ಮಾಡಿಕೊಡುವುದು.
- ➢ ಕೇಂದ್ರ ಹಾಗೂ ರಾಜ್ಯ ಸರಕಾರದ ಅರಿವು ಮೂಡಿಸುವುದು
- ➢ ರಾಜ್ಯದ ಪ್ರಚಲಿತ ವಿದ್ಯಮಾನಗಳನ್ನು ತಿಳಿಸಿ ಕೊಡುವುದು.
- ➢ ಸಮಕಾಲೀನ ರಾಜಕೀಯ ವ್ಯವಸ್ಥೆ ತಿಳಿಸುವುದು

**ಇತಿಹಾಸ ಬೋಧನಾ ಉದ್ದೇಶಗಳು**

- ➢ **ಉದ್ದೇಶ ಎಂದರೆ :-** ಅತ್ಯಂತ ಕಡಿಮೆಯ ಅವದಿಯಲ್ಲಿ ಸಾದಿಸುವಂತಹ ನಿರ್ದಿಷ್ಟ ವಿಷಯಾಂಶಗಳನ್ನು ಉದ್ದೇಶ ಎಂದು ಕರೆಯಲಾಗುತ್ತದೆ.
- ➢ ಗುರಿಯ ಸಾಧನೆಯ ಮಾರ್ಗವನ್ನು ತೋರಿಸುವ ಬಿಂದುಗಳೇ ಉದ್ದೇಶಗಳಾಗಿವೆ
- ➢ ಬೋಧನಾ ಉದ್ದೇಶಗಳ ವರ್ಗೀಕರಣದ ಹಿನ್ನಲೆ
- ➢ ಅಮೆರಿಕಾದ ಬೋಸ್ಟನ್ ನಗರದಲ್ಲಿ ಕ್ರಿ ಶ 1948 ರಂದು ಶಿಕ್ಷಣ ತಜ್ಞರು ಸಮ್ಮೇಳನದಲ್ಲಿ ಅಥವಾ ಔಪಚಾರಿಕ ಸಭೆಯಲ್ಲಿ ಉದ್ದೇಶಗಳ ವರ್ಗೀಕರಣ ಪ್ರಸ್ತಾಪ ಮಾಡಲಾಯಿತು.

**ಬೆಂಜಮಿನ್ ಬ್ಲೂಮ್** ಅವರು ಮಕ್ಕಳ ವರ್ತನಾ ವಿಷಯದ ಮೇಲೆ ಮೂರು ವಲಯಗಳನ್ನು ಸೂಚಿಸಿದರು.

- ➢ ಜ್ಞಾನಾತ್ಮಕ ವಲಯ
- ➢ ಭಾವನಾತ್ಮಕ ವಲಯ
- ➢ ಮನೋ ಕ್ರಿಯಾಜನ್ಯ ವಲಯ

ಈ ಮೇಲಿನ ಬೋಧನಾ ಉದ್ದೇಶಗಳನ್ನು ಮಾರ್ಪಾಡು ಮಾಡಿದವರ ರಾಬರ್ಟ್ ಮೇಗರ್ (1962)

**ಜ್ಞಾನಾತ್ಮಕ ವಲಯ**

- ➢ ಬಿ ಎಸ್ ಬ್ಲೂಮ್ ಅವರು 1956 ರಂದು ವರ್ಗೀಕರಣ ಮಾಡಿದ್ದಾರೆ.

JSS CAREER ACADEMY

- ಈ ವಲಯದಲ್ಲಿ ಇವರು ಆರು ವಿಭಾಗಗಳನ್ನು ಗುರುತು ಮಾಡಿದರು ಅವರುಗಳೆಂದರೆ

1) **ಜ್ಞಾನ**
2) **ಗ್ರಹಿಕೆ**
3) **ಅನ್ವಯಿಸುವಿಕ**
4) **ವಿಶ್ಲೇಷಣೆ**
5) **ಸಂಶ್ಲೇಷಣೆ**
6) **ಮೌಲ್ಯಮಾಪನ**

**ಭಾವನಾತ್ಮಕ ವಲಯ ;-**

- **ಕ್ರಿಶ 1972 ಅನಿತ್ ಜಿ ಹ್ಯಾರೋ** ಅವರ ಮನೋಕ್ರಿಯಾಜನ್ಯ ವಲಯದಲ್ಲಿ ಉದ್ದೇಶಗಳನ್ನು ವರ್ಗಿಕರಣ ಮಾಡಿದ್ದಾರೆ.
- ಇದರಲ್ಲಿ ಐದು ವಲಯಗಳನ್ನು ಗುರುತು ಮಾಡಲಾಗಿದೆ ಅವುಗಳೆಂದರೆ

1) **ಸ್ವೀಕರಿಸುವಿಕೆ**
2) **ಪ್ರತಿಕ್ರಿಯಿಸುವಿಕೆ**
3) **ಬೆಲೆ ಕಟ್ಟುವಿಕೆ**
4) **ಸಂಘಟಿಸುವಿಕೆ**
5) **ಚಾರಿತ್ರೀಕರಣಗೊಳಿಸುವುದು**

**ಮನೋ ಕ್ರಿಯಾಜನ್ಯ:-**

- **ಕ್ರಿ ಶ 1964 ರಂದು ಡೆವಿಡ್ ಆರ್ ಕ್ಯಾಥೋಲ್** ಅವರ ಭಾವನಾತ್ಮಕ ವಲಯದಲ್ಲಿ ಉದ್ದೇಶಗಳನ್ನು ಗುರುತು ಮಾಡಿದ್ದಾರೆ.
- ಇದರಲ್ಲಿ ಆರು ವಿಭಾಗಗಳಿವೆ

1) **ಪ್ರೇರಣೆ**
2) **ಅನುಕರಣೆ**
3) **ಕೈಚಳಕ**
4) **ಖಚಿತತೆ**
5) **ಸ್ವಷ್ಟೋಚ್ಚಾರಣೆ**

JSS CAREER ACADEMY

## 6) ಸ್ವಾಭಾವಿಕತೆ

### ಇತಿಹಾಸ ಹಾಗೂ ಪೌರನೀತಿಯ ನಿರ್ದಿಷ್ಟ ಉದ್ದೇಶಗಳು:-

### ಜ್ಞಾನ

- ಜ್ಞಾನಾತ್ಮಕ ವಲಯದಲ್ಲಿ ಅತೀ ಕೆಳಮಟ್ಟದಲ್ಲಿ ವಲಯ .
- ಇದು ವಿದ್ಯಾರ್ಥಿಗಳಿಗೆ ಘಟನೆ,ಮೂಲಗ್ರಹಿಕೆ ಕಲಿಕೆ ,ಪದಸಂಜ್ಞೆ, ವಾಸ್ತವಿಕ ಘಟನೆ, ಕಾಲಾನುಕ್ರಮ ,ಹೆಸರು ,ಇಸವಿ ,ಚಿತ್ರಪಟ,ಅಭಿಪ್ರಾಯಗಳು ಮೊದಲಾದವು ಕುರಿತು ಜ್ಞಾನ ಗಳಿಸುವುದು.
- **ಇದು ವಿದ್ಯಾರ್ಥಿಗಳ ಬೌದ್ಧಿಕ ಮಟ್ಟ ಉನ್ನತಗೊಳಿಸುವುದು.**
- **ನಿರ್ಧಿಷ್ಟ ಅಂಶಗಳು**
- **ಗುರುತಿಸುವುದು**
- **ಸ್ಮರಿಸಿ ಹೇಳುವರು**
- **ತೋರಿಸುವರು**
- ಉದಾ :-ವಿದ್ಯಾರ್ಥಿ ಮಹಾತ್ಮ ಗಾಂಧಿಯ ಭಾವಚಿತ್ರವನ್ನು ಗುರುತಿಸುವನು

**ತಿಳುವಳಿಕೆ:-** ಒಂದು ವಿಷಯವನ್ನು ಸರಿಯಾದ ರೀತಿಯಲ್ಲಿ ತಿಳಿಸಿದರೆ ಜ್ಞಾನ ತಿಳುವಳಿಕೆಯಾಗಿ ಪರಿವರ್ತನೆ ಆಗುವುದು.ಇಲ್ಲಿ **ವಿದ್ಯಾರ್ಥಿಗಳು ಕಲ್ಪನೆ,ವಿಚಾರ ,ಸಮಸ್ಯೆ,ಸಂಪ್ರದಾಯ, ಒಲವು, ಕಲ್ಪಿತ ನಿರ್ಧಾರ, ತತ್ವಗಳು ಮೊದಲಾದವುಗಳ ತಿಳಿದುಕೊಳ್ಳವನು.**

- **ನಿರ್ಧಿಷ್ಟ ಅಂಶಗಳು;-**
- **ವಿವರಿಸುವುದು**
- **ಕಾರಣ ನೀಡುವುದು**
- **ಉದಾರಿಸುವುದು**
- **ಕೊನೆಯ ತಿರ್ಮಾನಕ್ಕೆ ಬರುವುದು**
- **ಹೊಲಿಕೆ ಮತ್ತು ವ್ಯತ್ಯಾಸ**
- **ತಪ್ಪುಗಳನ್ನು ಹುಡುಕುವುದು**
- **ಸಂಕ್ಷಿಪ್ತ ಗೊಳಿಸುವುದು**

JSS CAREER ACADEMY

- **ವಿಮರ್ಶಿಸುವುದು**

ಉದಾ :- ವಿದ್ಯಾರ್ಥಿಯು ಕೃಷ್ಣದೇವರಾಯನ ಸಾಧನೆಯನ್ನು ವಿವರಿಸುವನು

**ಅನ್ವಯ :-**

ಇಲ್ಲಿ ವಿದ್ಯಾರ್ಥಿ ತಾನು ಪಡೆದ ಹೊಸ ಸನ್ನಿವೇಶ ಹಾಗೂ ಅನುಭವಗಳ

- ಜ್ಞಾನ ಹಾಗೂ ತಿಳುವಳಿಕೆಯ ಮೂಲಕ ಅನ್ವಯಿಸಿಕೊಳ್ಳುವನು.
- ಕಲಿತ ವಿಷಯ ಅನ್ವಯವಾದರೆ ಜ್ಞಾನ ಮತ್ತು ತಿಳುವಳಿಕೆ ಉಪಯುಕ್ತ ಆಗುವುದು.
- ನಿರ್ಧಿಷ್ಟ ಅಂಶಗಳು
- ಭವಿಷ್ಯ ನುಡಿಯುವುದು
- ವಿಶ್ಲೇಷಿಸುವುದು
- ಪ್ರಾಕಲ್ಪನೆ ರಚನೆ ಮಾಡುವುದು
- ಕಾರಣ ನೀಡುವುದು
- ಸ್ಪಷ್ಟೀಕರಿಸುವುದು ಇತ್ಯಾದಿ

**ಕೌಶಲ್ಯ :-**

- ಇದು ಮನೋ ಕ್ರಿಯಾಜನ್ಯ ವಲಯದಲ್ಲಿ ಬರುವುದು.
- ಇಲ್ಲಿ ವಿದ್ಯಾರ್ಥಿವು ಪ್ರಾಯೋಗಿಕ ಸನ್ನಿವೇಶವನ್ನು ಅನ್ವಯಿಸಿಕೊಳ್ಳುವನು.
- ಉದಾ :- ಭೂಪಟ ,ಕಾಲಸೂಚಿ ,ಕಾಲ ಆಲೇಖ,ತಯಾರು ಮಾಡುವುದು
- **ಮಾದರಿ ತಯಾರಿಸುವುದು**
- **ಭೂಪಟದಲ್ಲಿ ಸ್ಥಳಗಳನ್ನು ಗುರುತಿಸುವುದು**
- **ನಿರ್ದಿಷ್ಟ ಅಂಶಗಳು**
- **ಓದುವನು**
- **ಸಿದ್ದಪಡಿಸುವುದು**
- **ಬಿಡಿಸುವುದು**
- **ಗುರುತಿಸುವುದು**
- **ಸಾದರಪಡಿಸುವುದು**
- ಉದಾ :- ವಿದ್ಯಾರ್ಥಿಯು ಕಾಲಸೂಚಿಯನ್ನು ಓದುವನು.

JSS CAREER ACADEMY

## ಮನೋಭಾವ :-

- ಇದು ಭಾವನಾತ್ಮಕ ವಲಯದ ಉದ್ದೇಶವಾಗಿದೆ.
- ಇಲ್ಲಿ ವಿದ್ಯಾರ್ಥಿಯು ಧನಾತ್ಮಕ ಮನೋಭಾವನೆ ಬೆಳೆಸಿಕೊಳ್ಳವನು

## ಪ್ರಶಂಸೆ ;-

- ಇದು ಭಾವನಾತ್ಮಕ ವಲಯದ ಉದ್ದೇಶ ಆಗಿದೆ.
- ಇಲ್ಲಿ ವಿದ್ಯಾರ್ಥಿ ತಾನು ಕಲಿತ ಎಲ್ಲಾ ವಿಷಯಗಳ ಕುರಿತು ಪ್ರಶಂಸೆ ವ್ಯಕ್ತಪಡಿಸುವನು.

## ಆಸಕ್ತಿ :-

- ಇದು ಭಾವನಾತ್ಮಕ ವಲಯದ ಉದ್ದೇಶ ಆಗಿದೆ.
- ಇಲ್ಲಿ ವಿದ್ಯಾರ್ಥಿಗಳಿಗೆ ಕಥೆ, ಕಾದಂಬರಿ , ಜೀವನ ಚರಿತ್ರೆ, ಪುಸ್ತಕ,ನಿಯತಕಾಲಿಕೆ ಮುಂತಾದವುಗಳ ಕುರಿತು ಆಸಕ್ತಿ ಬೆಳೆಸುವುದು

## ಇತಿಹಾಸದ ಬೋಧನೆಯ ಮೌಲ್ಯಗಳು

- ಶಿಸ್ತಿನ ಮೌಲ್ಯ
- ನೈತಿಕ ಮೌಲ್ಯ
- ಬೌದ್ಧಿಕ ಮೌಲ್ಯ
- ಉಪಯುಕ್ತ ಮೌಲ್ಯ

ಸೌಂದರ್ಯೋಪಾಸಕ ಮೌಲ್ಯ

- ಸಾಂಸ್ಕೃತಿಕ ಮೌಲ್ಯ
- ರಾಷ್ಟ್ರೀಯ ಮೌಲ್ಯ
- ಅಂತರರಾಷ್ಟ್ರೀಯ ಮೌಲ್ಯ
- ಮನರಂಜನಾ ಮೌಲ್ಯ
- ಚಟುವಟಿಕೆ ಮೌಲ್ಯ

## ಕಾಲಕಲ್ಪನೆ :-

- ಇತಿಹಾಸ ವಿಷಯವು ವಿದ್ಯಾರ್ಥಿಗಳಲ್ಲಿ ಕಾಲ ಕಲ್ಪನೆ ಮೂಡಿಸುವುದಕ್ಕೆ ಸಹಾಯಕ ಆಗುವುದು.
- ಈ ವಿಷಯದಲ್ಲಿ ಎಲ್ಲಾ ಕಾಲ ನಿರ್ಧಾರ ಮಾಡುವುದು

JSS CAREER ACADEMY

- ಪ್ರತಿಯೊಂದು ಘಟನೆ ನಡೆಯಬೇಕಾದರೆ ಅದಕ್ಕೆ ತನ್ನದೇಯಾದ ಕಾಲ ಹಾಗೂ ಸ್ಥಳ ಇರುವುದು
- ಜಾನಸನ್ ಅವರು :- ಕಾಲಗಣಶಾಸ್ತ್ರ ಮತ್ತು ಭೂಗೋಳಶಾಸ್ತ್ರವನ್ನು ಇತಿಹಾಸದ ಎರಡು ಕಣ್ಣು ಎಂದಿದ್ದಾರೆ.
- ಇತಿಹಾಸದಲ್ಲಿ ಸಾಮಾನ್ಯವಾಗಿ ಕಾಲಸೂಚಕಗಳೆಂದರೆ :- ನಿನ್ನೆ ಮೊನ್ನೆ,ನಾಳೆ ,ಇಂದು ಅನಂತರ,ದಿನ ,ತಿಂಗಳ ವರ್ಷ ಇತ್ಯಾದಿ
- ಇದರ ಮುಖ್ಯ ಗುರಿ :- ಕಾಲ ಪ್ರಜ್ಞೆ
- ಗಾಲ್ ಬ್ರೈಥ್ ಅವರು :- ಕಾಲ ನಿಶ್ಚತವಾದಲ್ಲಿ ಇತಿಹಾಸ ನಿಲ್ಲುವುದು.
- ವಿ ಡಿ ಘಾಟಿ ಅವರು :- ಜೀವನ ಮತ್ತು ಕೃತಿಗಳ ಮಧ್ಯದಲ್ಲಿ ಸಂಬಂಧವನ್ನು ಗ್ರಹಿಸುವ ಶಕ್ತಿಯೇ ಕಾಲಪ್ರಜ್ಞೆ ಎಂದಿದ್ದಾರೆ.ಇತಿಹಾಸದಲ್ಲಿ ಸಾಮಾನ್ಯವಾಗಿ ಕ್ರಿ ಪೂ ಅನ್ನು
- ಇಳಿಕೆಯ ಕ್ರಮದಲ್ಲಿ ಹಾಗೂ ಕ್ರಿ ಶ ಅನ್ನು ಏರಿಕೆ ಕ್ರಮದಲ್ಲಿ ಬರೆಯಲಾಗುವುದು
- ಕಾಲಸಂಬಂಧ ಅಂಶಗಳು-
- ಕಾಲಪ್ರಜ್ಞೆ ಅರ್ಥ ಮಾಡಿಕೊಳ್ಳಲು ಪ್ರಮುಖವಾಗಿ ಮೂರು ಅಂಶಗಳಿವೆ,ಅವುಗಳೆಂದರೆ
- ಸ್ಥಾನ ನಿರ್ದೇಶನ
- ಅಂತರ/ದೂರ
- ಅವಧಿ

ಸ್ಥಾನ ನಿರ್ದೇಶನ :- ಕಾಲರೇಖೆಯ ಮೇಲೆ ಘಟನೆಗಳನ್ನು ಗುರುತಿಸುವುದೇ ಸ್ಥಾನ ನಿರ್ದೇಶನ ಅಥವಾ ಇತಿಹಾಸದ ಘಟನೆಗಳಿಗೆ ಇಸವಿ ನಿರ್ದಿಷ್ಟ ಪಡಿಸುವುದು

- ಉದಾ :- ಭಾರತಕ್ಕೆ ಸ್ವಾತಂತ್ರ್ಯ ಗಳಿಸಿದ್ದು -1947
- ವಿದ್ಯಾರ್ಥಿಗಳಲ್ಲಿ ಕಾಲ ಪ್ರಜ್ಞೆ ಬೆಳೆಸುವುದಕ್ಕೆ ಸ್ಥಾನ ನಿರ್ದೇಶನ ಭದ್ರಬುನಾದಿವಾಗಿದೆ.

- ಇಸವಿಗಳನ್ನು ಇತಿಹಾಸ ಹೆಗ್ಗುರುತು ಎಂದು ಕರೆಯಲಾಗುತ್ತದೆ.

ಅಂತರ /ದೂರ :-

- ಇತಿಹಾಸದ ಎರಡು ಘಟನೆಗಳ ನಡುವೆ ಗತಿಸಿದ ಕಾಲ ಅಥವಾ ಎರಡು ಘಟನೆಗಳ ನಡುವಿನ ಸಮಯದ ಅಂತರವನ್ನು ಅಂತರ ಅಥವಾ ದೂರ ಎಂದು ಕರೆಯಲಾಗುತ್ತದೆ.

JSS CAREER ACADEMY

- ಉದಾ -: 1857 -1947 ನಡುವಿನ ಅಂತರ ಆಗಿದೆ. ಇವುಗಳ ನಡುವಿನ ಅಂತರ 147 ವರ್ಷಗಳು ಇದೆ.

**ಅವಧಿ :-**

- ಇತಿಹಾಸ ಬೋಧನೆಯಲ್ಲಿ ಒಬ್ಬ ರಾಜ, ರಾಣಿ ,ಅಧ್ಯಕ್ಷ, ಪ್ರಧಾನಿ, ತಮ್ಮ ಸಾಮ್ರಾಜ್ಯದಲ್ಲಿ ಎಷ್ಟು ವರ್ಷಗಳ ಕಾಲ ಆಡಳಿತ ನಡೆಸಿದ್ದಾರೆ ಎಂದು ತಿಳುಸುವುದೇ ಅವಧಿ ಆಗಿದೆ.
- ಉದಾ :- ಮೊಗಲರ ಅಳ್ವಿಕೆ ಕ್ರಿ ಶ 1526 ರಿಂದ 1857 ಅಂದರೆ ಸುಮಾರು 330 ವರ್ಷಗಳ ಅವಧಿಯವರೆಗೆ ಆಳಿದ್ದಾರೆ ಎಂದಾಗುವುದು.
- ಕಾಲಪ್ರಜ್ಞೆ ಬಳಸುವ ಸಾಧನಗಳು ಅಥವಾ ತಂತ್ರಗಳು
- ಘಟನೆಗಳಿಗೆ ಇಸವಿ ತಿಳಿಸುವುದೇ ಕಾಲಪ್ರಜ್ಞೆ ಆಗಿದೆ.
- ಈ ತಂತ್ರಗಳಿಂದ ಮಕ್ಕಳು ದೀರ್ಘಕಾಲದವರೆಗೆ ಇಸವಿಗಳನ್ನು ನೆನಪಿನಲ್ಲಿ ಇಡಬಹುದು.
- **ಕಾಲ ರೇಖೆ:**
- ಕಾಲಪ್ರಜ್ಞೆ ಬಳಸುವುದಕ್ಕೆ ತುಂಬಾ ಸರಳ ಹಾಗೂ ಪರಿಣಾಮಕಾರಿಯಾದ ಸಾಧನ ಆಗಿದೆ.
- ಪ್ರಮುಖ ಅಂಶಗಳು
- ಪಾಠದ ಶಿರೋನಾಮೆ
- ಪ್ರಾರಂಭ ಹಾಗೂ ಅಂತ್ಯದಲ್ಲಿ ಇಸವಿಯನ್ನು ತಪ್ಪದೇ ಬರೆಯಬೇಕು

- ಸ್ಕೇಲ್ ನಿರ್ಧಾರ ಮಾಡಬೇಕು
- ಕಾಲರೇಖೆಯ ಎಡ ಬಾಗಕ್ಕೆ ಇಸವಿಗಳನ್ನು ಹಾಗೂ ಬಲಭಾಗಕ್ಕೆ ನಿರ್ದಿಷ್ಟ ಘಟನೆಗಳನ್ನು ಬರೆಯಬೇಕು
- ಪ್ರಮುಖವಾದ ಇಸವಿಗಳನ್ನು ಬರೆಯಬೇಕು

**ಕಾಲರೇಖೆಯಲ್ಲಿ ನಾಲ್ಕು ವಿಧಗಳು**

- ಪ್ರಗತಿಶೀಲ
- ಪ್ರತಿಗಾಮಿ ಕಾಲರೇಖೆ
- ಹೋಲಿಕಾ ರೇಖೆ
- ಚಿತ್ರಾತ್ಮಕ ರೇಖೆ

JS CAREER ACADEMY

- ಪ್ರಗತಿಶೀಲ ಕಾಲರೇಖೆ ಎಂದರೆ
- ಪ್ರಗತಿಶೀಲ ಕಾಲರೇಖೆಯಲ್ಲಿ ಇತಿಹಾಸದ ಇಸವಿಗಳನ್ನು ಕಾಲಾನುಕ್ರಮದಲ್ಲಿ ಬರೆದು ಒಂದರ ನಂತರ ಒಂದು ಘಟನೆಗಳನ್ನು ಜೋಡಣೆ ಮಾಡಲಾಗುವುದು.
- ಉದಾ :- 1857 ಸಿಪಾಯಿ ದಂಗೆ
- ,1858 ರಾಣಿಯ ಘೋಷಣೆ
- 1919 ಮಾಂಟೆಗೋಚಮ್ಸ್ ಪರ್ಡ್ ಸುಧಾರಣೆ,1947 ಭಾರತಕ್ಕೆ ಸ್ವಾತಂತ್ರ್ಯ ಈ ರೀತಿಯಾಗಿ ಇಸವಿಯನ್ನು ಬರೆಯಲಾಗವುದು.
- ಪ್ರತಿಗಾಮಿ ಕಾಲರೇಖೆ
- ಇಲ್ಲಿ ವರ್ತಮಾನ ಅಥವಾ ಗೊತ್ತಿರುವ ಇಲ್ಲವೇ ಸಮಕಾಲಿನ ಘಟನೆಯಿಂದ ಇಸವಿಗಳನ್ನು ಹಿಮ್ಮುಖವಾಗಿ ಗುರುತಿಸುವುದು.
- ಉದಾ :- 2020-2019-2018 ಈ ರೀತಿ ಸಾಗುವುದು

**ಹೋಲಿಕಾ ರೇಖೆ** :- ಒಂದು ಕಾಲದಲ್ಲಿ ನಡೆದ ಎರಡು ಐತಿಹಾಸಿಕ ಘಟನೆಗಗಳ ನಡುವೆ ಇಸವಿ ಹೋಲಿಕೆ ಮಾಡುವುದೇ ಹೋಲಿಕಾ ಕಾಲರೇಖೆ ಆಗಿದೆ.

- ಬಲಭಾಗದಲ್ಲಿ ಒಂದು ದೇಶ /ವಂಶದ ಇಸವಿ ಮತ್ತು ಘಟನೆಗಳಿಗೂ ಹಾಗೂ ಎಡಭಾಗದಲ್ಲಿಯ ದೇಶದ /ವಂಶದ ಇಸವಿ ಮತ್ತು ಘಟನೆಯನ್ನು ಬರೆಯಬೇಕು.

**ಚಿತ್ರಾತ್ಮಕ ಕಾಲರೇಖೆ**:- ಕಾಲರೇಖೆಯ ಬಲಬದಿಗೆ ಇಸವಿಯನ್ನು ಎಡಬದಿಗೆ ಘಟನೆಗಳನ್ನು , ಆ ಘಟನೆಗಳಿಗೆ ಪೂರಕವಾಗಿ ಚಿತ್ರ ತೋರಿಸುವುದನ್ನು ಚಿತ್ರಾತ್ಮಕ ಕಾಲರೇಖೆ ಎಂದು ಕರೆಯಲಾಗುತ್ತದೆ.

- ಕಾಲ ರೇಖೆಯ ಅನುಕೂಲಗಳು
- ವಿದ್ಯಾರ್ಥಿಗಳಲ್ಲಿ ಕಾಲ ಕಲ್ಪನೆ ಮೂಡಿಸುವುದು ಸುಲಭ
- ಐತಿಹಾಸಿಕ ಘಟನೆಗಳ ನಡುವಿನ ಅಂತರ ದೂರ ತಿಳಿಯುವುದು ಸುಲಭ
- ಐತಿಹಾಸಿಕ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಬಹುದು.
- ಇತಿಹಾಸದ ಇಸವಿಗಳು ದಿರ್ಘಕಾಲ ನೆನಪಿನಲ್ಲಿ ಉಳಿಯುವುದು
- ಇಸವಿ ಕಲಿಕೆ ಸುಲಭವಾಗುವುದು
- ಇತಿಹಾಸದ ಪಾಠ ಪುನರ್ವರ್ತನೆ ಸಾಧ್ಯ ಇದೆ.

JSS CAREER ACADEMY

**ಕಾಲಸುರುಳಿ ;-**

- ಒಂದು ಆಯತಾಕಾರದ ಹಾಳೆಯನ್ನು (3×6 ಅಂಗಲು) ತೆಗೆದುಕೊಂಡು ಅದರ ಎರಡು ಬದಿಗೆ ಕಡ್ಡಿ ಸುತ್ತಿ ಅದರಲ್ಲಿ ಎಡಬಾಗಕ್ಕೆ ಇಸವಿಗಳನ್ನು ಬಲಭಾಗಕ್ಕೆ ಘಟನೆಗಳನ್ನು ಬರೆದು ಎರಡು ಬದಿಯನ್ನು ಸುತ್ತಿ ನಂತರ ಶಿಕ್ಷಕರು ಪಾಠವನ್ನು ಮಾಡುವಾಗ ಸುರುಳಿ ಬಿಚ್ಚಿ ಇಸವಿಗಳನ್ನು ಪರಿಚಯ ಮಾಡಿಕೊಡುವುದು. ಕಾಲ ಸುರುಳಿ ಆಗಿದೆ.

**ಕಾಲನಕ್ಷೆ :-** ಇತಿಹಾಸದ ಘಟನೆ ಹಾಗೂ ರಾಜ ಮನೆತನಗಳ ಅವನತಿಯನ್ನು ನಕ್ಷೆಯ ಮೂಲಕ ತೋರಿಸುವುದು

**ಸ್ಥಳ ಪ್ರಜ್ಞೆ**

- ಇತಿಹಾಸದ ಪ್ರತಿ ಘಟನೆಗೂ ಒಂದು ಸ್ಥಳ ಕಾಲ ಇದ್ದೆ ಇರುತ್ತದೆ ಏಕೆಂದರೆ ಇತಿಹಾಸ ಯಾವುದೇ ಘಟನೆಗಳು ಶೂನ್ಯದಲ್ಲಿ ಜರುಗುವುದಿಲ್ಲ.

**ಸ್ಥಳ ಪ್ರಜ್ಞೆ ಎಂದರೆ :-** ಐತಿಹಾಸಿಕ ಘಟನೆ ನಡೆದ ಸ್ಥಳದ ಬಗ್ಗೆ ತಿಳಿಯುವ ಸಾಮರ್ಥ್ಯ ಆಗಿದೆ.

- ಉದಾ :; ಪಟ್ಟದ ಕಲ್ಲು, ಹಳೇಬೀಡು ಇತ್ಯಾದಿ.
- ಸ್ಥಳ ಪ್ರಜ್ಞೆದ ಮೂಲಭೂತ ಅಂಶಗಳು
- ಸ್ಥಾನ
- ದಿಕ್ಕು
- ದೂರ
- ಸ್ಥಳ ಪ್ರಜ್ಞೆ ಬೆಳಸುವ ವಿಧಾನಗಳು

**ಭೂಪಟಗಳು** :- ಸ್ಥಾನ,ದಿಕ್ಕು,ದೂರ,ವಿಸ್ತಾರ ತಿಳಿಯುವುದು

**ಅಟ್ಲಾಸ್ :-** ಇದರಲ್ಲಿ ವಿದ್ಯಾರ್ಥಿಗಳು ಭೂ ಮತ್ತು ವಾಯು ಮೇಲ್ಮೈ ಲಕ್ಷಣಗಳನ್ನು ತಿಳಿಯಬಹುದು

- ಗೋಳ ಗಳು :- ಭೂಮಿ ಗೋಳಾಕಾರದ ಪ್ರಜ್ಞೆ ಬೆಳಸುವುದು ಹಾಗೂ ಅಂತರರಾಷ್ಟ್ರೀಯ ಸ್ಥಳ ಹಾಗೂ ಘಟನೆ ಗುರುತಿಸಲು ಸಹಾಯಕ

**ಸ್ಥಳ ಪಟಗಳು :-** ದೇಶದ ವಿವಿಧ ಐತಿಹಾಸಿಕ ಘಟನೆಗಳನ್ನು ಒಂದು ನಿರ್ದಿಷ್ಟ ಅಂದರೆ 1**cm** ಅನ್ನು 10/20/30 **km** ಸೂಚಿಸಿ ಮಾಹಿತಿ ನೀಡುವುದು.

JSS CAREER ACADEMY

**ವಿಸ್ತರಣ ಪಟಗಳು :-** ವಿಸ್ತರಣಾ ಪಟಗಳ ಮೂಲಕ ಯಾವುದಾದರೂ ಒಂದು ವಂಶದ /ಸಾಮ್ರಾಜ್ಯದ ವಿಸ್ತರಣೆಯನ್ನು ಅಥವಾ ಅವನತಿಯನ್ನು ಎಲ್ಲೆಗಳನ್ನು ಗುರುತಿಸುವ ಮೂಲಕ ಅವರು ಸಾಮ್ರಾಜ್ಯಕ್ಕೆ ಸೇರಿಸಿಕೊಂಡ ಹಾಗೂ ಕಳೆದುಕೊಂಡ ಪ್ರದೇಶಗಳನ್ನು ಗುರುತಿಸುವುದು.

- ಸಹಸಂಬಂಧ ಎಂದರೆ :- ಭೋಧನಾ ಕ್ರಮದಲ್ಲಿ ಶಾಲೆಯ ವಿವಿಧ ರೀತಿಯ ಪಠ್ಯ ವಿಷಯದ ಮಧ್ಯೆ ಇರುವಂತಹ ಸಂಬಂಧವನ್ನು ಸಾಮಾನ್ಯವಾಗಿ ಸಹಸಂಬಂಧ /ಸಮೂಹರ,/ ವಿಷಯಾನುಬಂಧ ಎಂದು ಕರೆಯಲಾಗುತ್ತದೆ.
- ವಿಷಯವನ್ನು ಸಹಸಂಬಂಧ ಕಲ್ಪಸಿ ಬೋಧನೆ ಮಾಡುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲ
- ಉದಾ :- ಸಮಾಜ, ಪೌರನೀತಿ, ಭೂಗೋಳ, ಅರ್ಥಶಾಸ್ತ್ರ ಇತ್ಯಾದಿ ವಿಷಯಗಳ
- ಪಠ್ಯಕ್ರಮದ ವಿವಿಧ ವಿಷಯಗಳ ನಡುವೇ ಇರುವ ಅನ್ಯೋನ್ಯವೇ ಸಹಸಂಬಂಧ ಆಗಿದೆ.
- ಸಹಸಂಬಂಧದ ವಿಧಗಳು.

**ಆಕಸ್ಮಿಕ /ಪ್ರಾಸಂಗಿಕ/ಸಾಂದರ್ಭಿಕ** ಸಹಸಂಬಂಧ

- ಇಲ್ಲಿ ಶಿಕ್ಷಕ ಯಾವುದೇ ಪೂರ್ವ ನಿಯೋಜನೆ ಇಲ್ಲದೆ ಇತಿಹಾಸ ವಿಷಯವನ್ನು ಬೇರೆ ಬೇರೆ ವಿಷಯದೊಂದಿಗೆ ಸಹಸಂಬಂಧ ಕಲ್ಪಸುವುದು.

**ಕ್ರಮಬದ್ದ /ವ್ಯವಸ್ಥಿತ ಸಹಸಂಬಂಧ ;-** ಇತಿಹಾಸವನ್ನ ಪೂರ್ವನಿರ್ಧರಿತ ಯೋಜನೆಯೊಂದಿಗೆ ಸಹಸಂಬಂಧಕರಿಸುವುದು.

- ನದಿ ಕಣವೆ ನಾಗರೀಕತೆ ಹೇಳುವಾಗ ಭೂಗೋಳ ವಿಷಯದ ನದಿಗಳ ಕುರಿತು ಹೇಳುವುದು

**ಸಮಕೇಂದ್ರೀಕೃತ ಸಹಸಂಬಂಧ:-** ಇತಿಹಾಸದ ಒಂದು ಘಟನೆಯನ್ನು ಅದಕ್ಕೊ ಮೊದಲೇ ಬೋಧಿಸಿದ ಘಟನೆದೊಂದಿಗೆ ಅನುಬಂದಿಸುವುದು.

- ಇತಿಹಾಸ ಮತ್ತು ಭೂಗೋಳ ಸಹಸಂಬಂಧ
- ಭಗೋಳ ಇತಿಹಾಸದ ಕಣ್ಣು ಇದ್ದಂತೆ .
- ಇತಿಹಾಸವನ್ನು ಬೌಗೋಳಿಕ ಅಂಶಗಳ ಆಧಾರವಿಲ್ಲದೆ ಪೂರಕವಾಗಿ ತಿಳಿಯಲು ಸಾಧ್ಯವಿಲ್ಲ
- ಇತಿಹಾಸ ಘಟನೆ ನಡೆಯಬೇಕಾದರೆ ಅದಕ್ಕೆ ಸ್ಥಳ ,ಕಾಲ ಬೇಕೇ ಬೇಕು ,ಸ್ಥಳ ಎನ್ನವುದು ಭೌಗೋಳಿಕ ಅಂಶ ಆಗಿದೆ.
- ಭಗೋಳ ಸ್ಥಳ ವಿವರಣೆ ನೀಡಿದರೆ ಇತಿಹಾಸ ಕಾಲದ ವಿವರಣೆ ನೀಡುವುದು.

JSS CAREER ACADEMY

- ಇತಿಹಾಸ ನಿರೂಣಾತ್ಮಕ ಎಂದು ಭೂಗೋಳ ಶಾಸ್ತ್ರವನ್ನು ವಿವರಣಾತ್ಮಕ ಎಂದು ಕರೆದಿದ್ದಾರೆ.
- ಇತಿಹಾಸ ಮತ್ತು ಸಾಹಿತ್ಯದ ಸಹ ಸಂಬಂದ
- ಇವು ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ
- ಇತಿಹಾಸವು ಸಾಹಿತ್ಯಕ್ಕೆ ಸ್ಪೂರ್ತಿಯಾಗಿದೆ.
- ಇತಿಹಾಸ ಗತಕಾಲದ ಘಟನೆ ತಿಳಿಸಿದರೆ ಸಾಹಿತ್ಯ ಅದೇನೇ ವರ್ಣರಂಜಿತವಾಗಿ ತಿಳಿಸುವುದು.
- ಇತಿಹಾಸ ಮತ್ತು ಪೌರನೀತಿ ಸಹ ಸಂಬಂಧ
- ಇತಿಹಾಸ ಗತಕಾಲದ ಘಟನೆಗಳನ್ನು ಅಧ್ಯಯನ ಮಾಡುವುದು, ಪೌರನೀತಿ ಸಮಕಾಲಿನ ಅಂಶಗಳನ್ನು ಅಧ್ಯಯನ ಮಾಡುವುದು.
- ಇತಿಹಾಸ ಹಿಂದಿನ ಸರಕಾರದ ರಚನೆ ,ಪೌರನೀತಿ ಈಗಿನ ಸರಕಾರದ ರಚನೆ ತಿಳಿಸುವುದು.
- ಇತಿಹಾಸಿದಿಂದ ಪ್ರತ್ಯೇಕಿಸಲ್ಪಟ್ಟ ಪೌರನೀತಿ ಕುರುಡು ,ಪೌರನೀತಿ ಇಲ್ಲದ ಇತಿಹಾಸ ಕಿವುಡು ಎಂದು ಹೇಳಿದವರು :- ಸುಲೇಮಾನ್:- ಸಮಾಜ ಬೋಧನಾ ಶಿಕ್ಷಣ ಸಾಮರ್ಥ್ಯ ಹಾಗೂ ತರಗತಿಯಲ್ಲಿ ಶಾಲಾ ಶಿಕ್ಷಕನ ಸಾಮರ್ಥ್ಯ (ಎಲ್ಲಾ ವಿಷಯಗಳಿಗೂ ಅನ್ವಯ ಆಗುವುದು)
- ಸಮಾಜ ವಿಜ್ಞಾನದ ಬಗ್ಗೆ ಆಳವಾದ ಜ್ಞಾನ ಹೊಂದಿರಬೇಕು
- ಶಿಕ್ಷಕನು ವೈಜ್ಞಾನಿಕ ಮನೋಭಾವನೆ ಹೊಂದಿರಬೇಕು.
- ಜ್ಞಾನ ಪ್ರಸಾರದ ಗುರಿ ಹೊಂದಿರಬೇಕು.
- ಸಮಾಜ ವಿಜ್ಞಾನದ ಬೋಧನಾ ವಿವಿಧ  ಕ್ರಮಗಳ ಹಾಗೂ ಪದ್ದತಿಗಳನ್ನು ತಿಳಿದರ ಬೇಕು .
- ಶಿಕ್ಷಕನಿಗೆ ಚಾರಿತ್ರಿಕ ಹಾಗೂ ವಸ್ತ ಸಂಗ್ರಹಣೆಯಲ್ಲಿ ಆಸಕ್ತಿ ಹೊಂದಿರಬೇಕು
- ಶಿಕ್ಷಕನಿಗೆ ನಾಟಕಾಭಿನಯ ಹಾಗೂ ನಿರೂಪಣ ಕಲೆ ಕರಗತವಾಗಿರಬೇಕು
- ಪ್ರಚಲಿತ ವಿದ್ಯಮಾನಗಳ ಪರಿಚಯ ಇರಬೇಕು
- ವಿಷಯದ ಬಗೆಗೆ ಸಂಪೂರ್ಣ ಜ್ಞಾನ ಇರಬೇಕು.
- ಸಮಾಜ ವಿಜ್ಞಾನ ಶಿಕ್ಷಕನಿಗೆ ಕಾಲಕಲ್ಪನೆ ಹಾಗೂ ಊಹೆ ಮಾಡುವ ಸಾಮರ್ಥ್ಯ ಹೊಂದಿರಬೇಕು.
- ಶಿಕ್ಷಣದ ಗುರಿ ಮತ್ತು ಉದ್ದೇಶಗಳ ಬಗ್ಗೆ ಹಾಗೂ ಅವುಗಳ ನಿವಾರಣಾ ಮಾರ್ಗ ತಿಳಿದಿರಬೇಕು (ಗುರಿ ತಲುಪವುದು)

JSS CAREER ACADEMY

- ಪೀಠೋಪಕರಣ ಹಾಗೂ ಪಾಠೋಪಕರಣ ಬಳಕೆ ಮಾಡುವುದರ ಬಗ್ಗೆ ತಿಳುವಳಿಕೆ ಇರಬೇಕು .
- ಶೈಕ್ಷಣಿಕ ಮನೋವಿಜ್ಞಾನದ ಬಗ್ಗೆ ಅರಿವು ಇರಬೇಕು.
- ಶಿಕ್ಷಕನು ಹಾಸ್ಯ ಪ್ರಜ್ಞೆ ಹೊಂದಿರಬೇಕು
- ಸಮಾಜ ವಿಜ್ಞಾನ ಶಿಕ್ಷಕರಿಗೆ ವೃತ್ತಿಪರ ಬೆಳೆವಣಿಗೆಯ ಮಾರ್ಗಗಳು
- ವಿಚಾರ ಸಂಕಿರಣ , ಸಮ್ಮೇಳನ ,ಕಾರ್ಯಾಗಾರ, ಪುನಶ್ಚೇತನ ಕಾರ್ಯಾಗಾರ ,ಸಮಾಜ ವಿಜ್ಞಾನ ಶಿಕ್ಷಕರ ಸಂಘ (ಆಯಾ ವಿಷಯದ ಶಿಕ್ಷಕರ ಸಂಘ)
- ವಿಸ್ತರಣಾ ಉಪನ್ಯಾಸಗಳು
- ಬೇಸಿಗೆ ತರಬೇತಿ ಶಿಬೀರ
- ಗುಂಪು ಅಧ್ಯಯನ
- ಚೈತನ್ಯ ಕಾರ್ಯಕ್ರಮ
- ಸ್ಯಾಟಲೈಟ್ ಕಾರ್ಯಕ್ರಮ
- ಕಂಪ್ಯೂಟರ್ ತರಬೇತಿ
- ಅಂಚೆ ಮೂಲಕ ವೃತ್ತಿಪರ ಬೆಳವಣಿಗೆ
- ಸಮಾಜ ಬೋಧನಾ ವಿಧಾನಗಳು
- ಉಪನ್ಯಾಸ ಪದ್ಧತಿ
- ಚರ್ಚಾ ಪದ್ಧತಿ
- ಯೋಜನಾ ಪದ್ಧತಿ
- ಮೂಲಾದಾರ ಪದ್ಧತಿ
- ಜೀವನ ಚರಿತ್ರಾ ಪದ್ಧತಿ
- ಸಮಸ್ಯೆ ಪರಿಹಾರ ಪದ್ಧತಿ
- ನಾಟಕೀರಣ ಪದ್ಧತಿ
- ಘಟಕ ಪದ್ಧತಿ
- ಪೌರನೀತಿಯ ಬೋಧನಾ ಪದ್ಧತಿಗಳು
- ಸಮೀಕ್ಷಣ ಪದ್ಧತಿ
- ಹೋಲಿಕಾ ಪದ್ಧತಿ

JSS CAREER ACADEMY

- ವೀಕ್ಷಣಾ ಪದ್ಧತಿ
- ಪ್ರಾತ್ಯಕ್ಷಿತೆ ಪದ್ಧತಿ
- ಬೋಧನಾ ಸೂತ್ರಗಳು
- ಸರಳತೆಯಿಂದ ಕಠಿಣದ ಕಡೆಗೆ ಸಾಗುವುದು
- ಗೊತ್ತಿದ್ದರಿಂದ ಗೊತ್ತಿಲ್ಲದ ಕಡೆಗೆ ಸಾಗುವುದು
- ಮೂರ್ತದಿಂದ ಅಮೂರ್ತದ ಕಡೆಗೆ ಸಾಗುವುದು
- ಭಾಗಗಳಿಂದ ಪೂರ್ಣದ ಕಡೆಗೆ ಸಾಗುವುದು
- ಇಡಿಯಿಂದ ಬಿಡಿಯ ಕಡೆಗೆ ಸಾಗುವುದು
- ವಿಶ್ಲೇಷಣೆ ಯಿಂದ ಸಂಶ್ಲೇಷಣೆಯ ಕಡೆಗೆ ಸಾಗುವುದು.
- ಅನ್ವಯದಿಂದ ಸಮನ್ವಯದ ಕಡೆಗೆ ಸಾಗುವುದು.
- ಪ್ರಾಯೋಗಿಕತೆಯಿಂದ ಅನುಭವದ ಕಡೆಗೆ ಸಾಗುವುದು
- ಮನೋವೈಜ್ಞಾನಿಕ ಕತೆಯಿಂದ ತರ್ಕದ ಕಡೆಗೆ ಸಾಗುವುದು.

**ಸಮಾಜ ಬೋಧನಾ ವಿಧಾನಗಳು**

**ಬೋಧನಾ ಪದ್ಧತಿ ಎಂದರೆ :-** ಬೋಧನೆಯನ್ನು ಪರಿಣಾಮಕಾರಿವಾಗಿ ಹಾಗೂ ಸರಳಗೊಳಿಸುವ ಅನಸರಿಸುವ ವಿವಿಧ ಪದ್ಧತಿಗಳೇ ಬೋಧನಾ ಪದ್ಧತಿ ಆಗಿವೆ.

- ಬೋಧನಾ ಪದ್ಧತಿಗಳು ಶೈಕ್ಷಣಿಕ ಗುರಿ, ಉದ್ದೇಶ,ಹಾಗೂ ಪರಿಣಾಮ,ಮೌಲ್ಯಮಾಪನಗಳ ನಡುವಿನ ಕೊಂಡಿಯಾಗಿದೆ.
- ಶಿಕ್ಷಕರ ವಿದ್ಯಾರ್ಥಿಗಳ ಅಸಕ್ತಿ ,ಅಭಿರುಚಿ, ವಿಷಯ ಸೂಚಿ, ವಿದ್ಯಾರ್ಥಿಗಳ ವಯಸ್ಸು, ಸಾಮರ್ಥ್ಯ ಮುಂತಾದವುಗಳ ಆಧಾರದ ಮೇಲೆ ಬೋಧನಾ ವಿಧಾನ ಅಥವಾ ಪದ್ಧತಿಯನ್ನು ಆಯ್ಕೆ ಮಾಡಬೇಕು.

**ಉಪನ್ಯಾಸ ಪದ್ಧತಿ;-**

- ಇದು ಸಂಪ್ರದಾಯಕ ಬೋಧನಾ ಪದ್ಧತಿ ಆಗಿದೆ.
- ಇದು ಏಕಮುಖ ಸಂವಹನ ಪದ್ಧತಿ ಆಗಿದೆ.
- ಇಲ್ಲಿ ಕೇವಲ ವಿದ್ಯಾರ್ಥಿಗಳು ಆಲಿಸುವಿಕೆ ಕ್ರಿಯೆ ಮಾತ್ರ ನಡೆಯುವುದು ಇತರೆ ಚಟುವಟಿಕೆಗಳು ಶೂನ್ಯ.

JSS CAREER ACADEMY

- ಇದು ಬೋಧನಾ ಪದ್ಧತಿಗಳಲ್ಲಿ ಅತ್ಯಂತ ಹಳೆಯದಾದ ಬೋಧನಾ ಪದ್ಧತಿವಾಗಿದೆ. ಇದು ಪ್ರಸ್ತುತ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿದೆ.
- ಈ ವಿಧಾನದಲ್ಲಿ ಶಿಕ್ಷಕನ ಕೇಂದ್ರ ಸ್ಥಾನ

**ಉಪನ್ಯಾಸ ಪದ್ಧತಿ ಎಂದರೆ :-** ಶಿಕ್ಷಕನು ತಾನು ಬೋದಿಸುವ ವಿಷಯವನ್ನು ವಿವಿಧ ಮೂಲಗಳಿಂದ ಸಂಗ್ರಹ ಮಾಡಿಕೊಂಡ ಮಾಹಿತಿಯನ್ನು ವಿದ್ಯಾರ್ಥಿಯ ಮುಂದೆ ವ್ಯಾಖ್ಯೆ ರೂಪದಲ್ಲಿ ಮಂಡಿಸುದಾಗಿದೆ.

- ಹಂತಗಳು
- ಪೂರ್ವಸಿದ್ಧತೆ
- ವಿಷಯ ನಿರೂಪಣೆ
- ಪ್ರಶ್ನೋತ್ತರಕ್ಕೆ ಅವಕಾಶ
- ಉಪನ್ಯಾಸದ ಪುನರ್ಬಲನ
- ಅನುಸರಿಸುವಿಕೆ
- ಉಪನ್ಯಾಸ ಪದ್ಧತಿ ಆಯ್ಕೆ ಮಾಡುವಾಗ ಶಿಕ್ಷಕರು ಅನುಸರಿಸಬೇಕಾದ ಮಾರ್ಗಗಳು
- ಮಕ್ಕಳ ವಯಸ್ಸು, ಸಾಮರ್ಥ್ಯಕ್ಕೆ ಅನುಗುಣವಾಗಿ ಆಯ್ಕೆ ಮಾಡಬೇಕು
- ನಿರೂಪಣೆ ಶೈಲಿ ಚೆನ್ನಾಗಿರುವಂತೆ ಬೋಧನಾ ಅವಧಿಯುದ್ದಕ್ಕೂ ನೋಡಿಕೊಳ್ಳಬೇಕು
- ವಿಷಯವನ್ನು ಹಂತ ಹಂತವಾಗಿ ಬೋದಿಸ ಬೇಕು
- ವಿಷಯಣ ಪ್ರಸ್ತಾಪ ಸರಳ ,ಹಾಗೂ ಸುಂದರವಾಗಿರುವಂತೆ ನೋಡಿಕೊಳ್ಳಬೇಕು.
- ಉಪನ್ಯಾಸದ ಮಧ್ಯದಲ್ಲಿ ವಿನೋಧ ಹಾಗೂ ಹಾಸ್ಯ ಇರುವಂತೆ ನೋಡಿಕೊಳ್ಳಬೇಕು.
- ಉಪನ್ಯಾಸದ ಕೊನೆಯಲ್ಲಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಇರಬೇಕು

**ಗುಣಗಳು:-**

- ಮೌಖಿಕ ವಿಷಯ ಹೆಚ್ಚು ಪರಿಣಾಮಕಾರಿ
- ವಿದ್ಯಾರ್ಥಿಗಳಿಗೆ ಆಲಿಸುವಿಕೆ ತರಬೇತಿ ಉಂಟಾಗುವುದು.
- ವಿದ್ಯಾರ್ಥಿಗಳ ಸಮಯ ಹಾಗೂ ಶ್ರಮ ಉಳಿತಾಯ ಆಗುವುದು.
- ಇದರಿಂದ ವಿದ್ಯಾರ್ಥಿ ಜ್ಞಾನ ಅಭಿವೃದ್ಧಿಯಾಗುವುದು.
- ಏಕಕಾಲದಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಬೋಧಿಸಬಹುದು.

JSS CAREER ACADEMY

- നിഗധിത ಅವಧಿಯಲ್ಲಿ ಪಠ್ಯಕ್ರಮ ಮುಗಿಸಬಹುದು.
- ದೋಷಗಳು
- ಶಿಕ್ಷಕ ಕೇಂದ್ರೀಕೃತ ಪದ್ಧತಿ
- ಮಕ್ಕಳ ಚಟುವಟಿಕೆಗಳಿಗೆ ಆಸ್ಪದವಿಲ್ಲ
- ತರಗತಿ ವೈವಿಧ್ಯಮಯ ಅಭಾವದಿಂದಾಗಿ ಕಲಿಕೆ ನಿರಾಸಕ್ತಿಯಿಂದ ಸಾಗುವುದು.
- ಈ ಪದ್ಧತಿ ಕೇವಲ ಉನ್ನತ ಹಂತಕ್ಕೆ ಮಾತ್ರ ಸೀಮಿತ ಆಗಿದೆ.
- ಇದು ಮಾಡಿ ಕಲಿ ತತ್ವಕ್ಕೆ ವಿರುದ್ಧವಾಗಿದೆ.
- ವೈಜ್ಞಾನಿಕ ದೃಷ್ಟಿಕೋನ ಬೆಳೆಸಲಾರದು
- ಇದು ಮನೋವೈಜ್ಞಾನಿಕ ಪದ್ಧತಿಗೆ ವಿರುದ್ಧವಾಗಿದೆ
- ಕಥನ ಪದ್ಧತಿ;-
- ಈ ಪದ್ಧತಿಯ ಪ್ರತಿಪಾದಕರು :- ಪ್ಲೇಟೋ
- ಇದು ಇತಿಹಾಸ ಬೋಧನೆಯ ಪದ್ಧತಿಯಲ್ಲಿ ಅತ್ಯುತ್ತಮವಾದ ಬೋಧನಾ ಪದ್ಧತಿಯಾಗಿದೆ.
- ವಿಷಯವನ್ನು ಕಥಾ ನಿರೂಪಣಾ ಪದ್ಧತಿಯಲ್ಲಿ ಹೇಳುವುದರಿಂದ ವಿದ್ಯಾರ್ಥಿ ಆಸಕ್ತಿಯಿಂದ ಕಲಿಯುತ್ತಾರೆ.
- ಈ ಪದ್ಧತಿಗೆ ಕಥಾ ನಿರೂಪಣಾ ಪದ್ಧತಿ ಎಂದು ಕರೆಯಲಾಗುತ್ತದೆ.

**ಕಥೆ ಅರ್ಥ :-** ಒಂದು ವಸ್ತು ವಿಷಯ, ವ್ಯಕ್ತಿ, ಘಟನೆ ,ಸಂದರ್ಭಗಳ ಬಗೆಗೆ ಇರುವ ವಿಷಯ ಅಥವಾ ಘಟನೆಗಳನ್ನು ಕ್ರಮಬದ್ಧವಾಗಿ ಜೋಡಿಸಿಕೊಂಡು ವಿದ್ಯಾರ್ಥಿಗಳ ಮುಂದೆ ಮೌಖಿಕವಾಗಿ ವಿವರಿಸುವುದೆ ಕಥೆಯಾಗಿದೆ.

**ಕಥೆಗಳಲ್ಲಿ ಮೂರು ಪ್ರಕಾರಗಳು**

- ಸಣ್ಣ ಕಥೆಗಳು
- ದಂತಕಥೆಗಳು
- ಪೌರಣಿಕ ಕಥೆಗಳು
- ಕಥೆಯಿಂದಾಗುವ ಪ್ರಯೋಜನೆಗಳು
- ಇದು ವಿದ್ಯಾರ್ಥಿಯ ಕಲ್ಪನಾಶಕ್ತಿ ವೃದ್ಧಿಸಿ ಅವರ ಕಲಿಕೆಯನ್ನು ಪರಿಣಾಮಕಾರಿ ಮಾಡುವುದು.
- ಮಕ್ಕಳ ಸೃಜನಶೀಲ ಕಾರ್ಯದಲ್ಲಿ ಪ್ರೇರಣೆ ನೀಡುವುದು.

JSS CAREER ACADEMY

- ಇದು ವಿದ್ಯಾರ್ಥಿಗಳಲ್ಲಿ ಉತ್ತಮ ಸಾಮಾಜಿಕ ಹಾಗೂ ನೈತಿಕ ಗುಣಗಳನ್ನು ಬೆಳೆಸುವುದು.
- ಉದಾ :- ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆ
- ವಿದ್ಯಾರ್ಥಿಗಳು ಕಥೆಯಿಂದ. ಪ್ರೇರಣಿಗೊಂಡು ಆಸಕ್ತಿಯಿಂದ ತಮ್ಮ ವೈಯಕ್ತಿಕ ಕೆಲಸಗಳನ್ನು ಮಾಡುತ್ತಾರೆ.
- ವಿದ್ಯಾರ್ಥಿಗಳಿಗೆ ಯಾವುದೇ ಶಾರೀರಿಕ ಅಯಾಸವಿಲ್ಲದೆ ಕಲಿಕೆ ನಿರಂತರವಾಗಿ ಸಾಗುವುದು
- ಈ ಪದ್ದತಿಯಿಂದ ವರ್ಗಕೋಣೆ ನಿಯಂತ್ರಣ ಮಾಡಬಹುದು.
- ವಿಷಯವನ್ನು ಒಂದರ ನಂತರ ಒಂದು ಬೋಧನೆ ಮಾಡುವುದರಿಂದ ವಿದ್ಯಾರ್ಥಿಯಲ್ಲಿ ಕಾಲಪ್ರಜ್ಞೆ ಬೆಳೆಯುವುದು.
- ಶಿಕ್ಷಕನು  ಪೂರ್ವಗ್ರಹಪಿಡಿತನಾಗಿರದೆ ವಿದ್ಯಾರ್ಥಿಗಳಿಗೆ ನೈಜ ಕಥೆಗಳನ್ನು ಹೇಳಬೇಕು.
- ಮಕ್ಕಳಿಗೆ ಸಾಹಸಮ ಕಥೆ ಹೇಳುವುದರಿಂದ ಸಾಹಸಮಯ ಗುಣ ಬೆಳೆಯುವುದು
- ಶಿಕ್ಷಕನು ಕಥೆ ಹೇಳುವಾಗ ಹಾಸ್ಯ,ನಟನೆ, ಮುಂತಾದ ಕೌಶಲ್ಯಗಳನ್ನು ಮಕ್ಕಳು ಅನುಕರಣೆ ಮಾಡುವವರು.
- ದೋಷಗಳು
- ಇದು ಪ್ರಾಥಮಿಕ ಹಂತಕ್ಕೆ ಮಾತ್ರ ಸೂಕ್ತವಾದ ಪದ್ದತಿ ಆಗಿದೆ.
- ಈ ಪದ್ದತಿಯಿಂದ ಸಾಮಾಜಿಕ,ಆರ್ಥಿಕ ,ರಾಜಕಿಯ ಸಮಸ್ಯೆಯನ್ನು ತಿಳಿಸುವುದಕ್ಕೆ ಸಾಧ್ಯವಿಲ್ಲ
- ಕೆಲವು ವಿದ್ಯಾರ್ಥಿಗಳು ಕಥೆಯಲ್ಲಿ ನಿರಾಸಕ್ತಿ ತೋರಿಸಬಹುದು
- ಪಠ್ಯಕ್ರಮದ ಎಲ್ಲಾ ಘಟಕಗಳಿಗೆ ಇದನ್ನು ಅನ್ವಯಿಸುವುದು ಕಷ್ಟ
- ವಿದ್ಯಾರ್ಥಿಗಳನ್ನ ಕಲ್ಪನಾ ಲೋಕದಲ್ಲಿ ಮೊಳಗಿಸುವುದು. ಇತ್ಯಾದಿ

**ಯೋಜನಾ ಪದ್ಧತಿ :-**

- ಪ್ರತಿಪಾದಕರು :- ಕಿಲ್ ಪ್ಯಾಟ್ರಿಕ್
- ಯೋಜನಾ ಪದ್ದತಿ ತತ್ವಗಳು
- ಅನುಭವ ತತ್ವ
- ಚಟುವಟಿಕೆ ತತ್ವ
- ಉದ್ದೇಶ ತತ್ವ
- ನೈಜತೆಯ ತತ್ವ

JSS CAREER ACADEMY

- ಉಪಯುಕ್ತತೆಯ ತತ್ವ
- ಯೋಜನಾ ಪದ್ಧತಿ ಹಂತಗಳು
- 1)ಸನ್ನೀವೇಶ ನೀಡುವುದು-: ಮೊದಲನೆ ಹಂತ

**ಯೋಜನೆ ಆಯ್ಕೆ:-**

- ಉದ್ದೇಶೀಸುವುದು :- ಯೋಜನೆ ಸ್ವರೂಪ ಮತ್ತು ಗುರಿ ಬಗ್ಗೆ ನಿರ್ಧಾರ ಮಾಡಲಾಗುವುದು.

**ಯೋಜಿಸುವುದು-:**

- ಶಿಕ್ಷಕರ ಕೇವಲ ಮಾರ್ಗದರ್ಶಕ
- ವಿದ್ಯಾರ್ಥಿಗಳು ತಾವೇ ಸ್ವತಃ ಯೋಜನೆ ತಯಾರಿಸಬೇಕು.
- ಯೋಜನೆಯ ಕುರಿತು ಚರ್ಚೆ ಮಾಡಬೇಕು
- ನಂತರ ಯೋಜನಾ ಪುಸ್ತಕದಲ್ಲಿ ಬರೆಯಬೇಕು
- ಕಾರ್ಯಾಚರಣೆ:-
- ಕಲಿಕೆ ಫಲ ನಿರ್ಧಾರ ಮಾಡುವ ಹಂತ
- ಮೌಲ್ಯಮಾಪನ
- ದಾಖಲೆ ಮಾಡುವುದು
- ಇದು ಕೊನೆ ಹಂತವಾಗಿದೆ
- ಯೋಜನಾ ಪದ್ಧತಿ ಅನುಕೂಲಗಳು
- ಇದು ಮನೋವಿಜ್ಞಾನ ತತ್ವಗಳಾದ ಸಿದ್ಧತಾ ತತ್ವ, ಅಭ್ಯಾಸ ತತ್ವ, ಪರಿಣಾಮ ತತ್ವ ಒಳಗೊಂಡಿದೆ.
- ಕಂಠಪಾಠಕ್ಕೆ ಅವಕಾಶ ಇಲ್ಲ.
- ಸಾಮಾಜಿಕ ಗುಣಗಳಾದ ಸಹಕಾರ, ತಾಳ್ಮೆ ಸಂಯಮ ಮುಂತಾದ ಗುಣಗಳು ಬೆಳೆಯುವುದು.
- ಪ್ರಜಾಸತ್ತಾತ್ಮಕ ಕಲಿಕೆ ವರ್ಗಾವಣೆ ಆಗುವುದು
- ಇಲ್ಲಿ ಚಟುವಟಿಕೆಗಳು ಉದ್ದೇಶ ಪೂರಿತವಾಗುವುದು.
- ಮಾಡುತ್ತ ಕಲಿ ತತ್ವವನ್ನು ಅನಸರಿಸುವುದು.

**ಪಠ್ಯಪುಸ್ತಕ ಪದ್ಧತಿ:-**

JSS CAREER ACADEMY

- ಪಠ್ಯ ಪುಸ್ತಕದ ಸಹಾಯದಿಂದ ಬೋಧಿಸುವಂತಹ ಪದ್ಧತಿಗೆ ಪಠ್ಯಪುಸ್ತಕ ಪದ್ಧತಿ ಎಂದು ಕರೆಯಲಾಗುತ್ತದೆ.
- ಈ ಪದ್ಧತಿಯಲ್ಲಿ ಶಿಕ್ಷಕನು ಪ್ರಶ್ನೆ ಕೇಳವುದರೊಂದಿಗೆ ಪಾಠವನ್ನು ನಿರ್ವಹಣೆ ಮಾಡುವನು.
- ಪಠ್ಯಪುಸ್ತಕದ ಅನುಕೂಲಗಳು

**ಪಠ್ಯಪುಸ್ತಕ ಎಂದರೆ :-** ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳನ್ನು ಗಮನದಲ್ಲಿಟ್ಟುಕೊಂಡ ತರಗತಿಗಾಗಿ ತಯಾರಿಸಿದ ಲಿಖಿತ ದಾಖಲೇ ಪಠ್ಯಪುಸ್ತಕ ಆಗಿದೆ

- ಇದು ವಿದ್ಯಾರ್ಥಿಗಳ ಕಲಿಕಾ ಅಗತ್ಯತೆಗಳನ್ನು ನೆರೆವರಿಸುವುದು.
- ವಿದ್ಯಾರ್ಥಿಗಳಿಗೆ ಅಧ್ಯಯನ ಕೌಶಲ್ಯ ಬೆಳೆಸಿಕೊಳ್ಳವುದಕ್ಕೆ ಸಹಾಯಕ.
- ಪಠ್ಯಪುಸ್ತಕವು ಕಲಿಕಾ ಸಂಗತಿಗಳ ಬಗ್ಗೆ ನಿಖರತೆ ಒದಗಿಸುವುದು.
- ಈ ಪದ್ಧತಿಯು ಎಲ್ಲಾ ಪದ್ಧತಿಗಳಿಗೆ ಮೂಲಾಧಾರ ಆಗಿದೆ.
- ವಿದ್ಯಾರ್ಥಿಗಳ ಬೌದ್ಧಿಕ ಹಾಗೂ ವಾರ್ಷಿಕ ಪರೀಕ್ಷೆಗೆ ಅನುಕೂಲವಾಗುವುದು.
- ಅನಾನುಕೂಲಗಳು
- ಕಂಠಪಾಠಕ್ಕೆ ಅವಕಾಶ ಮಾಡಿಕೊಡುವುದು
- ಇದು ವಿದ್ಯಾರ್ಥಿಗಳ ಜ್ಞಾನವನ್ನು ಪಠ್ಯಪುಸ್ತಕಕ್ಕೆ ಸಿಮಿತ ಮಾಡುವುದು.
- ಇದು ಮಕ್ಕಳಲ್ಲಿ ಕಲ್ಪನಾ ಶಕ್ತಿ ಬೆಳೆಸುವುದಿಲ್ಲ
- ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಮೂಡುವುದಿಲ್ಲ . (ಗಿಳಿ ಪಾಠಕ್ಕೆ ಅವಕಾಶ ಇರುವುದು)
- ವಿಷಯಕ್ಕೆ ಜೀವಂತ ವಿವರಣೆ ನೀಡುವುದಿಲ್ಲ.ಇತ್ಯಾದಿ

**ಚರ್ಚಾ ಪದ್ಧತಿ :**

- ಪ್ರಮುಖ ಉದ್ದೇಶ :- ಸಾಮೂಹಿಕ ತಿರ್ಮಾನ ತೆಗೆದುಕೊಳ್ಳವುದು.

**ಚರ್ಚಾ ಪದ್ಧತಿ ಎಂದರೆ :-** ಗೊತ್ತು ಪಡಿಸಿದ ವಿಷಯದ ಬಗ್ಗೆ ವರ್ಗದ ಎಲ್ಲಾ ವಿದ್ಯಾರ್ಥಿಗಳು ಪರಸ್ಪರ ಚರ್ಚಿಸಿ ಸತ್ಯಾಸತ್ಯತೆಯನ್ನು ಮನಗಂಡು ಅಂತಿಮ ಏಕಾಭಿಪ್ರಾಯಕ್ಕೆ ಅಥವಾ ತಿರ್ಮಾನಕ್ಕೆ ಬರುವುದೇ ಚರ್ಚಾ ಪದ್ಧತಿ ಆಗಿದೆ.

- ಚರ್ಚಾಯಲ್ಲಿರಬೇಕಾದ
- ನಾಯಕ
- ಗುಂಪು

JSS CAREER ACADEMY

- ವಿಷಯ
- ಅವಶ್ಯಕ ಸಾಮಾಗ್ರಿಗಳು/ ಅಧ್ಯಯನ ಸಾಮಾಗ್ರಿಗಳು
- ಮೌಲ್ಯಮಾಪನ

## ಅನುಕೂಲಗಳು

- ಸಾಮೂಹಿಕ ತಿರ್ಮಾನ ಕೈಗೊಳ್ಳವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು.
- ವಿದ್ಯಾರ್ಥಿಯಲ್ಲಿ ಚರ್ಚಾ ಮನೋಭಾವ ಬೆಳೆಯುವುದು ಹಾಗೂ ಅದರ ಸತ್ಯಾಸತ್ಯತೆ ತಿಳಿಯುವವು ಆಸಕ್ತಿ ಬೆಳೆಯುವುದು
- ಮಂದ ಕಲಿಕಾ ವಿದ್ಯಾರ್ಥಿಗಳಿಗೆ ಅನುಕೂಲ
- ಬೇರೆ ಬೇರೆ ಜನರ ಅಭಿಪ್ರಾಯಗಳನ್ನು ತೂಗಿ ನೋಡುವ ಸಾಮರ್ಥ್ಯ ಬೆಳೆಯುವುದು.
- ಬೇರೆಯವರ ಅಭಿಪ್ರಾಯನ್ನು ಸ್ವಿಕರಿಸುವ ಮನೋಭಾವ ಬೆಳೆಯುವುದು.
- ಸ್ವಮೌಲ್ಯಮಾಪನಕ್ಕೆ ಪುಷ್ಟಿ ನೀಡುವುದು
- ವಿದ್ಯಾರ್ಥಿಯಲ್ಲಿ ಜ್ಞಾನ ಹೆಚ್ಚಾಗುವುದು.
- ವಿದ್ಯಾರ್ಥಿಯಲ್ಲಿ ತಾಳ್ಮೆಯ ಗುಣ ಬೆಳೆಯುವುದು.
- ಉತ್ತಮ ನಾಯಕತ್ವ ಗುಣ ಬೆಳೆಯುವುದು
- ದೋಷಗಳು
- ಚರ್ಚೆ ಅಂತಿಮ ಅವಧಿಯಲ್ಲಿ ಕೊನೆಯ ತಿರ್ಮಾನಕ್ಕೆ ಬರುವುದು ಕಷ್ಟ
- ಚರ್ಚೆಯು ತರಗತಿಯಲ್ಲಿ ಘರ್ಷಣೆ ಉಂಟು ಮಾಡುವುದು.
- ಪಠ್ಯದ ಎಲ್ಲಾ ಪಾಠಗಳಿಗೆ ಅನ್ವಯ ಆಗಲಾರದು.
- ಈ ಪದ್ಧತಿಯಲ್ಲಿ ಮಂದಕಲಿಕೆಯ ವಿದ್ಯಾರ್ಥಿಗಳು ಭಾಗವಹಿಸುವುದಿಲ್ಲ.
- ವಿದ್ಯಾರ್ಥಿಗಳಲ್ಲಿ ಪರಸ್ಪರ ವೈರತ್ಯ ಬೆಳೆಯುವುದು
- ಇದು ನಾಯಕನ ಸಂಘಟನೆ ಮೇಲೆ ಅವಲಂಬಿಸಿದೆ.

## ಮೂಲಾಧಾರ ಪದ್ಧತಿ

- ಆಧುನಿಕ ಬೋಧನಾ ಪದ್ಧತಿಗಳಲ್ಲಿ ಇದೊಂದು ಆಗಿದೆ.
- ಇತ್ತೀಚಿನ ಬೋಧನಾ ಪದ್ಧತಿ ಆಗಿದೆ.
- ಇದು ವಿದ್ಯಾರ್ಥಿಗಳಿಗೆ ನೇರವಾದ ಅನುಭವ ನೀಡುವುದು.

JSS CAREER ACADEMY

**ಮೂಲಾಧಾರ ಎಂದರೇನು :-** ಹಿಂದೆ ಮಾನವನು ಉಪಯೋಗಿಸಿದ ಆಯುಧಗಳು ನಿರ್ಮಿಸಿದ, ಸ್ಮಾರಕ, ಕೆತ್ತನೆಯ ಕೆಲಸ ,ಬಣ್ಣದ ಬಿತ್ತಿಯ ಚಿತ್ರ, ಮಡಿಕೆ ಕುಡಿಕೆಗಳು, ಸಾಹಿತ್ಯ ಮುಂತಾದವುಗಳು ಮೂಲಾಧಾರಗಳಾಗಿವೆ.

**ಮೂಲಾಧಾರ ಪದ್ಧತಿ ಎಂದರೆ:-** ವಿದ್ಯಾರ್ಥಿಗಳಿಂದ ಇತಿಹಾಸದ ಮೂಲವಸ್ತುಗಳ ಮೇಲಿನ ಸಂಶೋಧನೆಯೇ ಮೂಲಾಧಾರ ಪದ್ಧತಿಯಾಗಿದೆ.

- ಮೂಲಾಧಾರ ಪದ್ಧತಿ ಉದ್ದೇಶ
- ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಬೆಳೆಸುವುದು
- ಇತಿಹಾಸದ ಘಟನೆಗಳ ನೈಜತೆ ಕಂಡು ಕೊಳ್ಳವುದು.
- ಇತಿಹಾಸ ಪುನರ ರಚಿಸುವುದು ಹಾಗೂ ವಿದ್ಯಾರ್ಥಿಯಲ್ಲಿ ಕಲ್ಪನಾ ಶಕ್ತಿ ಬೆಳೆಸುವುದು.
- ವಿದ್ಯಾರ್ಥಿಯಲ್ಲಿ ಮೂಲಾಧಾರ ಪದ್ಧತಿ ಸಂಗ್ರಹಿಸುವ ಗುಣ ಬೆಳೆಸುವುದು.

**ಮೂಲಾಧಾರಗಳಿಗಾಗಿ :-** ಎಂಟನೇ ತರಗತಿಯ ಪುಸ್ತಕ ನೋಡಿ

- ಮೂಲಾಧಾರ ಪದ್ಧತಿಯಿಂದ ಮಕ್ಕಳಿಗೆವಾಗುವ ತೊಂದರೆಗಳು
- ಮೂಲಾಧಾರಗಳಾದ ಶಾಸನಗಳು, ಸಾಹಿತ್ಯ,ನಾಣ್ಯಳ ಮೇಲೆ ಲಿಪಿ ವಿವಿಧ ಭಾಷೆಯಲ್ಲಿದೆ.
- ಉದಾ :- ಪ್ರಾಕೃತ್ ,ಪರ್ಷಿಯನ್, ಇತ್ಯಾದಿ
- ಮೂಲಾಧಾರಗಳ ವಿಶ್ವಸನೀಯ ವಲ್ಲ
- ಇದಕ್ಕೆ ಸಾಕಷ್ಟು ಸಮಯಬೇಕು ಇದರಿಂದ ಶಾಲಾ ವೇಳಾ ಪಟ್ಟಿಗೆ ತೊಂದರೆ ಆಗುವುದು.
- ಕೆಲವೊಂದು ಮೂಲಾಧಾರಗಳು ವಿದ್ಯಾರ್ಥಿಗಳಿಗೆ ಅರ್ಥ ಅಥವಾ ಸಾಮರ್ಥ್ಯ ಇರುವುದಿಲ್ಲ
- ಕೆಲವು ಮೂಲಾಧಾರಗಳು ವಿವಾದಾತ್ಮಕ ಆಗಿರುವುದು
- ಮೂಲಾಧಾರ ಬೋಧನಾ ಪದ್ಧತಿ ಅನುಕೂಲ
- ಇದು ಇತಿಹಾಸ ವಿಷಯಕ್ಕೆ ಜೀವ ತುಂಬುವುದು
- ಯೋಗ್ಯ ರೀತಿಯಲ್ಲಿ ತರ್ಕಿಸುವುದಕ್ಕೆ ,ನಿರ್ಣಯಿಸುವುದಕ್ಕೆ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದು
- ವಿದ್ಯಾರ್ಥಿಗಳ ಕುತೂಹಲ ತಣಿಸುವುದು

JSS CAREER ACADEMY

- ವಿದ್ಯಾರ್ಥಿಗಳಿಗೆ ಮೂಲಧಾರದ ಕುರಿತು ಉತ್ತಮ ತಿಳುವಳಿಕೆ ಹಾಗೂ ಅನುಭವ ದೊರೆಯುವುದು.
- ಕಲಿಕೆಯು ಪರಿಣಾಮಕಾರಿಯಾಗುವುದು.
- ಇತಿಹಾಸವನ್ನು ಪುನರ್ ನಿರ್ಮಾಣ ಮಾಡುವ ಭಾವನೆಯನ್ನು ಪ್ರಚೋದನೆ ಮಾಡುವುದು.
- ವಿದ್ಯಾರ್ಥಿಯಲ್ಲಿ ಪ್ರಜಾಸತ್ತಾತ್ಮಕ ಗುಣಬೆಳೆಯುವುದು.

**ಅನಾನುಕೂಲಗಳು**

- ಮೂಲ ವಸ್ತುಗಳನ್ನು ಸಂಗ್ರಹ ಮಾಡುವುದು ಕಷ್ಟ ಹಾಗೂ ಅವುಗಳ ಸುಲಭವಾಗಿ ಸಿಗಲಾರವು
- ಈ ಪದ್ಧತಿಯು ಕಠಿಣವಾದ ಪದ್ಧತಿಯಾಗಿದೆ. ಇದು ಪ್ರಾಥಮಿಕ ಶಾಲಾ ಹಂತದ ವಿದ್ಯಾರ್ಥಿಗಳಿಗೆ  ಸೂಕ್ತವಲ್ಲ.
- ಈ ಪದ್ಧತಿಯಿಂದ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಪೂರ್ಣ ಪ್ರಯೋಜನೆ ಪಡೆಯಲಾರಾರು
- ಉದಾ :- ದೇಶದ ಚರಿತ್ರೆ ಹಲವಾರ ಭಾಷೆಯಲ್ಲಿ ರಚನೆಗೊಂಡಿದೆ .
- ಉದಾ :- ಪರ್ಶಿಯನ್, ಸಂಸ್ಕೃತ
- ಶಿಕ್ಷಕರಿಗೆ ತೊಂದರೆ ಆಗುವುದು.
- ಇದು ಕೇವಲ ಬುದ್ಧಿವಂತ ಮಕ್ಕಳಿಗೆ ಸಂಬಂಧಿಸಿದೆ.
- ಇತಿಹಾಸದ ಎಲ್ಲಾ ವಿಷಯಗಳಿಗೆ ಮೂಲಾಧಾರ ನೀಡುವುದಕ್ಕೆ ಸಾಧ್ಯವಿಲ್ಲ.

**ಸಮಸ್ಯೆ ಪರಿಹಾರ ವಿಧಾನ :**

- ಇದೊಂದು ಪರಿಣಾಮಕಾರಿಯಾದ ಬೋಧನಾ ಪದ್ಧತಿವಾಗಿದೆ.
- ಈ ಪದ್ಧತಿಯು ವೈಜ್ಞಾನಿಕ ಹಾಗೂ ತಾರ್ಕಿಕ್ ಪದ್ದತಿ ಆಗಿದೆ.

**ಸಮಸ್ಯೆ ಪರಿಹಾರ ಪದ್ದತಿ ಎಂದರೇನು ?**

- ವಿದ್ಯಾರ್ಥಿಗಳು ಶಿಕ್ಷಕನ ಸಹಾಯದಿಂದ  ಆಯ್ದುಕೊಂಡು ಸಮಸ್ಯೆಗಳಿಗೆ ವೈಜ್ಞಾನಿಕ ಕ್ರಮ ಅನ್ವಯಿಸಿ ವ್ಯವಸ್ಥಿತ ಪರಿಹಾರವನ್ನು ಕಂಡುಕೊಳ್ಳುವ ಪದ್ದತಿಯೇ ಸಮಸ್ಯಾ ಪರಿಹಾರ ಪದ್ದತಿಯಾಗಿದೆ.

**ಅಸುಬೆಲ್ :-** ಸಮಸ್ಯಾ ಪರಿಹಾರ ಪದ್ದತಿಯು ಸಂಶೋಧನಾ ಆಧಾರಿತ ಕಲಿಕೆ ಹಾಗೂ ಪರಿಕಲ್ಪನೆಗಳನ್ನು ಮೂಡಿಸುವ ಅಂಶಗಳನ್ನು ಒಳಗೊಂಡಿದೆ ಎಂದು ಹೇಳಿದ್ದಾರೆ.

JSS CAREER ACADEMY

➢ ಸಮಾಜ ವಿಜ್ಞಾನ ಬೋಧನೆಯಲ್ಲಿ ವಿದ್ಯಾರ್ಥಿಗಳ ಆಲೋಚನಾ ಶಕ್ತಿಯನ್ನು ಬೆಳೆಸುವುದೆ ಸಮಸ್ಯೆ ಪರಿಹಾರ ಬೋಧನಾ ವಿಧಾನದ ಗುರಿ.

### ಸಮಸ್ಯಾ ಪರಿಹಾರ ಹಂತಗಳು

➢ ನಿರ್ದಿಷ್ಟ ವಿಷಯವನ್ನು ಆಯ್ಕೆ ಮಾಡುವುದ ಆಥವಾ ಸಮಸ್ಯೆ ಆಯ್ಕೆ.

➢ ಸಮಸ್ಯೆಯ ಸ್ಪಷ್ಟೀಕರಣ

➢ ವಸ್ತುನಿಷ್ಠ ವಿಷಯ ಸಂಗ್ರಹಣೆ

➢ ಮಾಹಿತಿ ಸಂಘಟನೆ

➢ ಸಮಸ್ಯೆಯ ಪರಿಹಾರಕ್ಕೆ ನಿರ್ಣಯಗಳನ್ನು ರೂಪಿಸುವುದು

➢ ಸಮಸ್ಯೆಗೆ ಪರಿಹಾರ

### ಅನುಕೂಲಗಳು:-

➢ ದೈನಂದಿನ ಜೀವನದಲ್ಲಿ ಎದುರಾಗುವ ಸಮಸ್ಯೆಗಳ ಬಗೆಹರಿಸುವ ಸಾಮರ್ಥ್ಯ ಬೆಳೆಸುವುದು.

➢ ಮಕ್ಕಳ ಕಲ್ಪನೆ, ತಿಳುವಳಿಕೆ, ಕೌಶಲ್ಯ ವೃದ್ಧಿಸುವುದು.

➢ ವಿದ್ಯಾರ್ಥಿ ಮತ್ತು ಉಪಾಧ್ಯಯರು ನಡುವೆ ನಿಕಟ ಸಂಬಂಧ ಬೆಳೆಯುವುದು.

➢ ಮಕ್ಕಳ ಕಲಿಕೆ ಚಟುವಟಿಕೆಯಿಂದ ಬರುವುದು.

### ಇತಿಮಿತಿಗಳು :

➢ ಈ ಪದ್ಧತಿಯು ಬೋಧನೆಯು ಎಲ್ಲಾ ಪಾಠಗಳಿಗೆ ಅನ್ವಯ ಆಗಲಾರದು.

➢ ನಿಗದಿತ ಅವಧಿಯಲ್ಲಿ ಪಠ್ಯಕ್ರಮ ಮುಗಿಸುವುದಕ್ಕೆ ಕಷ್ಟ ಸಾಧ್ಯ

➢ ಕೇವಲ ಸಮಸ್ಯೆಗಳೇ ಇದ್ದರೇ ಕಲಿಕೆ ಬೇಸರವಾಗುವುದು.

➢ ಕೆಲವು ವೇಳೆ ವಿಚಾರಗೊಷ್ಠಿಯಾಗಬಹುದು

➢ ಎಲ್ಲಾ ವಿದ್ಯಾರ್ಥಿಗಳು ಕಲಿಕೆ ಭಾಗವಹಿಸುವುದಿಲ್ಲ

➢ ಕೆಲವೊಮ್ಮೆ ಕಲಿಕೆ ಅರ್ಥಹೀನವಾಗುವುದು.

### ವಿವರಣಾ ವಿಧಾನ

➢ ಅತ್ಯಂತ ಪ್ರಮುಖವಾದ ಬೋಧನಾ ವಿಧಾನವಾಗಿದೆ. ಇದು ಕಥನ ಪದ್ಧತಿಯಂತೆ ಇದ್ದು ಉಪನ್ಯಾಸ ವಿಧಾನಕ್ಕಿಂತ ಬಿನ್ನವಾಗಿದೆ.

➢ ಸುಲಭ ಹಾಗೂ ಉಪಯುಕ್ತ ವಾಗಿದೆ...

JSS CAREER ACADEMY

- ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನ ವಿಷಯಗಳ ಬಗ್ಗೆ ಸ್ಪಷ್ಟ ಚಿತ್ರಣವನ್ನು ಹೊಂದುವಂತೆ ಉತ್ತಮ ಭಾಷೆಯ ಸಹಾಯದಿಂದ ವಿವರಣೆ ನೀಡುವುದೇ ವಿವರಣಾ ಪದ್ಧತಿ ಎಂದು ಕರೆಯಲಾಗುತ್ತದೆ.

**ಸ್ವರೂಪ**

- ವಿವರಣಾ ಪದ್ಧತಿಯಲ್ಲಿ ಭಾಷೆಯು ಸರಳ ಹಾಗೂ ಸ್ಪಷ್ಟ ನಿಖರವಾಗಿರಬೇಕು.
- ವಿಷಯದ ಕೊರತೆಯಗಳಿಂದ ನಿರರ್ಗಳತೆಯು ಕೊರತೆ ಉಂಟಾಗದಂತೆ ಇರಬೇಕು.
- ವಿಷಯದ ವಿವರಣೆಯು ಭೂಪಟ, ನಕ್ಷೆ,ಚಿತ್ರ,ಮಾದರಿ, ಮುಂತಾದಗಳಿಂದ ಕೂಡಿರಬೇಕು.
- ವಿಷಯವನ್ನು ವಿದ್ಯಾರ್ಥಿಗಳ ವಿಷಯವನ್ನು ಪರಿಶೀಲಿಸಿದಾಗ ವಿವರಣೆ ಮತ್ತು ನೈಜ ವಸ್ತುವಿಗೆ ಸಂಬಂಧ ಹೊಂದುವಂತಿರಬೇಕು.
- ವಿವರಣೆಯು ತಾರ್ಕಿಕ್ ವ್ಯವಸ್ಥತ ರೀತಿಯಲ್ಲಿ ಕ್ರಮಬದ್ಧವಾಗಿ ಮತ್ತು ನಿರಂತರವಾಗಿ ನಿಡಬೇಕು
- ಮಾಹಿತಿಯು ಸಹಸಂಬಂಧ ಹೊಂದಿರಬೇಕು.

**ಪ್ರಾತ್ಯಕ್ಷಿಕ ಪದ್ದತಿ ;-**

- ಈ ವಿಧಾನದಲ್ಲಿ ಶಿಕ್ಷಕನು ಕೆಲವು ಸಂಗತಿ ಹಾಗೂ  ವಿಷಯಗಳನ್ನು ಸ್ವತಃ ಮಾಡಿ ತೋರಿಸುವನು .ನಂತರ ಮಕ್ಕಳು ತಾವು ಮಾಡಿ ತೋರಿಸುವವರು.
- ಇದು ನೋಡಿ ಕಲಿಯವು ಪಾಠ ವಿಧಾನವಾಗಿದೆ.
- ಇದಕ್ಕೆ ಧ್ಯೇಯ ನಿಷ್ಠೆ ವಿಧಾನ ಅಥವಾ ಪದ್ಧತಿ ಎಂದು ಕರೆಯುತ್ತಾರೆ.
- ಯಾವುದೇ ವಸ್ತುಗಳನ್ನು , ದೃಷ್ಟಾಂತಗಳನ್ನು, ತೋರಿಸಲು ಪ್ರದರ್ಶಿಲು ಸಹಾಯವಾಗುವ ಪದ್ಧತಿಯೇ ಪ್ರಾತ್ಯಕ್ಷಿಕೆ ವಿಧಾನ ಆಗಿದೆ .
- ಉದಾ :& ತರಗತಿಯಲ್ಲಿ ಅಣಕು ಸಂಸತ್, ಲೋಕಸಭೆ ,ಮಂತ್ರಿಮಂಡಲ ರಚನೆ ಮಾಡಿ ವಿದ್ಯಾರ್ಥಿಗಳಿಗೆ ತೋರಿಸುವುದು.

**ಪ್ರಾತ್ಯಕ್ಷಿಕೆ ಪದರ್ಥ :-** ತೋರಿಸು (**showing)**

- ಉದಾ :- ಜೀವವಿಜ್ಞಾನದಲ್ಲಿ ಶಿಕ್ಷಕರು ಕಪ್ಪೆಯನ್ನು ಕೊಯ್ದು ಭಾಗಗಳನ್ನು ತೊರಿಸುವುದು ಪ್ರಾತ್ಯಕ್ಷಿಕೆ ಆಗಿದೆ.
- ಇತಿಹಾಸ ಶಿಕ್ಷಕರು ನಕಾಶೆಯನ್ನು ಬರೆಯುವುದು ಪ್ರಾತ್ಯಕ್ಷಿಕೆ ಎನ್ನವರು .
- ಈ ಪದ್ಧತಿಯಲ್ಲಿ ಪ್ರದರ್ಶಕ :- ಶಿಕ್ಷಕ

JSS CAREER ACADEMY

- ಪ್ರಾತ್ಯಕ್ಷಿಕೆ ವಿಧಾನ ಹಂತಗಳು
- ಪ್ರಾತ್ಯಕ್ಷಿಕಾಗಿ ಸಿದ್ಧತೆ
- ಪ್ರಾತ್ಯಕ್ಷಿಕೆ
- ಪರಿಣಾಮಗಳ ನಿರೀಕ್ಷಣೆ
- ಪ್ರಾತ್ಯಕ್ಷಿಕೆ ವಿಧಾನದಲ್ಲಿ ಕೈಗೊಳ್ಳಬೇಕಾದ ಎಚ್ಚರಿಕೆಗಳು
- ಪ್ರಾತ್ಯಕ್ಷಿಕೆ ಕೊನೆಗೆ ಪರಿಣಾಮ ನಿಗದಿಯಾಗಿ ಬರುವಂತೆ ಶ್ರಮವಹಿಸಬೇಕು.
- ಪ್ರಾತ್ಯಕ್ಷಿಕೆ ವಿದ್ಯಾರ್ಥಿಗಳು ವೀಕ್ಷಣೆ ಮಾಡುವಂತೆ ನೋಡಿಕೊಳ್ಳಬೇಕು.
- ಎಲ್ಲಾ ಮಕ್ಕಳಿಗೆ ಕಾಣುವಂತೆ ಪ್ರದರ್ಶನ ಮಾಡಬೇಕು.
- ಪ್ರಾತ್ಯಕ್ಷಿಕೆ ಕೊನೆಗೆ ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕು.
- ಅನುಕೂಲಗಳು:-
- ಮಕ್ಕಳ ಇದರಲ್ಲಿ ಪ್ರತ್ಯೇಕ್ಷವಾಗಿ ಭಾಗವಹಿಸಲು ಸಾಧ್ಯ ಇದೆ.
- ಬಹುಇಂದ್ರೀಯ ಅನುಭವ ದೊರೆತು ರಚನಾತ್ಮಕ ಕಲಿಕೆ ಉಂಟಾಗುವುದು.
- ಎಲ್ಲಾ ವಯಸ್ಸಿನ ಮಕ್ಕಳಿಗೆ ಸೂಕ್ತ ಹಾಗೂ ಇಷ್ಟ ಪಡುತ್ತಾರೆ.
- ಅನ್ವಯದ ಮೂಲಕ ಕೆಲವು ವಿಷಯವನ್ನು ವಿವರಣೆ ನೀಡಲಾಗವುದು.
- ಅರ್ಥವಾಗದ ವಿಚಾರಗಳನ್ನು ಬೇಗ ತಿಳಿಸಬಹುದು.
- ಅಮೂರ್ತ ವಿಚಾರಗಳನ್ನು ಮೂರ್ತಗೊಳಿಸುವುದು.
- ಕೌಶಲ್ಯ ಪಾಠದ ಬೋಧನೆಗೆ ಅವಶ್ಯಕ
- ಉದಾ :- ಸಂಗೀತ
- ಇದು ವಿದ್ಯಾರ್ಥಿಗಳಿಗೆ ಮಾದರಿ ಪ್ರಯೋಗಶಾಲೆ ಇದ್ದಂತೆ..
- ವಿದ್ಯಾರ್ಥಿಗಳು ಚಟುವಟಿಕೆಯಿಂದ ಕಲಿಕೆಯಲ್ಲಿ ಭಾಗಿಯಾಗಿವರು.
- ವಿದ್ಯಾರ್ಥಿ ಕಲಿಕಾ ಉಪಕರಣಗಳ ಉಪಯೋಗ ತಿಳಿವುದು.
- ವಿದ್ಯಾರ್ಥಿಯಲ್ಲಿ ಆಲೋಚನೆ ಮೂಡಿಸುವುದು.
- ದೋಷಗಳು
- ಈ ವಿಧಾನ ಶಿಕ್ಷಕರಿಗೆ ಹೊರೆ ,ಕಾರಣ ದಾರಿಯಲ್ಲಿ ಸಿಗುವ ಕರೆ ಹಳ್ಳಗಳಿಂದ ಕರೆದುಕೊಂಡು ಬರುವುದು.

JSS CAREER ACADEMY

- ಶಾಲಾ ವೇಳಾ ಪಟ್ಟಿಯಲ್ಲಿ ಅವಕಾಶ ಕಡಿಮೆ
- ಇದೊಂದು ವೆಚ್ಚದಾಯಕವಾದ ವಿಧಾನ.
- ಮೌಖಿಕ ಚರ್ಚೆಗೆ ಇಲ್ಲ ಆಸ್ಪದವಿಲ್ಲ.
- ಪ್ರಯೋಗಗಳು ಪ್ರಾತ್ಯಕ್ಷಿಕೆಯೊಂದಿಗೆ ಏಕಕಾಲದಲ್ಲಿ ನಡೆಲಾರವು.
- ನಿಗದಿತ ಅವಧಿಯಲ್ಲಿ ಪಠ್ಯಕ್ರಮ ಮುಗಿಸಲು ಅಸಾಧ್ಯ.
- ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಪ್ರಯೋಗ ಮಾಡಲು ಅವಕಾಶ ಸಿಗಲಾರದು.

**ನಾಟಕೀಕರಣ ಪದ್ಧತಿ**

- ಡ್ರಾಮ ಎಂಬ ಪದವು ಗ್ರೀಕ್ ಭಾಷೆಯಿಂದ ಬಂದಿದೆ .ಇದರ್ಥ :- ನಟಿಸು ಅಥವಾ ಮಾಡು
- ಐತಿಹಾಸಿಕ ಘಟನೆಗಳನ್ನು ನಟಿಸುವುದರ ಮೂಲಕ ತಿಳಿದುಕೊಳ್ಳಲುವ ವಿಧಾನವೇ ನಾಟಕೀಕರಣ ಪದ್ಧತಿ ಎಂದು ಕರೆಯಲಾಗುತ್ತದೆ.
- ಇಲ್ಲಿ ಅಭಿನಯಕ್ಕೆ ಹೆಚ್ಚು ಒತ್ತು ನೀಡಲಾಗುವುದು.
- ಬೇರೆ ಬೇರೆ ಕಾಲದ ನಡೆ -ನುಡಿ ಆಚಾರ ವಿಚಾರ ವ್ಯವಹಾರ ಆಸೆ ಆಕಾಂಕ್ಷೆಗಳು ಆಗಿನ ಭಾಷೆ ಸನ್ನಿವೇಶದ ವೈಚಿತ್ರ್ಯಗಳನ್ನು ಸಾಕ್ಷಾತ್ಕಾರ ಅಥವಾ ನಾಟಕದ ರೂಪದಲ್ಲಿ ಅಧ್ಯಯನ ಮಾಡುವ ಪದ್ಧತಿಯೇ ನಾಟಕೀಕರಣ ಪದ್ಧತಿ ಆಗಿದೆ.
- ನಾಟಕದ ಪ್ರಕಾರಗಳು
- ಪೂರ್ಣಪ್ರಮಾದ ನಾಟಕಗಳು
- ಸಂಗೀತ ನಾಟಕಗಳು
- ರೂಪಕ ಕಥಾ ದೃಶ್ಯಾ
- ನಿಶ್ಚಿಲ ದೃಶ್ಯಾ
- ಗೊಂಬೆಯಾಟ (ಮೂಕನಾಟಕ)
- ಅನುಕೂಲಗಳು
- ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಆಸಕ್ತಿ ಹಾಗೂ ಚಟುವಟಿಕೆ ಉಂಟಾಗಿ ಜ್ಞಾನ ವೃದ್ಧಿಯಾಗುವುದು.
- ವಿದ್ಯಾರ್ಥಿಗಳು ನಾಟಕದಲ್ಲಿ ಬರುವ ಮಹಾನ್ ವ್ಯಕ್ತಿಗಳ ಆದರ್ಶ ತತ್ವಗಳನ್ನು ಅನುಕರಣೆ ಮಾಡಿ ಅವರಂತೆ ನಾವು ಆಗಬೇಕು ಎಂದು ಬಯಸುತ್ತಾರೆ.

JSS CAREER ACADEMY

- ವಿದ್ಯಾರ್ಥಿಗಳು ಈ ಪದ್ದತಿಯಿಂದ ಭಾವಪೂರ್ಣವಾಗಿ ಮಾತನಾಡುವ ಹಾಗೂ ಅಭಿನಯಿಸುವ ಸಾಮರ್ಥ್ಯ ಬೆಳೆಸಿಕೊಳ್ಳವರು.
- ವಿದ್ಯಾರ್ಥಿಗಳಲ್ಲಿರುವ ನಾಚಿಕೆ ಸ್ವಭಾವ ಹಾಗೂ ಸಭಾ ಕಂಪನ ದೂರವಾಗುವುದು.
- ಈ ಪದ್ದತಿಯು ಪ್ರಾಥಮಿಕ ಶಾಲಾ ಹಂತದ ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತ ಆಗಿದೆ.ಏಕೆಂದರೆ ಆ ಮಕ್ಕಳಿಗೆ ಅನುಕರಣೆ ಮುಖ್ಯಾಗಿದೆ.
- ವಿದ್ಯಾರ್ಥಿಗಳ ಕಲ್ಪನಾ ಹಾಗೂ ಆಲೋಚನ ಶಕ್ತಿ ವೃದ್ಧಿಯಾಗುವುದು.
- ವಿದ್ಯಾರ್ಥಿಗಳನ್ನು ನಾಟಕ ಬರಹಗಾರರಾಗಿ ಮಾಡಬಹುದು.
- ಹಿಂದಿನ ಕಾಲದ ಆಚಾರ ,ವಿಚಾರ ವೇಷಭೂಷಣ, ಧಾರ್ಮಿಕ ಅಂಶಗಳು ಮುಂತಾದ ವಿಚಾರಗಳನ್ನು ತಿಳಿಯಬಹುದು.
- ಇದು ವಿದ್ಯಾರ್ಥಿಯಲ್ಲಿ ಕಲ್ಪನಾ, ಸೃಜನಶೀಲತೆ, ಹಾಗೂ ನಿರೀಕ್ಷಣಾ ಶಕ್ತಿಯನ್ನು ಹೆಚ್ಚಸುವುದು.
- ಕಲಿಕೆಯಲ್ಲಿ ಎಲ್ಲಾ ಇಂದ್ರಿಯಗಳು ವೃದ್ಧಿಯಾಗುವುದು.
- ವಿದ್ಯಾರ್ಥಿಗಳಿಗೆ ಮನರಂಜನೆ ನೀಡುವುದು.
- ವಿದ್ಯಾರ್ಥಿ ಹಾಗೂ ಶಿಕ್ಷಕರಲ್ಲಿ ಉತ್ತಮ ಬಾಂಧವ್ಯ ವೃದ್ಧಿಯಾಗುವುದು.

**ದೋಷಗಳು:**

- ಇದು ಸಂಪೂರ್ಣವಾಗಿ ಶಿಕ್ಷಕರ ತಯಾರಿ ಮೇಲೆ ಅದರ ಯಶಸ್ಸು ಅವಲಂಬಿಸಿದೆ.
- ವೆಚ್ಚದಾಯಕ ವಿಧಾನ.
- ಇತಿಹಾಸದ ಎಲ್ಲಾ ಘಟಕಗಳಿಗೆ ಈ ಪದ್ದತಿಯು ಅನ್ವಯವಾಗಲಾರದು.
- ಸಾಕಷ್ಟು ಸಮಯ ಹಾಗೂ ಶ್ರಮ ಅಪೇಕ್ಷಿಸುವುದು.ಇತ್ಯಾದಿ

**ಘಟಕ ವಿಧಾನ :-**

- ಈ ಪದ್ದತಿಯು ಘಟಕ ಬೋಧನಾ ಪದ್ದತಿಯಲ್ಲಿ ದೊಡ್ಡ ಪದ್ದತಿಯಾಗಿದೆ.
- ಈ ಪದ್ದತಿಯು ಪ್ರತಿಪಾದಕರು :- ಪೆಸ್ಟಾಲಜಿ ಹಾಗೂ ಡಾ ಹೆನ್ರಿ ಸಿ ಮಾರಿಸನ್

**ಘಟಕ ಪದ್ದತಿ ಎಂದರೆ :-** ಬೋದಿಸಿಬೇಕಾದ ವಿಷಯವನ್ನು ಪ್ರಾರಂಭದಿಂದ ಕೊನೆಯವರೆಗೂ ಒಂದಕ್ಕೊಂದು ಸಂಬಂಧವಿರುವ ಪ್ರತ್ಯೇಕ ಭಾಗವನ್ನಾಗಿ ಮಾಡಿಕೊಂಡು ಬೋದಿಸುವುದು.ಬೋಧನೆಯ ಕಾಲದಲ್ಲಿ ಜ್ಞಾನ ಮತ್ತು ಅನುಭವಗಳು ಸುಸಂಘಟಿತವಾಗಿರುವುದನ್ನು ಪರಿಶೀಲಿಸಿದ ನಂತರದ ಮೌಲ್ಯಮಾಪನ ಘಟಕ ವಿಧಾನ

JSS CAREER ACADEMY

## ಮೌಲ್ಯಾಂತರ್ಗತ ವಿಧಾನ

**ಮೌಲ್ಯ ಎಂದರೆ :-** ಬೆಲೆ ಕಟ್ಟುವುದು, ಮಾನ್ಯ ಮಾಡುವುದು, ಎಂದರ್ ಮೌಲ್ಯಾಂತರ್ಗತ ಬೋದನೆ ಎಂದರೆ :- ಜನರಿಗೆ ಶಿಕ್ಷಣ ನೀಡುವುದರ ಮೂಲಕ ಅವರು ಸತ್ಯದಿಂದ ನಿಸ್ವಾರ್ಥರಾಗಿ,ಶಾಂತ ಜೀವನ ನಡೆಸುವ ಮೂಲಕ ತಮ್ಮ ಹಾಗೆಯೇ ಜೀವನ ನಡೆಸಲು ಅವಕಾಶ ಕಲ್ಪಸುವುದು,

- ಇದರಿಂದ ಉದ್ದೇಶ ಮಕ್ಕಳ ಉತ್ತಮ ಮೌಲ್ಯವನ್ನು ಶಿಕ್ಷಣದೊಂದಿಗೆ ನೀಡುವುದು.

**ಡಾ :- ವಿ ಕೃ ಗೋಕಾಕ್** ಅವರು ಮೌಲ್ಯಗಳನ್ನು ಐದು ಭಾಗಗಳನ್ನಾಗಿ ವಿಂಗಡಣೆ ಮಾಡಿದ್ದಾರೆ.ಅವುಗಳೆಂದರೆ.

- ಸತ್ಯ
- ಸದಾಚಾರ
- ಪ್ರೇಮ
- ಶಾಂತಿ
- ಅಹಿಂಸೆ
- ಕೊಠಾರಿ ಕಮಿಷನ್ ಪ್ರಕಾರ :- ಜ್ಞಾನಾಭಿವೃದ್ಧಿ ವಿಜ್ಞಾನ ಬೆಳೆವಣಿಗೆಯು ಹಾಗೂ ಆಧುನಿಕ ಸಮಾಜದ ವ್ಯವಸ್ಥೆಯು ಸಮಾಜದ ಜವಾಬ್ದಾರಿಯನ್ನು ಒಳಗಹೊಕ್ಕು ಹಾಗೂ ಬಲಪಡಿಸುವ ಅರಿವುವನ್ನು ಒಳಗೊಂಡಿರಬೇಕು.

### ಮೌಲ್ಯಾಂತರ್ಗತ ವಿಧಾನದ ಹಂತಗಳು

**ಪ್ರತ್ಯೇಕ್ಷ ವಿಧಾನ :-** ಈ ವಿಧಾನದಲ್ಲಿ ಮಕ್ಕಳಿಗೆ ಮೌಲ್ಯಗಳನ್ನು ನೇರವಾಗಿ ತಿಳಿಸಲಾಗುವುದು.

- ಈ ವಿಧಾನದಲ್ಲಿ ಮಕ್ಕಳಿಗೆ ಮೌಲ್ಯ ಬೆಳೆಸುವುದಕ್ಕೆ ಪ್ರತ್ಯೇಕ ಘಟಕ ಹಾಗೂ ಪಾಠವನ್ನು ಇಡಲಾಗುತ್ತದೆ. ಅಥವಾ ಬೋದಿಸಲಾಗುವುದು.

**ಪರೋಕ್ಷ ವಿಧಾನ**

- ಈ ವಿಧಾನದಲ್ಲಿ ಸಮಯ ಸಂದರ್ಭಕ್ಕೆ ಅನುಗುಣವಾಗಿ ಮಕ್ಕಳಿಗೆ ಆಸಕ್ತಿ ಅನುಗುಣವಾಗಿ ಮೌಲ್ಯಗಳನ್ನು ತಿಳಿಸುವುದು
- ಉದಾ :- ಪಂಚತಂತ್ರ ಕಥೆಗಳು.

**ಪ್ರಾಸಂಗಿಕ ವಿಧಾನ**

JSS CAREER ACADEMY

- ಈ ಪದ್ಧತಿಯಲ್ಲಿ ಮಕ್ಕಳಿಗೆ ಮೌಲ್ಯಗಳನ್ನು ಪೂರ್ವ ಯೋಜಿತವಾಗಿ ತಿಳಿಸುವ ಯಾವುದೇ ಯೋಜನೆ ಇರುವುದಿಲ್ಲ ಆದರೆ ಆಕಸ್ಮಿಕವಾಗಿ ಮೌಲ್ಯಗಳನ್ನು ತಿಳಿಸಲಾಗುವುದು ಇದನ್ನೇ ಪ್ರಾಸಂಗಿಕ ಪದ್ಧತಿ ಕರೆಯಲಾಗುತ್ತದೆ.

**ಹಂಚಿಕೆ ಕಾರ್ಯ:-**

- ಶ್ರೇಷ್ಠ ಹಾಗೂ ಉದಾತ್ತ ಮೌಲ್ಯಗಳನ್ನು ಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಆದರ್ಶ ವ್ಯಕ್ತಿ ಅಥವಾ ವಿಷಯದ ಕುರಿತು ಬರವಣಿಗೆ ಹಂಚಿಕಾ ಕಾರ್ಯ ನೀಡುವುದು ನಂತರ ವಿದ್ಯಾರ್ಥಿಗಳಿಂದ ವ್ಯವಸ್ಥಿತ ರೀತಿಯಲ್ಲಿ ಸಂಗ್ರಹಿಸಿ ಕ್ರೂಢಿಕ್ರರಿಸಿ ಕ್ರಮವಾಗು ಬರೆಯವುದೆ ಹಂಚಿಕಾ ಕಾರ್ಯ ಆಗಿದೆ.

**ಉದಾಹರಣೆಗಳೊಂದಿಗೆ**

- ಈ ವಿಧಾನ ಪಾಠ ಬೋಧನೆ ಮಾಡುವಾಗ ಸಮಾಜದ ಮಹಾನ್ ನಾಯಕರ ಕರಿತು ತಿಳಿಸುವುದು
- ಉದಾ :- ಆಶೋಕನ ಧರ್ಮದ ಬಗ್ಗೆ ತಿಳಿಸುವುದು.

**ಬಾಹ್ಯ ಒತ್ತಡ** :- ಮೌಲ್ಯಗಳ ಬೆಳವಣಿಗೆಗೆ ವಿಧ್ಯಾರ್ಥಿಗಳಿಗೆ ಬಾಹ್ಯ ಒತ್ತಡ ಏರುವುದು.

- ಪ್ರಾಥಮಿಕ ಶಾಲಾ ಹಂತದ ಮಕ್ಕಳಿಗೆ ಈ ವಿಧಾನ ಬಳಕೆ ಮಾಡಲಾಗುತ್ತದೆ. ನಂತರ ಉನ್ನತತದಲ್ಲಿ ಅರ್ಥ ಮಾಡಿಕೊಂಡ ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅನ್ವಯ ಮಾಡಿಕೊಳ್ಳವರು

.ಅನುಕೂಲಗಳು

- ವಿದ್ಯಾರ್ಥಿಯಲ್ಲಿ ನೈತಿಕ ಮನೋಭಾವಬೆ ಬೆಳೆಯುವುದು.
- ವಿದ್ಯಾರ್ಥಿಗಳ ಜೀವನದಲ್ಲಿ ಆದರ್ಶ ಗುಣಗಳನ್ನು ಬೆಳೆಸಿಕೊಳ್ಳವರು.
- ವಿದ್ಯಾರ್ಥಿಯಲ್ಲಿ ಶಿಸ್ತು ,ಸಂಯಮ,ತಾಳ್ಮೆ ಹಾಗೂ ಸಹಕಾರ ಗುಣ ಬೆಳೆಯುವುದು.
- ನಿಸ್ವಾರ್ಥ ಮನೋಭಾವ ಮೂಡುವುದು.
- ಸತ್ಯ,ಸದಚಾರ, ಅಹಿಂಸೆ ಅಂತಹ ಮನೋಭಾವ ಮೂಡುವುದು.
- ಶಾಂತಿಯುತ ಜೀವನಕ್ಕೆ ಮಾರ್ಗದರ್ಶನ .

**ಹೊರ ಸಂಚಾರ ಪದ್ಧತಿ**

**ಗುರಿ :-**ವಿದ್ಯಾರ್ಥಿಗಳು ಶಾಲಾ ಹೊರಗಡೆ ಪ್ರದೇಶಗಳಿಗೆ ಬೇಟಿ ನೀಡಿ ಪ್ರತ್ಯೇಕ್ಷ ಮಾಹಿತಿಯನ್ನು ಪಡೆಯುವುದು

JSS CAREER ACADEMY

- ಉದಾ :- ವಿದ್ಯಾರ್ಥಿಗಳನ್ನು ಹಂಪಿ,ಬೈಲೂರು, ಐಹೊಳೆ ಪಟ್ಟದಕಲ್ಲು ಕರೆದುಕೊಂಡು ಹೊಗುವುದು.
- ಶಾಲಾ ಹೊರ ಸಂಚಾರಕ್ಕೆ ಆಯ್ಕೆ ಮಾಡಿಕೊಳ್ಳುವ ಸ್ಥಳವು ಐತಿಹಾಸಿಕ, ಪೌರತ್ವ,ಮತ್ತು ಭೌಗೋಳಿಕ ಆಂಶಗಳನ್ನು ಹೊಂದಿರಬೇಕು.
- ಹೊರ ಸಂಚಾರದಿಂದ ಮರಳಿ ಬಂದಾರ ಅದರ ವರದಿಯನ್ನು ವಿದ್ಯಾರ್ಥಿಗಳು ಶಿಕ್ಷಕರಿಗೆ ಒಪ್ಪಿಸಬೇಕು.
- ಇದರಿಂದ ಒಂದು ನಿರ್ಧಿಷ್ಟ ಸ್ಥಳದ ಮಾಹಿತಿಯನ್ನು ಪಡೆಯಲು ಅನುಕೂಲ ಆಗಲಿದೆ.ನೈಜ ಸ್ಥಿತಿ ಮಾಗಿತಿ ದೊರೆಯುವುದು.
- ಇದರಿಂದ ಪಾಠದ ವಿಷಯವನ್ನು ಪ್ರತ್ಯೇಕ್ಷ ಉದಾಹರಣೆ ಮೂಲಕ ಬೋಧಿಸಲಾಗುವುದು.

**ಅನುಕೂಲಗಳು**

- ವಿದ್ಯಾರ್ಥಿಗಳಿಗೆ ಕಲಿಕೆಯ ಬಗ್ಗೆ ಪ್ರತ್ಯೇಕ್ಷೆ ಹಾಗೂ ನೈಜ ಅನುಭವ ಉಂಟಾಗುವುದು.
- ವಿದ್ಯಾರ್ಥಿಗಳ ಸಮಕ್ಷಮದಲ್ಲಿ ನಿಂತು ವಸ್ತುಗಳನ್ನು ನೋಡಿ ಮಾಹಿತಿ ಪಡೆಯುವವರ.
- ವಿದ್ಯಾರ್ಥಿ ತಾವು ಸಂಚಾರ ಮಾಡಿದ ಸ್ಥಳ ಭೌಗೋಳಿಕ ಹಿನ್ನಲೆ ತಿಳಿಯವರು.
- ಈ ಮೂಲಕ ವಿದ್ಯಾರ್ಥಿಗಳಿಗೆ ಸಹಕಾರದ ಮನೋಭಾವ ಬೆಳೆಯುವುದು.

**ಅನ್ವೇಷಣಾ ಪದ್ದತಿ**

- ಇದರ ಇನ್ನೊಂದು ಹೆಸರು :- ಶೋಧನಾತ್ಮಕ
- ಅಂದರೆ ಅನ್ವೇಷಣೆ ಎಂದರ್ಥ
- ಸಮಸ್ಯೆಯನ್ನು ಬಿಡಿಸುವ ಇನ್ನೊಂದು ಮಾರ್ಗ.
- ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ಗೊತ್ತಿಲ್ಲ ಸಮಸ್ಯೆಗೆ ಪರಿಹಾರ ಹುಡುಕುವ ಪದ್ದತಿಯೇ ಸಂಶೋಧನಾ ಪದ್ದತಿ.

**ಅನುಕೂಲ:**

- ಸ್ವಯಂ ಕಲಿಕಾ ವಿಧಾನ
- ವೈಜ್ಞಾನಿಕ ತಳಹದಿ ಇದೆ
- ವಿದ್ಯಾರ್ಥಿಗಳನ್ನು ಶೋದಕರನ್ನಾಗಿ ಮಾಡುವುದು.
- ಶಿಕ್ಷಕ ಹಾಗೂ.ವಿದ್ಯಾರ್ಥಿಗಳ ಪರಿಶ್ರಮ ಹೆಚ್ಚು

JSS CAREER ACADEMY

## ಸಂಭಾಷಣೆ ವಿಧಾನ :-.

- ಇಂದು ವಿಷಯದ ಕುರಿತು ಇಬ್ಬರು ವ್ಯಕ್ತಿಗಳ ಮಧ್ಯ ನಡೆಯುವ ಮಾತುಕಥೆ ಸಂಭಾಷಣೆ ಆಗಿದೆ.
- ಅನುಕೂಲ
- ವಿದ್ಯಾರ್ಥಿಯಲ್ಲಿ ವಾಕ್ಚಾತುರ್ಯವನ್ನು ವೃದ್ಧಿಸುವುದು.
- ಸಂಭಾಷಿಸುವ ಕಲೆ ವೃದ್ಧಿಯಾಗುವುದು.
- ಆಲೋಚಿಸು ಸಾಮರ್ಥ್ಯ ವೃದ್ಧಿಯಾಗುವುದು.
- ಸಾಮೂಹಿಕ ತಿರ್ಮಾನ ತೆಗೆದುಕೊಳ್ಳಬಹುದು.
- ಸಾಂಘಿಕ ಶಕ್ತಿ ಬೆಳೆಸುವುದು.

## ಜೀವನ ಚರಿತ್ರೆ ಪದ್ಧತಿ

- ಈ ವಿಧಾನವನ್ನ ಐತಿಹಾಸಿಕ ಮಹಾಪುರುಷರ ಜೀವನ ಚರಿತ್ರೆಯನ್ನು ಹೇಳುವಾಗ ಅನುಸರಿಸುವುದು
- ಉದಾ :- ಶಿವಾಜಿ ಜೀವನ ಚರಿಪದ್ಧತ
- ಈ ವಿಧಾನವನ್ನು ಮಹಾಪುರುಷರ ಸಿದ್ಧಾಂತವೆಂದು ಕರೆಯುತ್ತಾರೆ
- ಈ ಪದ್ಧತಿಯನ್ನು ಪ್ರಾರಂಬಿಸಿದವರಲ್ಲಿ ಪ್ರಮುಖ ವ್ಯಕ್ತಿ :- ಗ್ರೀಸಿನ ಪ್ಲೂಟಾರ್ಕ್
- ಈ ವಿಧಾನದಿಂದ ಹಿಂದಿನ ಕಾಲದ ಆದರ್ಶ ವ್ಯಕ್ತಿಗಳು ಅಶೋಕ, ಹರ್ಷವರ್ಧನ, ಮಹಾತ್ಮ ಗಾಂಧಿ, ಕಿತ್ತೂರು ರಾಣಿ ಚೆನ್ನಮ್ಮ ಇತ್ಯಾದಿ ನಾಯಕರ ಆದರ್ಶ, ರಾಷ್ಟ್ರಪ್ರೇಮ ಮುಂತಾದ ವಿಷಯಗಳನ್ನು ಈ ವಿಧಾನದ ಮೂಲಕ ತಿಳಿಸಬಹುದು.

## ಅನುಕೂಲಗಳು

- ವಿದ್ಯಾರ್ಥಿಗಳ ವ್ಯಕ್ತಿ ಸ್ವಭಾವತಃ ಇತಿಹಾಸ ತಿಳಿಯಲು ಸಹಾಯಕ.
- ಇದರಿಂದ ವಿದ್ಯಾರ್ಥಿಗಳಿಗೆ ಇತಿಹಾಸ ವಿಷಯದಲ್ಲಿ ಅತ್ಯತ್ತಮ ಪ್ರೇರಣೆ ದೊರೆಯುವುದು.
- ಮಹಾಪುರುಷರ ಜೀವನದ ಪರಿಚಯ ಉಂಟಾಗುವುದು.
- ವಿದ್ಯಾರ್ಥಿಗಳು ಮಹಾಪುರುಷರ ಆದರ್ಶ ಗುಣಗಳು ಹಾಗೂ ಅವರ ರಾಷ್ಟ್ರಪ್ರೇಮ ,ತಿಳಿಯಲು ಸಹಾಯಕ.
- ಇತಿಹಾಸವನ್ನು ಉದಾಹರಣೆಯ ಮೂಲಕ ಬೋಧಿಸಬಹುದು ಇತ್ಯಾದಿ

JSS CAREER ACADEMY

## ಸಮೀಕ್ಷಾ ಪದ್ಧತಿ

- ಒಂದು ಸಮುದಾಯದ ಜನರ ಜೀವನದ ಸಾಮಾಜಿಕ, ರಾಜಕೀಯ,ಸಾಮಾಜಿಕ,ಆರ್ಥಿಕ,ಶೈಕ್ಷಣಿಕ, ಧಾರ್ಮಿಕ ಇತ್ಯಾದಿ ಸ್ಥಿತಿಗತಿಗಳ ಚಿತ್ರಣ ಪಡೆಯಲು ಯೋಜನಾ ಬದ್ಧವಾಗಿ ಸಮೀಕ್ಷೆಯ ಮೂಲಕ ಅಧ್ಯಯನ ಮಾಡುವುದ.
- ಸಮೀಕ್ಷೆಯ ಮೂಲಕ ಅಧ್ಯಯನ ಮಾಡುವುದೇ ಸಮೀಕ್ಷಾ ಪದ್ಧತಿ
- ವಿದ್ಯಾರ್ಥಿಗಳಿಗೆ ಸಮುದಾಯ ಹಾಗೂ ಸನ್ನಿವೇಶದ ವಾಸ್ತವಿಕತೆ ತಿಳಿಸುವುದು.
- ಕಲಿಕೆಯ ಸ್ಪಷ್ಟ ಅನುಭವ ದೊರೆಯುವುದು.
- ಸಮುದಾಯದ ವಿಬಿನ್ನ ಮುಖಗಳ ಪರಿಚಯ ಉಂಟಾಗುವುದು.
- ವಿದ್ಯಾರ್ಥಿಗಳಿಗೆ ಒಂದು ಪ್ರಾಯೋಗಿಕ ಚಟುವಟಿಕೆ ಆಗುವುದು.
- ಸಮಸ್ಯೆಗಳ ನೈಜ ಸ್ವರೂಪ ತಿಳಿಯುವುದು
- ವಿದ್ಯಾರ್ಥಿಗಳಿಗೆ ಸಾರ್ವಜನಿಕ ಸಂಪರ್ಕ ಉಂಟಾಗುವುದು.
- ವೈಜ್ಞಾನಿಕ ಕಲಿಕೆ ನೇರವಾಗಿ ಉಂಟಾಗುವುದು.

### ರೂಢಿ ಪಾಠಗಳು:- ( Drill lesson)

- **Practices make man perfect** ಎಂಬ ತತ್ವದ ಹಾಗೂ ಥಾರ್ನಡೈಕ್ ಅಭ್ಯಾಸ ತತ್ವದ ನಿಯಮದ ಮೇಲೆ ಕಾರ್ಯನಿರ್ವಹಣೆ ಮಾಡುವುದು.
- ರೂಢಿ ಪಾಠವು ವಿದ್ಯಾರ್ಥಿಯಲ್ಲಿ ಕಲಿತ ವಿಷಯವನ್ನು ಗಟ್ಟಿಗೊಳಿಸುವುದು, ದೃಢಗೊಳಿಸುವುದು ಹಾಗೂ ಹೆಚ್ಚು ಕಾಲ ಸ್ಮೃತಿಯಲ್ಲಿರುವಂತೆ ಮಾಡುವುದು.
- ರೂಢಿ ಪಾಠದ ಅರ್ಥ :- ವಿದ್ಯಾರ್ಥಿಗಳು ತಾವು ಕಲಿತ ಪಾಠವನ್ನು ಉಳಿಸಿಕೊಳ್ಳಲು ಪದೇ ಪದೇ ಅಭ್ಯಾಸ ಮಾಡುವುದಕ್ಕೆ ರೂಡಿ ಎನ್ನವರು.
- ಸತತ ಅಭ್ಯಾಸವೇ ರೂಢಿಯಾಗಿದೆ.
- ಇತಿಹಾಸ ಪ್ರಮುಖ ರೂಢಿ ಪಾಠಗಳು :- ಇಸವಿ ಕಲಿಯುವುದು, ನಕಾಶೆ ಬಿಡಿಸುವುದು,ಕಾಲಸೂಚಿ,ಆಲೇಖ ರಚನೆ,ಐತಿಹಾಸಿಕ ಸ್ಥಳ ಗುರುತಿಸುವುದು,ಕೈ ಬರಹ,ಮುಂತಾದವು ರೂಢಿ ಫಾಠಗಳಿಂದ ಬರುವುದು.

### ರೂಢಿ ಪಾಠದ ಗುಣಗಳು

- ಕ್ಲಿಷ್ಟಕರ ವಿಷಯವನ್ನು ಸರಳಗೊಳಿಸವುದು.

JSS CAREER ACADEMY

- ➢ ಇದು ಮನೋವೈಜ್ಞಾನಿಕ ನಿಯಮದಿಂದ ಕೂಡಿದೆ.
- ➢ ಮಕ್ಕಳ ಭಾಷಾ ಸಾಮರ್ಥ್ಯ ಬೆಳೆಯುವುದು.
- ➢ ಕಲಿಕೆಯಲ್ಲಿ ಸ್ಪಷ್ಟತೆ ಬರುವುದು.
- ➢ ಇದು ಸ್ಮರಣ ಶಕ್ತಿ ಉದ್ದೀಪನಗೊಳಿಸುವುದು.
- ➢ ಮಂದಕಲಿಕೆಯ ವಿದ್ಯಾರ್ಥಿಗಳಿಗೆ ತುಂಭಾ ಸಹಾಯಕ.
- ➢ ಇದರಿಂದ ಕಲಿಕೆ ಶಾಶ್ವತ ವಾಗುವುದು.
- ➢ ರೂಢಿಯು ಮಾನಸಿಕ ತರಬೇತಿಯನ್ನು ನೀಡುವುದು.
- ➢ ರೂಢಿಯು ಪ್ರತಿಪುಷ್ಟೀಕರಣ ನೀಡುವುದು.

ಅವಗುಣಗಳು

- ➢ ಇದು ಎಲ್ಲಾ ಮಕ್ಕಳಿಗೆ ಅನ್ವಯ ಆಗಲಾರದು
- ➢ ಯಾಂತ್ರಿಕೆ ಕಲಿಕೆ ಅವಕಾಶ ಮಾಡಿಕೊಡುವುದು
- ➢ ಮಾನಸಿಕ ಹೊರೆ ಅನಿಸುವುದು
- ➢ ಕಲೊಕೆ ಒಮ್ಮೊಮ್ಮೆ ನಿಲ್ಲಬಹುದು.

## ಅನುಗಮನ ಹಾಗೂ ನಿಗಮನ ಪದ್ಧತಿ

### ಅನುಗಮನ ಪದ್ಧತಿ

- ➢ ಪ್ರತಿಪಾದಕರು :- ಪ್ರಾನ್ಸಿಸ್ ಬೇಕನ್
- ➢ ಅರ್ಥ :- ಇಲ್ಲಿ ನಿರ್ದಿಷ್ಟತೆಯಿಂದ ಸಾಮಾನ್ಯದ ಕಡೆಗೆ ಉದಾಹರಣೆಯಿಂದ ನಿಯಮದ ಕಡೆಗೆ , ದೃಷ್ಟಾಂತ ಗಳಿಂದ ಸಾಗುವ ಬೋಧನಾ ಪದ್ದತಿಯನ್ನು ಅನುಗಮನ ಅಥವಾ ಅನುಮಾನ ಪದ್ಧತಿ ಎಂದು ಕರೆಯಲಾಗುತ್ತದೆ..
- ➢ **ಸೂತ್ರದೊಂದಿಗೆ ಅಥವಾ ನಿಯಮದೊಂದಿಗೆ** ಬೋಧನೆ ಕೊನೆಗೊಳ್ಳವುದು.
- ➢ ಈ ಪದ್ಧತಿಯಲ್ಲಿ ಬೋಧನೆಯು ಉದಾಹರಣೆಗಳಿಂದ ಸಾಮಾನ್ಯ ನಿಯಮದ ಕಡೆಗೆ ,ನಿರ್ದಿಷ್ಟತೆಯಿಂದ ಸ್ಥೂಲದೆಡೆಗೆ ,ಮೂರ್ತದಿಂದ ಅಮೂರ್ತ ಕಡೆಗೆ , ಸರಳತೆಯಿಂದ ಸಮನ್ವಯ ಕಡೆಗೆ ,ಸುಲಭದಿಂದ ಸಂಕೀರ್ಣದ ಕಡೆಗೆ ಹಾಗೂ ಗೊತ್ತಿರುವುದರಿಂದ ಗೊತ್ತಿಲ್ಲದ ಕಡೆಗೆ ಸಾಗುವ ಬೋಧನಾ ಪದ್ಧತಿ ಆಗಿದೆ.

### ಹಂತಗಳು:

JSS CAREER ACADEMY

- ಉದಾಹರಣೆಗಳ ಸಂಗ್ರಹ
- ಉದಾಹರಣೆ ಪರಿಶೀಲನೆ ಮಾಡವುದು ಅಥವಾ ಅರ್ಥ ಮಾಡಿಕೊಳ್ಳವುದು.
- ಉದಾಹರಣೆಯ ಸಾಮನ್ಯ ಗುಣಲಕ್ಷಣ ಗುರುತಿಸುವುದು.
- ನಿಯಮ ಅಥವಾ ಸೂತ್ರ ರೂಪಿಸುವುದು.

**ಅನುಕೂಲಗಳು:**

- ವೈಜ್ಞಾನಿಕ, ತಾರ್ಕಿಕ ಬೋಧನಾ ಪದ್ಧತಿಯಾಗಿದ್ದು. ಇದು ಮಕ್ಕಳಲ್ಲಿ ತಾರ್ಕಿಕ ಜ್ಞಾನ ಬೆಳೆಸುವುದು.
- ಕಲಿಕೆ ಹೊರೆ ಎನಿಸಿದೆ ಸುಲಭ ಹಾಗೂ ಪರಿಣಾಮಕಾರಿಯಾಗುವುದು.
- ಇದು ವಿದ್ಯಾರ್ಥಿಗಳಲ್ಲಿ ಕಲಿಕಾ ಆತ್ಮ ವಿಶ್ವಾಸವನ್ನು ಮೂಡಿಸುವುದು

ಉದಾ :- ವಿದ್ಯಾರ್ಥಿಗಳು ಸ್ವತಃ ತಾವೇ ನಿಯಮಗಳನ್ನು ರಚನೆ ಮಾಡುತ್ತಾರೆ.

- ವಿದ್ಯಾರ್ಥಿಗಳ ಸ್ವಯಂ ಕಲಿಕೆಗೆ ಅವಕಾಶ ಮಾಡಿಕೊಡುವುದು.
- ಇದು ಅಂತಃಕಲಿಕೆಯನ್ನು ಪ್ರಚೋದಿಸುವುದು,ಹಾಗೂ ಮನಶಾಸ್ತ್ರೀಯ ಪದ್ಧತಿ ಅಗಿದೆ..
- ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಹಂತದ ವಿದ್ಯಾರ್ಥಿ ಗಳಿಗೆ ಸೂಕ್ತವಾಗಿದೆ.

**ಅನಾನುಕೂಲ:**

- ಸಮಯ ಅಪವ್ಯಯದ ಆಗುವುದು
- ನಿಗದಿತ ಅವಧಿಯಲ್ಲಿ ಪಠ್ಯಕ್ರಮ ಮುಗಿಸಲು ಸಾಧ್ಯವಿಲ್ಲ
- ಉದಾಹರಣೆಗಳ ಮೂಲಕ ನಿಯಮ ರೂಪಿಸುವುದ ಅಷ್ಟೊಂದು ವಿಶ್ವಾಸನಿಯವಲ್ಲ
- ಪಾಠದ ಅಂಶಗಳನ್ನು ಕೈ ಬಿಡುವ ಸಂಭವ ಇರುವುದು (ಉದಾಹರಣೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡುವುದು)

**ನಿಗಮನ ಪದ್ಧತಿ:-**

ಈ ಪದ್ಧತಿಯು ಅನುಗಮನ ಪದ್ಧತಿಗೆ ವ್ಯತಿರಿಕ್ತವಾಗಿದೆ.

ಈ ಪದ್ಧತಿಯಲ್ಲಿ ಬೋಧನೆಯು ಒಂದು ಸೂತ್ರ ಹಾಗೂ ನಿಯಮದೊಂದಿಗೆ ಪ್ರಾರಂಭವಾಗಿ ಉದಾಹರಣೆಯಿಂದ ಮುಕ್ತಾಯವಾಗುವುದು.ಅರ್ಥ :- ಸಾಮಾನ್ಯ ನಿಯಮ ಅಥವಾ ಸೂತ್ರದಿಂದ ನಿರ್ದಿಷ್ಟ ಉದಾಹರಣೆ ಕಡೆಗೆ , ಅಮೂರ್ತದಿಂದ ಮೂರ್ತದ ಕಡೆಗೆ, ಇಡಿಯಿಂದ ಬಿಡಿಯ ಕಡೆಗೆ ,ಸಂಕಿರ್ಣತೆಯಿಂದ ಸರಳತೆಯ ಕಡೆಗೆ ಸಾಗವುದೇ ನಿಗಮನ ಪದ್ಧತಿಯಾಗಿದೆ.

JSS CAREER ACADEMY

### ಹಂತಗಳು

- ಸಾಮಾನ್ಯ ನಿಯಮ
- ನಿಯಮವನ್ನು ಅರ್ಥ ಮಾಡಿಕೊಳ್ಳವುದು
- ನಿಯಮ ಅನ್ವಯ ಮಾಡಿಕೊಳ್ಳವುದು
- ಉದಾಹರಣೆ ಪರಿಶೀಲನೆ ಮಾಡುವುದು
- ನಿಗಮನ ಪದ್ಧತಿಯ ಅನುಕೂಲಗಳು
- ಕಡಿಮೆಯ ಅವಧಿಯಲ್ಲಿ ಹೆಚ್ಚು ವಿಷಯ ಬೋಧನೆ ಮಾಡಬಹುದು.
- ಮಕ್ಕಳ ಸ್ಮರಣೆ ಶಕ್ತಿ ಬೆಳೆಸುವುದು.
- ಉದಾ :- ಸೂತ್ರ ಅಥವಾ ನಿಯಮಗಳನ್ನು ನೆನಪಿನಲ್ಲಿಟ್ಟು ಕೊಳ್ಳುವುದರಿಂದ ನೆನಪಿನ ಶಕ್ತಿ ಹೆಚ್ಚಾಗುವುದು
- ಪಾಠದ ಪುನರಾವರ್ತನೆ, ಅಭ್ಯಾಸ ಕಾರ್ಯದಲ್ಲಿ ಈ ಪದ್ಧತಿ ಸಹಾಯಕ
- ಆಲೋಚನಾ ಶಕ್ತಿ ಹಾಗೂ ತಾರ್ಕಿಕ ಮನೋಭಾವನೆಯನ್ನು ಬೆಳೆಸುವುದು.
- ವಿಷಯದ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಸಹಾಯಕ.
- ವ್ಯಾಕರಣ ಬೋಧಾನಾ ಪದ್ಧತಿಯಲ್ಲಿ ನಿಯಮ ಪರಿಪಾಲನೆ ಮಾಡಲು ಸಹಾಯಕ .ಆದ್ದರಿಂದ ಇದಕ್ಕೆ ನಿಯಮ ಪರಿಪಾಲನೆ ಪದ್ಧತಿ ಎಂದು ಕರೆಯಲಾಗುತ್ತದೆ.
- ಅಭಿವ್ಯಕ್ತಿ ಸಾಮರ್ಥ್ಯವನ್ನು ಬೆಳೆಸುವುದು.
- ಅನಾನುಕೂಲಗಳು
- ಇದು ಪ್ರಾಥಮಿಕ ಹಂತದ ಮಕ್ಕಳಿಗೆ ಸೂಕ್ತವಲ್ಲ.
- ಅಮೂರ್ತ ಸ್ವರೂಪದ ಸೂತ್ರ ಅಥವಾ ನಿಯಮದಿಂದ ಕಲಿಕೆ ಪ್ರಾರಂಭವಾಗುವುದರಿಂದ ಅರ್ಥಗ್ರಹಿಕೆವಾಗುವುದು ಕಷ್ಟದಾಯಕ.
- ಸೂತ್ರ ಅಥವಾ ನಿಯಮ ಮರೆತು ಹೊದರೆ ಎಲ್ಲಾ ವಿಷಯ ಮರೆತು ಹೋಗುವುದುಮ.

### ರಚನಾವಾದ ಅರ್ಥ ವಾಖ್ಯೆ :-

- ಇದನ್ನು ಹೆಚ್ಚಾಗಿ ಕಲಿಕೆ ಮತ್ತು ಬೋಧನೆ ಹಾಗೂ ಪಠ್ಯಕ್ರಮ ಮತ್ತು ಮೌಲ್ಯಮಾಪನದಲ್ಲಿ ಹೆಚ್ಚಾಗಿ ಬಳಕೆ ಮಾಡಲಾಗುತ್ತದೆ.
- ರಚನಾವಾದವು ಹೆಚ್ಚಿನ ಪ್ರಾಮುಖ್ಯತೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ನೀಡುವುದು.

JSS CAREER ACADEMY

- ಪ್ರಮುಖವಾದ ರಚನಾವಾದ ಸಿದ್ಧಾಂತಗಳು
- ವೈಯಕ್ತಿಕ ಮತ್ತು ಜ್ಞಾನಾತ್ಮಕ ರಚನಾವಾದ :- ಜೀನ್ ಪಿಯಾಜಿ
- ಸಾಮಾಜಿಕ ರಚನಾವಾದ :- ವೈಗೋಟಸ್ಕಿ
- ಸಾಂದರ್ಭಿಕ ರಚನಾವಾದ :- ಕೋಬಿರ್ನ್
- **ರಚನಾವಾದ ಎಂದರೆ :-** ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ತಾವೇ ರಚನೆ ಮಾಡಿಕೊಳ್ಳವುದು.

**5 E ಮಾದರಿ ಪಾಠ ಯೋಜನೆ**

- ಈ ಮಾದರಿಯನ್ನು ಬೋಧನಾ ಕಲಿಕಾ ಚಕ್ರವೆಂತಲೂ ಕರೆಯಲಾಗುತ್ತದೆ.
- ಪಿಯಾಜಿ ಅವರ ಕಾರ್ಯವನ್ನು ಆದರಿಸಿ 1960 ರಂದು  ರಾಬರ್ಟ್ ಕಾರ್ಪ್ಲಸ್ ಅವರು ಈ ಬೋಧನಾ ಕಲಿಕಾ ಮಾದರಿಯನ್ನು ಪರಿಚಯ ಮಾಡಿದರು
- ಈ ಮಾದರಿಯ ಪಾಠಯೋಜನೆಯು ರಚನಾವಾದ ಆಧಾರದ ಮೇಲೆ ರೂಪಗೊಂಡಿದೆ.

**5 E ಮಾದರಿಯ ವಿನ್ಯಾಸ**

- **E -ENGAGE (**ತೊಡಗಿಸಿಕೊಳ್ಳವುದು) (ಅವದಿ- 5-15 ನಿಮಿಷ)
- **E :- EXPLORATION (**ಅನ್ವೇಷಣೆ)
- (ಅವಧಿ:- 10 20 ನಿಮಿಷಗಳು)
- **E :- EXPLANATION (**ವ್ಯಕ್ತಪಡಿಸುವುದು)
- (ಅವಧಿ :- 15 ರಿಂದ 25 ನಿಮಿಷ )
- **E:- ELBA RATION (** ಅನ್ವಯಿಸುವುದು)
- ಅವಧಿ :- 10 ರಿಂದ 30 ನಿಮಿಷ ಸಮಯ ನೀಡಬಹುದು
- **E :- EVALUATION (**ಮೌಲ್ಯಮಾಪನ)
- ಈ ಹಂತಕ್ಕೆ 5 ನಿಮಿಷಬೇಕು.
- ಕಲಿಕಾ ಸಂಪನ್ಮೂಲ-೧

## ಪಠ್ಯಪುಸ್ತಕ

JSS CAREER ACADEMY

**ಪಠ್ಯಪುಸ್ತಕ ಎಂದರೆ ;-** ತರಗತಿಯ ಉಪಯೋಗಕ್ಕಾಗಿ ಪರಿಣಿತರು ಎಚ್ಚರಿಕೆಯಿಂದ ಸಿದ್ದಪಡಿಸಿದ ಮತ್ತು ಬೋಧನೆಗೆ ಅವಶ್ಯಕವಾದ ಸಹಾಯಕ ಸಾಮಾಗ್ರಿ ಮತ್ತು ವಿಷಯಗಳನ್ನೊಳಗೊಂಡ ಪುಸ್ತಕವಾಗಿದೆ.

**ವ್ಯಾಖ್ಯೆಗಳು:**

**ಯಾರ್ಂಡಮ್ ಹೌಸ್ ವಿಶ್ವಕೋಶ** : ಪಠ್ಯಪುಸ್ತಕವು ಒಂದು ನಿರ್ದಿಷ್ಟ ವಿಷಯದ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳು ಉಪಯೋಗಿಸುವಂತಹ ಉತ್ತಮ ಗುಣಮಟ್ಟದ ಪುಸ್ತಕವಾಗಿರುವುದು.

**ರೇಟಿಂಗ್ :-** ಪಠ್ಯಪುಸ್ತಕವು ಬೋಧನಾ ಸಾಮಾಗ್ರಿಯ ಅರ್ಧ ಸಾಮಾಗ್ರಿವಿದ್ದಂತೆ

**ಹೆಚ್ ಆರ್ ಡೌಗ್ಲಸ್** : " ಏನನ್ನೂ ಹೇಳಿ ಕೊಡಬೇಕು? ಹೇಗೆ ಹೇಳಿಕೊಡಬೇಕು ? ಎಂಬುದನ್ನು ನಿರ್ಧರಿಸುವ ಒಂದು ಸತ್ವಪೂರ್ಣ ಸಾಧನವೇ ಪಠ್ಯಪುಸ್ತಕ

**ಅನುಕೂಲಗಳು**

- ಕಡಿಮೆಯ ವೆಚ್ಚದಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಜ್ಞಾನ ನೀಡುವುದು.
- ಶಿಕ್ಷಕರಿಗೆ ಮಾರ್ಗದರ್ಶಕ ಮಾಡುವುದು .
- ಏನು ಕಲಿಸಬೇಕು ? ಎಷ್ಟು ಕಲಿಸಬೇಕು? ಹೇಗೆ ಕಲಿಸಬೇಕು ಮುಂತಾದ ಪ್ರಶ್ನೆಗಳಿಗೆ ಉತ್ತರ ನೀಡುವುದು.
- ಶಿಕ್ಷಕ ಹಾಗೂ ವಿದ್ಯಾರ್ಥಿಗಳಿಗೆ ವಿಷಯದ ಕುರಿತು ಸಂದೇಹ ಉಂಟಾದಲ್ಲಿ ಅದನ್ನು ನಿವಾರಿಸವುದು.
- ಇದು ಶಿಕ್ಷಕರಿಗೆ ಬೋಧನಾ ಉಪಕರಣವಾಗಿದೆ.
- ವಿದ್ಯಾರ್ಥಿಗಳು ತರಗತಿ ಬಿಡುವಿನ ಹಾಗೂ ಗೈರು ಹಾಜರಾತಿ ಸಂದರ್ಭದಲ್ಲಿ ಪುಸ್ತಕ ಓದಿ ಜ್ಞಾನ ಪಡೆಯಬಹುದು.
- ಎಲ್ಲಾ ಬೋಧಾನ ವಿಧಾನಗಳಿಗೆ ಆಧಾರವಾಗಿದೆ.
- ವಿದ್ಯಾರ್ಥಿಗಳ ಕಲಿಕಾ ಅವಶ್ಯಕತೆಯನ್ನು ಪೂರೈಸುವುದು.
- ಕಾಲ ಕಲ್ಪನೆ ಬೆಳೆಸುವುದಕ್ಕೆ (ಇತಿಹಾಸಕ್ಕೆ ಮಾತ್ರ)
- ವಿಷಯದ ಕುರಿತು ಸಂಪೂರ್ಣ ಮಾಹಿತಿ ನೀಡುವುದು.
- ಶಿಕ್ಷಕರಿಗೆ ಗೃಹ ಕಾರ್ಯನಿಯೋಜನೆ ಮಾಡಲು ಸಹಕಾರಿ.
- ಕೌಶಲ್ಯಗಳ ಬೆಳವಣಿಗೆ ಸಹಾಯಕ ಆಗುವುದು.

JSS CAREER ACADEMY

- ಉದಾ :- ಭೂಪಟ ಬರೆಯುವುದು, ನಕ್ಷಾ ಚಿತ್ರ ಬರೆಯುವುದು ಇತ್ಯಾದಿ

**ಲಕ್ಷಣಗಳು**

- ಪಠ್ಯಪುಸ್ತಕವು ಬೋಧನಾ ಉದ್ದೇಶ ಮತ್ತು ಗುರಿಗಳಿಗೆ ಅನುಗುಣವಾಗಿ ಇರಬೇಕು.
- ಪಠ್ಯಪುಸ್ತಕದಲ್ಲಿ ಸರಳ, ಸುಲಭ ಹಾಗೂ ಸ್ಪಷ್ಟವಾದ ಭಾಷೆಯನ್ನು ಬಳಕೆ ಮಾಡಬೇಕು. ಕಠಿಣ ಭಾಷೆಯಿಂದ ದೂರ ಇರಬೇಕು.
- ಪಠ್ಯಪುಸ್ತಕವು ದೃಷ್ಟಾಂತಗಳನ್ನು ಒಳಗೊಂಡಿರಬೇಕು.
- ಪಠ್ಯಪುಸ್ತಕದಲ್ಲಿ ವಿಷಯವನ್ನು ಅನುಕ್ರಮಬದ್ಧವಾಗಿ ಜೋಡಣೆ ಮಾಡಿರಬೇಕು.
- ಪುಸ್ತಕವು ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸವಂತೆ ಇರಬೇಕು.
- ಅಂತರರಾಷ್ಟ್ರೀಯ ಹಾಗೂ ಪ್ರಚಲಿತ ವಿದ್ಯಾಮಾನಗಳನ್ನು ಒಳಗೊಂಡಿರಬೇಕು.
- ಪಠ್ಯಪುಸ್ತಕವು ಸಮಗ್ರವಾದ ಮಾಹಿತಿ ಒಳಗೊಂಡಿರಬೇಕು
- ವೈಜ್ಞಾನಿಕ ಅಂಶಗಳನ್ನು ಒಳಗೊಂಡಿರಬೇಕು
- ಪಠ್ಯಪುಸ್ತಕವು ನಿಗದಿತ ಅವಧಿಯಲ್ಲಿ ಪರಿಷ್ಕರಣೆ ಮಾಡತಿರಬೇಕು
- ಪಠ್ಯಪುಸ್ತಕ ಮನೋವೈಜ್ಞಾನಿಕ ತತ್ವದ ಆಧಾರದ ಮೇಲೆ ರಚನೆಗೊಂಡಿರಬೇಕು.
- ಉತ್ತಮವಾದ ಪೀಠೋಪಕರಣ ಬಳಕೆಗೆ ಅವಕಾಶ ಮಾಡಿಕೊಡಬೇಕು.

**ಅಭ್ಯಾಸ ಪುಸ್ತಕ (Work book)**

- ಅಭ್ಯಾಸ ಪುಸ್ತಕಗಳು ಪ್ರಾಥಮಿಕ ಹಂತದ ಮಕ್ಕಳಿಗೆ ಆಶಾಕೀರಣವಿದ್ದಂತೆ.
- ತರಗತಿಯ ಪಠ್ಯಪುಸ್ತಕಕ್ಕೆ ಪೂರಕವಾಗಿ ವಿದ್ಯಾರ್ಥಿಗಳು ತಮ್ಮನ್ನು ತಾವು ಮೌಲ್ಯಮಾಪನ ಮಾಡುಕೊಳ್ಳುವುದಕ್ಕೆ ಹಾಗೂ ಪರೀಕ್ಷೆಗಿಂತ ಮುಂಚೆ ಪ್ರಶ್ನೋತ್ತರ ಅಭ್ಯಾಸ ಮಾಡಲು ಸಹಾಯಕವಾಗುವ ಪುಸ್ತಕವೇ ಅಭ್ಯಾಸ ಪುಸ್ತಕ ಎನ್ನವರು.

**ಲಕ್ಷಣಗಳು**

- ಸಾಮನ್ಯ ಅಭ್ಯಾಸ ಪುಸ್ತಕವು ವಿದ್ಯಾರ್ಥಿಗಳು ಗ್ರಹಿಸುವಂತಹ ಚಿತ್ರ ಹಾಗೂ ಮಾಹಿತಿಯನ್ನು ಒಳಗೊಂಡಿರಬೇಕು.
- ಅಭ್ಯಾಸದ ಪುಸ್ತಕದ ಪ್ರತಿಯೊಂದು ಪುಟದ ಮೇಲಿನ ಭಾಗದಲ್ಲಿ ಸಾಮರ್ಥ್ಯ ಹಾಗೂ ಉಪಸಾಮರ್ಥ್ಯ ಗಳನ್ನು ನೀಡಿರಬೇಕು.

JSS CAREER ACADEMY

- ಅಭ್ಯಾಸ ಪುಸ್ತಕಗಳು ವಿದ್ಯಾರ್ಥಿಗಳ ಮಾನಸಿಕ ಹಾಗೂ ವಯಸ್ಸಿಗೆ ಅನುಗುಣವಾಗಿ ರಚನೆ ಮಾಡಬೇಕು.
- ಅಭ್ಯಾಸ ಪುಸ್ತಕವು ಪ್ರತಿಯೊಂದು ಪ್ರಶ್ನೆ ಅಥವಾ ಅಭ್ಯಾಸ ಮಾಡುವುದಕ್ಕೆ ಸೂಕ್ತ ಸ್ಥಳಾವಕಾಶ ಒದಗಿಸಬೇಕು .ಇತ್ಯಾದಿ

**ಅನುಕೂಲಗಳು**

- ವಿದ್ಯಾರ್ಥಿಗಳು ಹೆಚ್ಚಿನ ಕಲಿಕಾ ಸಾಮರ್ಥ್ಯ ವೃದ್ಧಿಯಾಗುವುದು.
- ಸಾಮರ್ಥ್ಯವನ್ನು ಸುಲಭವಾಗಿ ಗ್ರಹಿಸಿವಂತೆ ಮಾಹಿತಿ ನೀಡುವುದು.
- (**Work book** ನಿಂದ ಲಾಭಗಳು)

**ಶಿಕ್ಷಕರ ಕೈಪಿಡಿ**

- ಇದು ಶಿಕ್ಷಕರಿಗೆ ಮಾರ್ಗದರ್ಶನ ಮಾಡುವ ಪುಸ್ತಕ ಆದ್ದರಿಂದ ಇದನ್ನು ಶಿಕ್ಷಕನ ಸ್ನೇಹಿತ ಎಂದು ಕರೆಯಲಾಗುತ್ತದೆ.
- ಪಠ್ಯಪುಸ್ತಕದ ಮಾಹಿತಿ ಹಿನ್ನಲೇಯನ್ನು ಅರ್ಥಪೂರ್ಣವಾಗಿ ಶಿಕ್ಷಕನಿಗೆ ತಿಳಿಸುವ ಪುಸ್ತಕವೇ ಶಿಕ್ಷಕರ ಕೈಪಿಡಿ
- ಬೋಧನೆಗೆ ಬೇಕಾದ ಸ್ಪಷ್ಟ ಮಾಹಿತಿಯನ್ನು ಶಿಕ್ಷಕರಿಗೆ ನೀಡುವಂತಹ ಪುಸ್ತಕವೇ ಶಿಕ್ಷಕರ ಕೈಪಿಡಿ

**ಅನುಕೂಲ:**

- ಪ್ರತಿ ಮಗುವಿನ ಪೂರ್ವಜ್ಞಾನವನ್ನು ಅರಿಯಲು ಸಹಾಯಕ.
- ವಿದ್ಯಾರ್ಥಿಗಳ ಶಿಕ್ಷಕರಿಗೆ ಪ್ರಾಯೋಗಿಕ ಕಾರ್ಯವನ್ನು ತರಗತಿಯಲ್ಲಿ ಕೈಗೊಳ್ಳುವುದಕ್ಕೆ ಸಹಾಯಕ.
- ಶಿಕ್ಷಕರ ಕೈಪಿಡಿಯು ವಿದ್ಯಾರ್ಥಿಗಳ ಮುಂದಿನ ಕಲಿಕೆ ಮಾರ್ಗಸೂಚಿಯಾಗಿದೆ.
- ಶಿಕ್ಷಕರ ಕೈಪಿಡಿಯು ಉತ್ತಮ ಸಂಪನ್ಮೂಲ ಸಾಮಾಗ್ರಿಗಳನ್ನು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಗಿ ಬೋಧನೆ ಮಾಡಲು ಸಹಾಯಕ
- ಇದು ಶಿಕ್ಷಕರಿಗೆ ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಉತ್ತಮವಾಗಿ ಬೋಧನೆ ಮಾಡಲು ಸಹಾಯಕ.

**ಅಟ್ಲಾಸ್ :-**

JSS CAREER ACADEMY

- ಸಮಾಜ ವಿಜ್ಞಾನ ಬೋಧನೆಯಲ್ಲಿ ಅಟ್ಲಾಸ್ ಒಂದು ಉಪಯುಕ್ತ ಬೋಧನಾ ಸಾಧನ ಆಗಿದೆ.
- ಇದರ ಸಹಾಯವಿಲ್ಲದೆ ಇತಿಹಾಸ ಹಾಗೂ ಭೂಗೋಳದ ಬಗ್ಗೆ ಸಮಂಜಸವಾದ ಮಾಹಿತಿ ಪಡೆಯಲು ಸಾಧ್ಯವಿಲ್ಲ.
- ಇದು ಭೂಪಟಗಳ ಸಂಗ್ರಾಹಾಲವಾಗಿದೆ. ಭೂಗೋಳ ಶಾಸ್ತ್ರದ ನಿಘಂಟು ಎಂದು ಪ್ರಸಿದ್ಧಿ.
- ಇದು ಸ್ಥಳ ಹಾಗೂ ದಿಕ್ಕು ತಿಳಿಯಲು ಸಹಾಯಕ .
- ಶಿಕ್ಷಕರು ತರಗತಿಯಲ್ಲಿ ಮೊದಲ ಅಟ್ಲಾಸ್ ನಲ್ಲಿರುವ ಮಾಹಿತಿಯನ್ನು ಅಭ್ಯಸಿಸಿದ ನಂತರ ತರಗತಿಯಲ್ಲಿ ಭೂಪಟಗಳನ್ನು ಬಳಕೆ ಮಾಡಬೇಕು ಆಗು ಸ್ಥಳಗಳನ್ನು ವುರುತಿಸುವುದು ಸುಲಭವಾಗುವುದು.
- ಅಟ್ಲಾಸ್ ನಿಂದ ವಿದ್ಯಾರ್ಥಿಯಲ್ಲಿ ಬೆಳೆಯುವ ಪ್ರಮುಖ ಕೌಶಲ್ಯಗಳು
- ನಿರ್ಧಿಷ್ಟ ಸ್ಥಳವನ್ನು ಗುರುತಿಸುವುದು.
- ಪ್ರತಿಯೊಂದು ಅಟ್ಲಾಸ್ ಕೊನೆಯಲ್ಲಿ ಸ್ಥಳ ಸೂಚಿಹೊಂದಿರವುದು.
- ರೇಖಾಂಶ ಹಾಗೂ ಅಕ್ಷಾಂಶಗಳನ್ನು ಆಧಾರವನ್ನಾಗಿ ಇಟ್ಟುಕೊಂಡು ಸ್ಥಳ ಗುರುತಿಸುವ ಸಾಮರ್ಥ್ಯ ವೃದ್ಧಿಯಾಗುವುದು.
- ಇದರಿಂದ ವಿದ್ಯಾರ್ಥಿಗಳಿಗೆ ದಿಕ್ಕುಗಳನ್ನು ಗುರುತಿಸುವ ಕೌಶಲ್ಯ ವೃದ್ಧಿಯಾಗುವುದು.
- ಅಟ್ಲಾಸ್ ಭೂಪಟಗಳನ್ನು ನೋಡಿದರೆ ತಳಭಾಗದಲ್ಲಿ ದಿಕ್ಸೂಚಿಯನ್ನು ನೀಡಲಾಗುವುದು.
- ಉದಾ:: **N---------S**
- ವಿಶ್ವದಲ್ಲಿ ಬೇರೆ ಬೇರೆ ಇರುವಿಕೆ ಗುರುತಿಸ ಬಹುದು
- ನದಿ ಸಮುದ್ರ ಸಾಗರ ಮುಂತಾದಗಳನ್ನು ಗುರುತಿಸುವುದು ಇತ್ಯಾದಿ

**ಉಪಯೋಗಗಳು**

- ಅಟ್ಲಾಸ್ ವಿದ್ಯಾರ್ಥಿಗಳಿಗೆ ಸೂಕ್ತ ಸ್ಥಳ ಕಲ್ಪನೆಯನ್ನು ಬಿಡಿಸುವುದು.
- ಅಟ್ಲಾಸ್ ಸಮಜ ವಿಜ್ಞಾನ ವಿಷಯದ ನಿಘಂಟು
- ದಿಕ್ಕುಗಳಿಗೆ ಸಂಬಂದಿಸಿದೆ ಸಂಪೂರ್ಣ ಮಾಹಿತಿ ನೀಡುವುದು.
- ಪ್ರಪಂಚದ ಖಂಡಗಳನ್ನು ತಿಳಿಯಲು ಸಹಾಯಕ.
- ಭೂಮಿಯ ಆಕಾರ, ಅಂಕ್ಷಾಶ ,ರೇಖಾಂಶಗಳು, ಮತ್ತು ವಲಯಗಳ ಅಧ್ಯಯನ ಮಾಡಲು ಸಹಾಯಕ.

JSS CAREER ACADEMY

- ಪ್ರತಿ ಖಂಡದ ,ದೇಶದ ರಾಜ್ಯದ ವಿಸ್ತೀರ್ಣ, ಸ್ವಾಭಾವಿಕ ಸಸ್ಯವರ್ಗ,ಮತ್ತು ಪ್ರಾಕೃತಿಕ ಸಂಪತ್ತು ತಿಳಿಯುವುದು.
- ಪ್ರಪಂಚದ ನದಿ ಸರೋವರ ,ಸಮುದ್ರ ಸಾಗರ ಇತ್ಯಾದಿಗಳ ಕುರಿತು ತಿಳಿಯುವುದು.
- ಬೌಗೋಳಿಕ ಅಂಶಗಳಾದ ಖಾರಿ ಕೋಲ್ಲಿ ದ್ವೀಪ, ಮುಂತಾದ ಅಂಶಗಳನ್ನು ತಿಳಿಯುವುದು.
- ಸಾರಿಗೆ ಮಾರ್ಗ ತಿಳಿಯಬಹುದು.

## ಬೋಧನಾ ಉಪಕರಣಗಳ ಪರಿಚಯ

- ಶಿಕ್ಷಕನ ಬೋಧನೆಯ ಸಂದರ್ಭದಲ್ಲಿ ವಿಷಯವನ್ನ ಪರಿಣಾಮಕಾರಿಯಾಗಿ ವರ್ಗಾವಣೆ ಮಾಡಲು ಹಾಗೂ ಅವರಲ್ಲಿ ಕುತೂಹಲ ಕೆರಳುವಂತೆ ಮಾಡಲು ಸಾಧನಗಳನ್ನು ಉಪಯೋಗಿಸುತ್ತನೆ ಈ ಸಾಧನಗಳನ್ನು ಬೋಧನಾ ಮತ್ತು ಕಲಿಕಾ ಉಪಕರಣಗಳೆಂದು ಕರೆಯಲಾಗುತ್ತದೆ.
- ವೀಕ್ಷಸುವುದರ ಮೂಲಕ ಕಲಿಕೆಯನ್ನುಂಟು ಮಾಡುವ ಸಾಧನಕ್ಕೆ ದೃಕ್ ಉಪಕರಣ ಎಂದು ಕರೆಯಲಾಗುತ್ತದೆ.
- ಆಲಿಸುವುದರ ಮೂಲಕ ಕಲಿಕೆಯನ್ನುಂಟು ಮಾಡುವ ಉಪಕರಣಕ್ಕೆ  ಶ್ರವಣೋಪಕರಣ ಎಂದು ಕರೆಯಲಾಗುತ್ತದೆ.
- ವೀಕ್ಷಿಸಿಯೂ ಮತ್ತು ಆಲಿಸಿಯೂ ಕಲಿಯಲು ಸಹಾಯವಾಗಿರುವಂತಹ ಉಪಕರಣಗಳಿಗೆ ದೃಕ್ ಶ್ರವಣೋಪಕರಣಗಳು ಎಂದು ಕರೆಯಲಾಗುತ್ತದೆ.

### ವ್ಯಾಖ್ಯೆಗಳು

**ಬರ್ಟನ್ :-** ಕಲಿಕೆಯನ್ನು ಪ್ರೇರೇಪಿಸುವ ಪ್ರಚೋದಿಸುವ  ಮತ್ತು ಪುನರ್ಬಲನಗೊಳಿಸುವ ಇಂದ್ರಿಯ ವಸ್ತುಗಳು ಅಥವಾ ಪ್ರತಿಬಿಂಬಗಳೇ ದೃಕ್ ಶ್ರವಣೋಪಕರಣಗಳು

### ಉಪಯೋಗಗಳು

- ಗತಕಾಲದ ಘಟನೆಗಳನ್ನು ಪುನರ್ ನಿರ್ಮಾಣ ಮಾಡುವುದು.
- ಇಂದ್ರೀಯಗಳು ಜ್ಞಾನ ಭಂಡಾರದ ಹೆಬ್ಬಾಗಿಲು. ಇದರಲ್ಲಿ ವಿದ್ಯಾರ್ಥಿಗಳ ಎಲ್ಲಾ ಇಂದ್ರೀಯಗಳ ಭಾಗಿಯಾಗುವುದು.
- ಕಲಿಕೆ ಶಾಶ್ವತ ಗೊಳ್ಳವುದು
- ಅಮೂರ್ತ ವಿಷಯಗಳನ್ನು ಮೂರ್ತಗೊಳಿಸುವುದು.

JS CAREER ACADEMY

➢ ಇದರಲ್ಲಿ ಶಾಬ್ದಿಕ ಮಾತು ಕಡಿಮೆ ಇರುವುದು.ಇದರಿಂದ ಶಿಕ್ಷಕರಿಗೆ ದೈಹಿಕ ಆಯಾಸ ಎನಿಸುವುದಿಲ್ಲ.

➢ ಕಲಿಕೆ ಹೆಚ್ಚು ಪರಿಣಾಮಕಾರಿಯಾಗುವುದು

➢ ಇವು ತರಗತಿಯಲ್ಲಿ ಹೆಚ್ಚು ವೈವಿಧ್ಯತೆ ಕಲಿಕಾ ವಾತಾವರಣ ನಿರ್ಮಾಣ ಮಾಡುವುದು.

➢ ಶಿಕ್ಷಕ ಮತ್ತು ವಿದ್ಯಾರ್ಥಿಯಲ್ಲಿ ಉತ್ತಮ ಬಾಂದವ್ಯ ಮೂಡುವುದು.

➢ ಮಕ್ಕಳ ಕಲಿಕೆಯಲ್ಲಿ ಆಸಕ್ತಿ ಮತ್ತು ಕುತೂಹಲ ಉಂಟು ಮಾಡುವುದು.

➢ ವಿದ್ಯಾರ್ಥಿಗಳ ಅವಧಾನವನ್ನು ತರಗತಿಯಲ್ಲಿ ದೀರ್ಘಾವಧಿಯ ವರೆಗೆ ಕಾಪಡಿಕೊಂಡು ಬೋಧನೆ ಮಾಡಬಹುದು.

➢ ನಕ್ಷೆ ಬರೆಯುವ ಪುಸ್ತಕ

➢ ನಕ್ಷೆ ಬರೆಯುವ ಪುಸ್ತಕವು ಸಮಜ ವಿಜ್ಞಾನ ಹಾಗೂ ಭೂಗೋಳ ಕಲಿಯುವ ವಿದ್ಯಾರ್ಥಿಗಳಿಗೆ ಅಗತ್ಯವಾಗಿದೆ.

➢ ಇದರಿಂದ ವಿದ್ಯಾರ್ಥಿಯಲ್ಲಿ ನಕ್ಷೆ ಬರೆಯುವ ಕೌಶಲ್ಯ ಬಳಸಬಹುದಾಗಿದೆ.

➢ ನಕ್ಷೆ ಬರೆಯುವ ಪುಸ್ತಕ ಎಂದರೆ:- ಅನೇಕ ವರ್ಣರಂಜೀತ ಭೂನಕ್ಷೆ, ರೇಖಾನಕ್ಷೆಗಳು ವಿದ್ಯಾರ್ಥಿಗಳು ಬಿಡಿಸಲು ಅನುಕೂಲವಾಗಿರುವ ನಕ್ಷೆಗಳ ಸಂಗ್ರಹವೇ ನಕ್ಷೆ ಬರೆಯುವ ಅಥವಾ ಬಿಡಿಸುವ ಪುಸ್ತಕ ಎನ್ನವರು.

**ಲಕ್ಷಣಗಳು**

➢ ನಕ್ಷೆ ನಿರ್ದಿಷ್ಟ ಸ್ಥಳದ ಆಕಾರ, ಕ್ಷೇತ್ರ ಮತ್ತು ದಿಕ್ಕನ್ನು ಸರಿಯಾಗಿ ತೋರಿಸಬೇಕು.

➢ ನಿರ್ದಿಷ್ಟ ಪ್ರಮಾಣಕ್ಕೆ ಅನುಗುಣವಾಗಿ ರಚನೆ ಮಾಡಬೇಕು.

➢ ಭೂಪಟದ ಚಿನ್ಹೆಗಳನ್ನು ಸರಿಯಾಗಿ ಬರೆಯಬೇಕು.

➢ ಅದಕ್ಕೆ ಸಂಬಂಧಿಸಿದ ಸೂಚಿಯನ್ನು ಪ್ರತಿಯೊಂದು ಭೂಪಟದ ಬಲಭಾಗದಲ್ಲಿ ಕೆಳತುದಿಯಲ್ಲಿ ಬರೆಯಬೇಕು.

➢ ಆಳತೆ ಸರಿಯಾಗಿ ಸೂಚಿಸಿರಬೇಕು

➢ ನಕ್ಷೆ ಬರೆಯುವ ಬಣ್ಣ ಸಮಂಜಸವಾಗಿರಬೇಕು.

➢ ಉಪಯೋಗಳು

JSS CAREER ACADEMY

- ಇದರಲ್ಲಿರುವ ರೇಖಾಂಶ ಹಾಗೂ ಅಕ್ಷಾಂಶದ ಸಹಾಯದಿಂದ ಭೂಮಿಯ ಮೇಲಿನ ಸ್ಥಾನಗಳನ್ನು ಗುರುತಿಸಬಹುದು.
- ನಿರ್ಧಿಷ್ಟ ಪ್ರದೇಶದ ಆಕಾರ ,ಗಾತ್ರ, ಮುಂತಾದ ಬೌಗೋಳಿಕ ಲಕ್ಷಣಗಳನ್ನು ತಿಳಿಯಬಹುದು.
- ಕೊಟ್ಟಿರುವ ಆಳತೆಯಿಂದ ಎರಡು ಪ್ರದೇಶದ ನಡುವಿನ ಅಂತರವನ್ನು ತಿಳಿಯಬಹುದು.
- ನಕ್ಷೆ ಬರೆಯುವ ಕೌಶಲ್ಯ ಬೆಳೆಯುವುದು
- ಪ್ರತಿಯೊಂದು ಪಾಠದ ಕೊನೆಗೆ ಪಾಠದಲ್ಲಿ ಬರುವ ಭೌಗೋಳಿಕ ಅಂಶಗಳ,ಸ್ಥಳ ಗುರುತಿಸಲು ಸಹಾಯಕ.
- ರಾಜಮನೆತನಗಳ ಬಗ್ಗೆ ತಿಳಿಯಬಹುದು.
- ಪರಾಮರ್ಶನ ಪುಸ್ತಕ
- ವಿಷಯ ಬೋಧನೆಗೆ ಸಂಬಂಧಿಸಿದಂತೆ ಶಿಕ್ಷಕರು ಹೆಚ್ಚಿನ ಮಾಹಿತಿ ಸಂಗ್ರಹಣೆಗಾಗಿ ಅದಕ್ಕೆ ಸಂಬಂದಿಸಿದ ಕಥೆ, ಕಾದಂಬರಿ ,ಕೃತಿ, ಪತ್ರಿಕೆ ಮುಂತಾದ ಪ್ರಸಿದ್ಧಿ ಪುಸ್ತಕಗಳನ್ನು ಓದಿ ಪಠ್ಯಕ್ಕೆ ಸಂಬಂದಿಸಿದ ಮಾಹಿತಿ ಸಂಗ್ರಹಿಸಿ ಪಾಠ ಬೋಧನೆ ಮಾಡಬೇಕಾಗುವುದ ಶಿಕ್ಷಕ, ಈ ಮಾಹಿತಿಗಾಗಿ ಉಪಯೋಗಿಸಿದ ಪುಸ್ತಕಗಳನ್ನು ಪರಾಮರ್ಶನ ಗ್ರಂಥ ಅಥವಾ ಪುಸ್ತಕ ಎಂದು ಕರೆಯಲಾಗುತ್ತದೆ

**ಉಪಯೋಗಗಳು**

- ಪಠ್ಯಪುಸ್ತಕಿಂತ ಹೆಚ್ಚಿನ ಮಾಹಿತಿ ದೊರೆಯುವುದು.
- ಕೆಳಹಂತದ ಪಠ್ಯಪುಸ್ತಕದ ಗೊಂದಲು ನಿವಾರಣೆ ಆಗುವುದು.
- ಶಿಕ್ಷಕರಲ್ಲಿ ಆತ್ಮ ವಿಶ್ವಾಸ ವೃದ್ಧಿಯಾಗುವುದು.
- ಮಕ್ಕಳ ಮುಂದಿನ ಓದು ಕುತೂಹಲವುನ್ನುಂಟು ಮಾಡುವುದು.
- ವಿರಾಮ ವೇಳೆಯು ಸದುಪಯೊಕಗವಾಗುವುದು.
- ವಿಷಯದ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿ ಬಹುದು.
- ಮಹಾಪುರುಷರ ಕುರಿತು ಹೆಚ್ಚಿನ ಮಾಹಿತಿ ತಿಳಿಯಬಹದು.
- ಜ್ಞಾನದ ಬೆಳವಣಿಗೆ ವೃದ್ಧಿಯಾಗುವುದು.
- ಪ್ರಮುಖವಾದ ಬೋಧನಾ ಉಪಕರಣಗಳು
- ಧೃಕ್ ಸಾಧನಗಳು
- ಕಣ್ಣಗಳ ಸಹಾಯದಿಂದ ಮಾಹಿತಿ ಸಂಗ್ರಹಿಸುವುದು.

JSS CAREER ACADEMY

- ನಕಾಶೆಗಳು
- ಚಿತ್ರಪಟಗಳು,
- ಮಾದರಿಗಳು
- ನಮೂನೆಗಳು
- ಕಾಲಸೂಚಿ ಭೂಗೋಳ
- ಜಾರುಚಿತ್ರ ಪ್ರೇಕ್ಷಕ್ ಪ್ರದರ್ಶನ ಫಲಕ
- ಶ್ರಾವಣ ಸಾಧನಗಳು:-
- ಕೇವಲ ಕಿವಿ ಅಥವಾ ಕೇಳುವುದರ ಮುಖಾಂತರ ಮಾಹಿತಿ ಸಂಗ್ರಹಣೆ ಮಾಡುವುದು.
- ರೇಡಿಯೋ
- ಗ್ರಾಮಫೋನ್
- ಟೇಪ್ ರೆಕಾರ್ಡ್

**ದೃಕ್ ಶ್ರವಣೋಪಕರಣ:-**

- ಕಣ್ಣ ಮತ್ತು ಕಿವಿಯ ಮೂಲಕ ಮಾಹಿತಿ ಸಂಗ್ರಹಣೆ ಮಾಡುವುದು.
- ಟ್ವಿ ವಿ, ನಾಟಕ, ಚಲನಚಿತ್ರ, ಗಣಕಯಂತ್ರ ಇತ್ಯಾದಿ.
- ಭೂಪಟಗಳು
- ಇತಿಹಾಸ ಬೋಧನೆಗೆ ಅತೀಅವಶ್ಯಕವಾದ ಸಾಧನ ಆಗಿದೆ.
- ಇದನ್ನು ನಿರ್ಧಿಷ್ಟ ಪಡಿಸಿದ ಸ್ಥಳ,ದೇಶದ  ಅಥವಾ ಸನ್ನಿವೇಶದ ಖಚಿತ ತಿಳುವಳಿಕೆ ಸಹಾಯಕ**.**
- ಭೂಪಟವು ಇತಿಹಾಸದ ಕಣ್ಣು ಇದರಿಂಸ ಸಹಾಯದಿಂದ ಇತಿಹಾಸ ನೋಡಬೇಕು.
- **ಅರ್ಥ :- ಇದು ಲ್ಯಾಟಿನ್ ಭಾಷೆಯು ಮ್ಯಾಪ್ಪ (mappa)** ಈಗೇಂದರೆ ಕೌಚಕದಷ್ಟು ಅಗಲವಾಗಿರುವ ಒಂದು ಮುಸುಕು ಬಟ್ಟೆ
- ಭೂಪಟ ಎಂದರೆ :- ಭೂಮಿಯ ಮೇಲಿನ ಅಂಶಗಳನ್ನು ಪ್ರತಿನಿಧಿಸುವ ಒಂದು ಸಮತಟ್ಟಾದ ಹಾಳೆಯನ್ನು ಭೂಪಟ ಎಂದು ಕರೆಯಲಾಗುತ್ತದೆ.

**ಲಕ್ಷಣಗಳು**

- ಉತ್ತಮ ಭೂಪಟವು ಆಕಾರ ,ದಿಕ್ಕು, ಕ್ಷೇತ್ರಗಳನ್ನು ಸರಿಯಾಗಿ ತೋರಿಸಬೇಕು.

JSS CAREER ACADEMY

- ನಿರ್ಧಿಷ್ಟ ಪ್ರಮಾಣಕ್ಕೆ ಅನುಗುಣವಾಗಿ ರಚನೆ ಮಾಡಿರಬೇಕು ಹಾಗೂ ಅದರ ಪ್ರಮಾಣವನ್ನು ಭೂಪಟದಲ್ಲಿ ಬರೆಯಬೇಕು.
- ಭೂಪಟದ ಚಿಹ್ನೆಗಳನ್ನು ಅರಿಯದ ರೀತಿಯಲ್ಲಿ ಬಳಸಬೇಕು.ಸೂಚಿಯನ್ನು ಬಲಭಾಗ ಕೆಳ ಸೂಚಿಯಲ್ಲಿ ತೋರಿಸಬೇಕು.
- ಭೂಪಟವು ಆಕರ್ಷಕವಾಗಿರಬೇಕು
- ಭೂಪಟದಲ್ಲಿ ಉಪಯೋಗಿಸಿದ ಬಣ್ಣ ಸಮಂಜಸ ಹಾಗೂ ಅರ್ಥಪೂರ್ಣವಾಗಿರಬೇಕು.ಭೂಪಟವು ಯಾವ ವಿಷಯಕ್ಕೆ ಸಂಬಂದಿಸಿದಂತೆ ರಚನೆ ಮಾಡಲಾಗಿದಿಯೋ ಅದರ ಬಗ್ಗೆ ಸಂಪೂರ್ಣ ಹಾಗೂ ಸ್ಪಷ್ಟ ಮಾಹಿತಿ ನೀಡಬೇಕು.
- ಭೂಪಟವು ಅಕ್ಷಾಂಶ ಹಾಗೂ ರೇಖಾಂಶಗಳನ್ನು ತೋರಿಸಬೇಕು.
- ಭೂಪಟವು ಶೀರ್ಷಿಕೆ ಹೊಂದಿರಬೇಕು.
- ಭೂಪಟದ ಪ್ರಕಾರಗಳು
- ಐತಿಹಾಸಿಕ ಭೂಪಟ ಉದಾ :- ರಾಜ ,ಸೈನಿಕ ಹಾಗೂ ಪ್ರಾವಸಿಗರು ಹಾದು ಹೋದ ಮಾರ್ಗ
- ಉದಾ :- ಮೌರ್ಯ ಮನೆತನ ವಿಸ್ತರಣೆ, ಇತ್ಯಾದಿ
- ತೆಗ್ಗು ದಿನ್ನೆ ಭೂಪಟ :-
- ಉದಾ :-ಗುಡ್ಡಗಾಡು ಪ್ರದೇಶಗಳು
- ಸಮತಲ ಭೂಪಟ
- ರಾಜಕೀಯ, ಪ್ರಾಕೃತಿ, ಜನಸಂಖ್ಯೆ, ಮಳೆ ಮತ್ತು ಮಾರ್ಗ ತೋರಿಸುವ ಭೂಪಟಗಳಾಗಿವೇ.
- ಉದಾ :- ಪ್ರಾಚಿನ ಭಾರತ ನಕಾಶೆ, ಮೊಗಲ್ ಸಾಮ್ರಾಜ್ಯದ ಬೆಳೆವಣಿಗೆ

## ಮಾದರಿಗಳು

- ಮಾದರಿಗಳು ನೈಜರೂಪದ ಪ್ರತಿಬಿಂಬವಾಗಿವೆ

ಮಾದರಿಗಳು ಮುಖ್ಯವಾಗಿವೆ ಮೂರು ಆಯಾಮಗಳನ್ನು ಹೊಂದಿದೆ ಅವುಗಳೆಂದರೆ

- ದಪ್ಪ ,
- ಆಗಲ ,
- ಎತ್ತರ.

JSS CAREER ACADEMY

**ಮಾದರಿ ಎಂದರೆ :-** ಒಂದು ವಾಸ್ತವ ವಸ್ತುವನ್ನು ಪ್ರತಿನಿದಿಸುವ ಸ್ವತಃ ನಿರ್ಮಿಸಿದ ಚಿತ್ರವೇ ಮಾದರಿ.ಇದು ವಾಸ್ತವ ವಸ್ತುವಿನ ಒಂದು ಸಣ್ಣ ರೂಪದ್ದಾಗಿರುತ್ತದೆ,ಆದರೆ ನೈಜ ವಸ್ತುವನ್ನು ಹೋಲುವುದು.

ಉದಾ :- ತಾಜ್ ಮಹಲ್, ಸ್ಮಾರಕ,ಶಾಸನಗಳು,ನಾಣ್ಯಗಳ ಮುಂತಾದ ಮಾದರಿಗಳನ್ನು ತಯಾರಿಸಿ ವಿದ್ಯಾರ್ಥಿಗಳ ಮುಂದೆ ಪ್ರದರ್ಶನ ಮಾಡಬಹುದು.

**ಮಾದರಿಯ ಲಕ್ಷಣಗಳು**

- ಮಾದರಿ ನೈಜ ವಸ್ತುವಿನ ಪ್ರತಿಬಿಂಬದಂತಿರಬೇಕು. ಅದರ ಗಾತ್ರ, ಆಕಾರ, ಪ್ರಮಾಣಗಳು ಸೂಕ್ತವಾಗಿರಬೇಕು ಮತ್ತು ಸರಿಯಾಗಿರಬೇಕು.
- ಮಾದರಿಗಳು ಆಕರ್ಷಕ ಆಗಿರಬೇಕು ಅವು ವಿದ್ಯಾರ್ಥಿಯ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಬೇಕು.
- ಮಾದರಿಗಳು ಸರಳವಾಗಿರಬೇಕು
- ಮಾದರಿಗಳು ತ್ರಿ ಆಯಾಮ ಹೊಂದಿರಬೇಕು.
- ಮಾದರಿಗಳು ಮಾಡಿ ಕಲಿ ತತ್ವವನ್ನು ಅನುಸರಿಸಬೇಕು.
- ಉಪಯೋಗಗಳು
- ಐತಿಹಾಸಿಕ ವಿಷಯಗಳಿಗೆ ಜೀವಂತಿಕೆಯನ್ನು ನೀಡುವುದು.
- ವಿದ್ಯಾರ್ಥಿಗಳಲ್ಲಿ ಕಲಿಕೆ ಗಟ್ಟಿಯಾಗುವುದು
- ಮಾಲಾಧಾರ ಬೋಧನೆಯಲ್ಲಿ ಇವು ಶಿಕ್ಷಕನಿಗೆ ತುಂಭಾ ಸಹಾಯಕ ವಾಗಿವೆ.
- ಕಲಿಕೆ ಪ್ರೇರಣೆ ನೀಡುವುವು
- ಮಾದರಿಗಳು ವಿಷಯವನ್ನು ನೈಜರೂಪಗೊಳಿಸಿವುದು.

**ಗೋಳಗಳು**

- ಭೂಮಿಯು ಗೋಳಾಕಾರ ರಚನೆಯುನ್ನು ಮೂಡಿಸುವ  ಅತಿ ಚಿಕ್ಕ ಅಳತೆಯ ಪಟ್ಟಿಯ ಮೇಲೆ ಪೃಥ್ವಿಯ ಮೂರು ಆಯಾಮಗಳನ್ನು ಪ್ರತಿನಿದಿಸುವುದು.
- ಇದು ಭೂಪಟ ಹಾಗೂ ಗೊಳಗಳ ಮಿಶ್ರಣವಾಗಿದೆ.
- ಲಕ್ಷಣಗಳು /ಉಪಯೋಗ
- ಗೋಳವು ಭೂಮಿಯ ವಾಸ್ತವ ಆಕಾರವನ್ನು ಪ್ರತಿನಿದಿಸುವಂತೆ ನಿಖರವಾಗಿ ತಯಾರಿಸಬೇಕು.

JSS CAREER ACADEMY

- ಅಕ್ಷಾಂಶ ಹಾಗೂ ರೇಖಾಂಶಗಳನ್ನು ಸರಿಯಾದ ರೀತಿಯಲ್ಲಿ ನಿರೂಪಿಸಬೇಕು.
- ಗೋಳವು ಸುಲಭವಾಗಿ ತಿರುಗಿಸುವಂತೆ ಇರಬೇಕು.
- ಗೋಳವು ಸೂಕ್ತವಾದ ಗಾತ್ರದಿಂದ ಕೂಡಿದ್ದು,ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಭವಾಗಿ ತೆಗೆದುಕೊಂಡು ಹೊಗಲು ಅನುಕೂಲ ಇರಬೇಕು

**ಪಠ್ಯಕ್ರಮ**

- 1966 ಶಿಕ್ಷಣ ಆಯೋಗದ ಸಲಹೆಯನ್ನು ಗಮನದಲ್ಲಿರಿಸಿಕೊಂಡು ಫ್ರೌಢ ಶಾಲಾ ಹಂತದ ಮಕ್ಕಳಿಗೆ ಈ ವಿಷಯವನ್ನು ಸಾಮಾನ್ಯ ವಿಷಯವನ್ನಾಗಿ ಆಳವಡಿಸಲಾಯಿತು.
- ಶಾಲಾ ಪಠ್ಯಕ್ರಮ ರಚನೆ ಮಾಡಲು ಈ ಅಂಶಗಳನ್ನು ಗುರುತು ಮಾಡಲಾಗಿದೆ.
- ಭಾರತದ ಸ್ವಾತಂತ್ರ್ಯ ಚಳವಳಿಯ ಇತಿಹಾಸ
- ಸಂವಿಧಾನ ಹಾಗೂ ಅದರ ಲಕ್ಷಣಗಳು.
- ರಾಷ್ಟ್ರೀಯ ವ್ಯಕ್ತಿತ್ವ ಪೋಷಿಸಲು ಅಗತ್ಯವಿರುವ ವಿಷಯಗಳು.
- ಭಾರತದ ಸಾಂಸ್ಕೃತಿಕ ಪರಂಪರೆ
- ಸಮಾನತೆ ,ಪ್ರಜಾಪ್ರಭುತ್ವ, ಮತ್ತು ಸಮಾಜವಾದ

**ಸ್ತ್ರೀ ಪುರುಷರ ಸಮಾನತೆ**

- ಪರಿಸರ ಸಂರಕ್ಷಣೆ
- ಸಾಮಾಜಿಕ ಕಟ್ಟುಪಾಡುಗಳು
- ಚಿಕ್ಕ ಕುಟುಂಬದ ಪರಿಪಾಲನೆಯ ತತ್ವಗಳು
- ವೈಜ್ಞಾನಿಕ ಮನೋಭಾವದ ಬೆಳವಣಿಗೆ
- ಈ ಮೇಲಿನ ಎಲ್ಲಾ ಅಂಶಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿಬೇಕೆಂದು 1986 ಶಿಕ್ಷಣ ಆಯೋಗ ತಿಳಿಸಿದೆ.

**ಅನುಭವ ಕೇಂದ್ರೀತ ಪಠ್ಯವಸ್ತು**

- ಇದರ ರಚನೆಯು ಆಧುನಿಕ ಪದ್ಧತಿಯಾಗಿದೆ.
- ಇದರ ಪ್ರಕಾರ ಅನುಭವೇ ನಿಜವಾದ ಕಲಿಕೆ ಆಗಿದೆ.
- ಅನುಭವ ಎನ್ನುವುದು ಚಟುವಟಿಕೆ ಉತ್ಪನ್ನವಾದರೆ ಚಟುವಟಿಕೆ ಪ್ರಕ್ರಿಯಾಗಿದೆ.

JSS CAREER ACADEMY

- ಮಹಾತ್ಮ ಗಾಂಧೀಜಿ ಅವರ ಮೂಲಶಿಕ್ಷಣ ಪಠ್ಯವಸ್ತುವು ಅನುಭವ ಕೇಂದ್ರೀತ ಚಟುವಟಿಕೆಗಳ ಆಧಾರದ ಮೇಲೆ ರೂಪಗೊಂಡಿದೆ.
- ಸಾಮಾಜಿಕ ಸನ್ನಿವೇಶದಲ್ಲಿ ವಿದ್ಯಾರ್ಥಿಗಳಿಗೆ ಅನುಭವ ದೊರೆಯುವುದು ಈ ಕಲಿಕೆ ಲಾಭ ಆಗಿದೆ.
- ಉದ್ದೇಶ :- ವಿದ್ಯಾರ್ಥಿಯನ್ನು ಸಾಮಾಜೀಕರಣಗೊಳಿಸುವುದು.

**ಪ್ರಾಮುಖ್ಯತೆ :-**

- ಅನುಭವ ಕೇಂದ್ರೀತ ಪಠ್ಯಕ್ರಮದಿಂದ ವಿದ್ಯಾರ್ಥಿಗಳಿಗೆ ಸೃಜನಾತ್ಮಕ ವ್ಯಕ್ತಿತ್ವ ಬೆಳವಣಿಗೆಗೆ ಪೂರಕವಾಗಿದೆ.
- ವಿದ್ಯಾರ್ಥಿಗಳಲ್ಲಿ ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡುವುದು.
- ವಿದ್ಯಾರ್ಥಿಗಳಿಗೆ ಅನುಭವದ ಮೂಲಕ ಜ್ಞಾನವೃದ್ಧಿಯಾಗುವುದು.
- ಸಮಾಜದ ಕಾರ್ಯಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳವರು.
- ವಿದ್ಯಾರ್ಥಿಗಳ ಸಮಗ್ರವಿಕಾಸ ಸಾಧ್ಯೆ.
- ಮೌಲ್ಯಾಧಾರಿತ ಪಠ್ಯಕ್ರಮ
- ಇದು ಆಧುನಿಕ ಪಠ್ಯಕ್ರಮ ರಚನಾ ಪದ್ಧತಿಯಾಗಿದೆ.

## ನೈತಿಕ ಮೌಲ್ಯ

- ಪ್ರಸ್ತುತ ನೈತಿಕ ಮೌಲ್ಯ ಕುಸಿಯುತ್ತಿರುವ ಇಂತಹ ಸಮಾಜದಲ್ಲಿ ಮೌಲ್ಯಾಧಾರಿತ ಪಠ್ಯಕ್ರಮ ಅವಶ್ಯಕವಾಗಿದೆ.ಕಾರಣ ಮೌಲ್ಯಗಳನ್ನು ಸಮಾಜದಲ್ಲಿ ಪುನರ ಸ್ಥಾಪನೆ ಮಾಡಬೇಕು.

**ಡಾ ;- ವಿ ಕೃ ಗೋಕಾಕ್ ಅವರು ಸತ್ಯ,** ಸದಾಚಾರ,ಪ್ರೇಮ, ಶಾಂತಿ ಮತ್ತು ಅಹಿಂಸೆಯಂತಹ ಮೌಲ್ಯಗಳನ್ನು ನಮ್ಮ ಪಠ್ಯಪುಸ್ತಕ ಒಳಗೊಂಡಿರಬೇಕು ಎಂದು ತಿಳಿಸಿದ್ದಾರೆ.

- ಮೌಲ್ಯಗಳೆಂದರೆ ಮನುಷ್ಯನ ಜೀವನದ ಆದರ್ಶಗಳು ಸಂದಿಗ್ದ ಸಮಯವನ್ನು ಎದರಿಸಲು ಮೌಲ್ಯಗಳ ಅರಿವು ಅತ್ಯಾವಶ್ಯಕ.

**ಪ್ರಾಮುಖ್ಯತೆ**

- ಸಮಾಜದಲ್ಲಿ ಮೌಲ್ಯಗಳ ಬೆಳವಣಿಗೆಗೆ ಸಹಾಯಕ ಆಗುವುದು.

JS CAREER ACADEMY

- ಮೌಲ್ಯಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆ ಮಾಡುವುದರಿಂದ ಭವಿಷ್ಯದಲ್ಲಿ ಉತಮ ಸಮಾಜ ನಿರ್ಮಾಣ ಮಾಡಬಹುದು.
- ವಿದ್ಯಾರ್ಥಿಗಳಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವುದರೊಂದಿಗೆ ಉತ್ತಮ ಪ್ರಜೆಗಳನ್ನು ನಿರ್ಮಾಣ ಮಾಡಬಹುದು.
- ವಿದ್ಯಾರ್ಥಿಯಲ್ಲಿ ಮೌಲ್ಯಗಳಿಂದ ಮಾನಸಿಕ ಕ್ಷೋಬೆ ದೂರಮಾಡಿ ಅವರಲ್ಲಿ ಶಾಂತಿ ಹಾಗೂ ನಮ್ಮದಿ ಉಂಟು ಮಾಡಬಹುದು.
- ವಿದ್ಯಾರ್ಥಿಯಲ್ಲಿ ಆತ್ಮ ಸ್ಥೈರ್ಯ ಬರುವುದು.
- ಪಠ್ಯಕ್ರಮ ರಚನೆ ಮಾಡುವಾಗ ಅನುಸರಿಸುವ ಮಾರ್ಗ ಹಾಗೂ ಉಪಕ್ರಮಗಳು
- ಅನುರೇಖ ಕ್ರಮ
- ಏಕಕೇಂದ್ರೀಯ ಅಥವಾ ಸರುಳಿ ಕ್ರಮ
- ಗೋಪುರಾಕೃತಿ ಉಪಕ್ರಮ
- ಅಂತರ್ಗತ ಪಠ್ಯಕ್ರಮ ವಿಧಾನ
- ರಚನಾತ್ಮಕ ಪಠ್ಯಕ್ರಮ ವಿಧಾನ

**ಅನುರೇಖ ಪಠ್ಯಕ್ರಮ :-**

- ಶಿಕ್ಷಣ ತಜ್ಞರು ಸಲಹೆ ಮೇರೆಗೆ ಪಠ್ಯಕ್ರಮದಲ್ಲಿ ಮುಖ್ಯ ಘಟಕಗಳನ್ನು ರಚನೆ ಮಾಡಲಾಗುತ್ತದೆ.
- ಮಖ್ಯ ಘಟಕಗಳಲ್ಲಿರುವ ವಿಷಯವನ್ನು ವಿಷಯದ ಆಧಾರದ ಮೇಲೆ ಅರ್ಥಪೂರ್ಣವಾಗಿ ಉಪಘಟಕಗಳನ್ನಾಗಿ ಉತ್ತಮ ಶಿರೋನಾಮೇ ಅಡಿಯಲ್ಲಿ ವ್ಯವಸ್ಥೆ ಮಾಡಲಾಗುತ್ತದೆ.
- ಹಂತದಲ್ಲಿ ವಿದ್ಯಾರ್ಥಿಗಳಿಗೆ ಹೊಸ ಹೊಸ ವಿಷಯಗಳನ್ನು ಕಲಿಸುತ್ತಾ ಮುಂದವರಿವುದು.
- ವಿಷಯವನ್ನು ಪ್ರಾಥಮಿಕ ಹಂತದಿಂದ ಉನ್ನತಹಂತದವರೆಗೆ ವಿಷಯವನ್ನು ವಿಂಗಡಿಸಲಾಗಿದೆ.
- ಇದು ತಾರ್ಕಿಕ್ ವಾಗಿ ಉತ್ತಮವಾಗಿದೆ.
- ಏಕಕೇಂದ್ರೀಯ ಮತ್ತು ಸುರಳಿ ಕ್ರಮ
- ಈ ಮೇಲಿನ ಎರಡು ಪದಗಳ ಸಮನಾದ ಅರ್ಥಗಳನ್ನು ಹೊಂದಿವೆ.

JSS CAREER ACADEMY

➢ ಈ ಹಂತದ ಪಠ್ಯಪುಸ್ತಕದ ರಚನೆಯಲ್ಲಿ ಒಂದು ದರ್ಜೆಯಿಂದ ಮತ್ತೊಂದು ದರ್ಜೆಯವರೆಗೆ ,ಒಂದು ಹಂತದಿಂದ ಇನ್ನೊಂದು ಹಂತಕ್ಕೆ ವಿಷಯಗಳನ್ನು ಪುನಃ ಪುನಃ ಹೆಚ್ಚು ವಿವರಗಳು ಇರುವಂತೆ ಮಾಡಲಾಗುತ್ತದೆ. ಅಂದರೆ ವಿದ್ಯಾರ್ಥಿಗಳು ತರಗತಿಯಿಂದ ತರಗತಿಗೆ ವರ್ಗಾವಣೆಯಾದಾಗ ಹೆಚ್ಚಿನ ಜ್ಞಾನವನ್ನು ವಿಷಯದ ಕುರಿತು ಪಡೆಯುದನ್ನು

➢ ಇಲ್ಲಿ.ಕಲಿಯುವ,ವಯಸ್ಸು,ಆಸಕ್ತಿ,ಮನೋಭಾವ,ಬುದ್ದಿಶಕ್ತಿ,ಆಲೋಚನೆ ಶಕ್ತಿ, ಅಭಿವ್ಯಕ್ತಿ ಮುಂತಾದವುಗಳನ್ನು ಅನುಸರಿಸಿ ವಿಷಯವನ್ನು ಹೊಂದಾಣಿಕೆ ಮಾಡಲಾಗುತ್ತದೆ.

➢ ಪ್ರಸ್ತುತ ನಮ್ಮ ಪಠ್ಯಕ್ರಮವು ಇದೇ ವ್ಯವಸ್ಥೆಯಲ್ಲಿದೆ.

➢ ಗೋಪುಕೃತಿಯ ಉಪಕ್ರಮ

➢ ಈ ರೀತಿಯ ಪಠ್ಯಕ್ರಮ ವ್ಯವಸ್ಥೆಯಲ್ಲಿ ವಿಷಯ ವಸ್ತುವನ್ನು ಆರಂಭದ ಹಂತದಿಂದ ಒಂದು ನಿರ್ದಿಷ್ಟ ಹಂತದವರೆಗೆ ಲಭ್ಯವಿರುವ ಎಲ್ಲಾ ವಿಷಯವನ್ನು ಸುಲಭದಿಂದ ಕಠಿಣದ ಕಡೆಗೆ ಜೋಡಿಸಲಾಗುತ್ತದೆ.

➢ ಈ ಪಠ್ಯಕ್ರಮದ ವ್ಯವಸ್ಥೆಯಿಂದ ಪ್ರೌಢ ಶಾಲಾ ಹಂತದ ಮುಕ್ತಾಯದ ನಂತರ ವಿದ್ಯಾರ್ಥಿಗಳಿಗೆ ವಿಷಯ ಆಯ್ಕೆ ಮಾಡುವಲ್ಲಿ ತುಂಬಾ ಸಹಾಯಕ ಆಗುವುದು.

**ಅಂತರ್ಗತವಾದ ವಿಧಾನ**

➢ ಕ್ರಿಯಾತ್ಮಕ ತಜ್ಞರ ಸಲಹೆ ಮೇರೆಗೆ ಜಾರಿಗೆ ತರಲಾಗಿದೆ.

➢ ಅಂತರ್ಗತ ಪಠ್ಯಕ್ರಮವು ಒಂದು ಸರಳ ವಿಧಾನವಾಗಿದ್ದು,ಇದು ವಿದ್ಯಾರ್ಥಿಗಳಿಗೆ ಕೌಶಲ ಆಧಾರಿತ ಅಥವಾ ಜ್ಞಾನ ಆಧಾರಿತ ಪಠ್ಯವಸ್ತುವನ್ನು ಸೃಷ್ಟಿಸಲು ಆಧ್ಯತೆ ನೀಡುವುದು.

➢ ಇಲ್ಲಿ ಪಠ್ಯಕ್ರಮ ರಚಿಸುವಾಗ ಸಹಸಂಬಂಧಕ್ಕೆ ಹೆಚ್ಚಿನ ಒತ್ತು ನೀಡುವುದು.

➢ ಇದು ಒಂದು ವಿಷಯವನ್ನು ಅಧ್ಯಯನ ಮಾಡುವುದರೊಂದಿಗೆ ಅದರ ಉಪಶಾಖೆಗಳನ್ನು ಅಧ್ಯಯನ ಮಾಡುವುದು.

➢ ಅಂತರ್ಗತ ಪಠ್ಯಕ್ರಮವು ಬಹುಶಾಸ್ತ್ರೀಯ ಅಂಶಗಳಿಗೆ ಒತ್ತನ್ನು ನೀಡುವುದು.

➢ ಉದಾ :- ಸಮಾಜ ವಿಜ್ಞಾನ ವಿಷಯದ ಅಡಿಯಲ್ಲಿ ಇತಿಹಾಸ ,ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ವ್ಯವಹಾರ ಇತ್ಯಾದಿ. ಇತ್ಯಾದಿ ಉಪಶಾಖೆಗಳನ್ನು ಅಧ್ಯಯನ ಮಾಡುವುದು.

**ರಚನಾತ್ಮಕ ವಿಧಾನ**

JSS CAREER ACADEMY

➢ ರಚನಾತ್ಮಕ ತಜ್ಞರ ಪ್ರಕಾರ ಕಲಿಕಾರ್ಥಿಗಳು ತಮ್ಮ ನೈಜ ಅನುಭವದ ಮೂಲಕ ಕಲಿಯುವರು ಎಂದು ಹೇಳಿದ್ದಾರೆ.

➢ ಇಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕೆ ಅನುಗುಣವಾಗಿ ಪಠ್ಯಕ್ರಮ ಜೋಡಣೆ ಮಾಡಿ ಜೊತೆಗೆ ಕಲಿಕಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.

## ಪಾಠ ಯೋಜನೆ

➢ ಪಾಠ ಯೋಜನೆಯ ಬಗ್ಗೆ ಜಿಜ್ಞಾಸೆ ನೀಡಿದ ಮೊದಲ ವ್ಯಕ್ತಿ :- ಹರ್ಬಾರ್ಟ್ ಸ್ಪೇನ್ಸರ್

➢ ತನ್ನ ಯೋಜನೆಯಲ್ಲಿ ಪಂಚಸೋಪಾನಗಳನ್ನು ತಿಳಿಸಿದ್ದಾನೆ

### ಪಾಠ ಯೋಜನೆಯ ಅರ್ಥ :-

➢ ಶಿಕ್ಷಕನು ತರಗತಿ ಪ್ರವೇಶಿಸುವುದಕ್ಕಿಂತ ಮುಂಚೆ ಬೋಧನಾ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಪೂರ್ವನಿರ್ಧರಿತ ಶಿಕ್ಷಕ ಹಾಕಿಕೊಳ್ಳುವ ಯೋಜನೆಯನ್ನು ಪಾಠ ಯೋಜನೆ ಎಂದು ಕರೆಯಲಾಗುತ್ತದೆ.

➢ ಪಾಠ ಯೋಜನೆಯು ಕ್ರಿಯಾತ್ಮಕ ಯೋಜನೆಯಾಗಿದ್ದು ಅದರಲ್ಲಿ ಶಿಕ್ಷಕನು ಕಲಿಕಾ ತತ್ವಗಳು ,ವಿದ್ಯಾರ್ಥಿಗಳಿಗೆ ಬೇಕಾದ ಅವಶ್ಯಕ ಅಂಶಗಳು, ಬೋಧನಾ ಉದ್ದೇಶಗಳು, ವಿವಿಧ ಪದ್ಧತಿಗಳನ್ನು ಒಳಗೊಂಡಿದೆ.

### ವ್ಯಾಖ್ಯೆಗಳು:-

➢ **ಲೆಸ್ಟರ್ ಬಿ ಸ್ಯಾಂಡರ್ಸ್ :-** ಪಾಠ ಯೋಜನೆಯು ಬೋಧನೆಯ ಕ್ರಿಯಾತ್ಮಕ ಪೂರ್ವ ಯೋಜನೆ ಆಗಿದೆ.

**ಅರ್ಥ :** ನಿರ್ಧಿಷ್ಟ ಅವಧಿಯಲ್ಲಿ ನಿರ್ಧಿಷ್ಟ ಸಾಧನಗಳ ಮುಖಾಂತರ ನಿರ್ಧಿಷ್ಟ ಗುರಿಯನ್ನು ಈಡೇರಿಸುವುದನ್ನು ಒಳಗೊಂಡ ಚಟುವಟಿಕೆಗಳ ಯೋಜನೆ ಪಾಠ ಯೋಜನೆ

### ಪ್ರಾಮುಖ್ಯತೆ:-

➢ ಪಾಠ ಯೋಜನೆಯು ಯಶಸ್ವಿ ಬೋಧನೆಗೆ ಮಾರ್ಗದರ್ಶಿ ಆಗಿದೆ.

➢ ವಿಷಯವನ್ನು ನಿಗಿಧಿತ ಅವಧಿಯಲ್ಲಿ ಪರಿಣಾಮಕಾರಿಯಾಗಿ ಬೋಧನೆ ಮಾಡಬಹುದು.

➢ ಯೋಜನೆಯಿಂದ ಆಸಕ್ತಿ ,ಅಭೀಪ್ರೇರಣೆ ಮೂಡುವುದು.

➢ ಈ ಮೂಲಕ ಉತ್ತಮ ಪ್ರಶ್ನೆ, ಸಮಸ್ಯೆ, ಮತ್ತು ಉತ್ತರಗಳನ್ನು ಅಳವಡಿಸಿಕೊಳ್ಳವುದು.

➢ ದಿನನಿತ್ಯ ಬೋಧನೆಗೆ ನಿರ್ಧಿಷ್ಟ ಉದ್ದೇಶಗಳನ್ನು ನಿಗದಿಪಡಿಸುವುದು.

JSS CAREER ACADEMY

- ಶಿಕ್ಷಕರಿಗೆ ಬೋಧನೆಯಲ್ಲಿ ಆತ್ಮ ವಿಶ್ವಾಸ ಮೂಡಿಸುವುದು.
- ಉತ್ತಮ ಪಾಠ ಯೋಜನೆಯ ಲಕ್ಷಣಗಳು
- ಪಾಠ ಯೋಜನೆಯು ಕಲಿಯುವ ಮಕ್ಕಳ ವಯಸ್ಸು, ಆಸಕ್ತಿ, ಮತ್ತು ಸಾಮರ್ಥ್ಯವನ್ನು ತಿಳಿಯುವುದು.
- ಪಾಠಯೋಜನೆಯನ್ನು ನಿರ್ಧಿಷ್ಟ ಗುರಿ ಹಾಗೂ ಉದ್ದೇಶಗಳನ್ನು ಗಮದಲ್ಲಿಟ್ಟುಕೊಂಡು ತಯಾರಿಸಬೇಕು.
- ಪಾಠಯೋಜನೆಯು ನಿರ್ಧಿಷ್ಟ ಬೋಧನಾ ತಂತ್ರ ಹಾಗೂ ಚಟುವಟಿಕೆಗಳನ್ನು ಹೊಂದಿರಬೇಕು.
- ಪಾಠಯೋಜನೆಯಲ್ಲಿ ಸಹಸಂಬಂಧಕ್ಕೆ ಅವಕಾಶ ಮಾಡಿಕೊಡಬೇಕು.
- ಪಾಠೋಪಕರಣಕ್ಕೆ ಅವಕಾಶ ಮಾಡಿಕೊಡಬೇಕು.
- ಕಲಿಕೆ ಅನುಭವ ಹಾಗೂ ಮೌಲ್ಯಮಾಪನಕ್ಕೆ ಅವಕಾಶ ಇರಬೇಕು.
- ಪುನರ್ವರ್ತನೆ, ಕಪ್ಪು ಹಲಗೆ ಮತ್ತು ಗೃಹ ಕಾರ್ಯಕ್ಕೆ ಅವಕಾಶ ಇರಬೇಕು.
- **5 E** ಮಾದರಿ ಪಾಠ ಯೋಜನೆ ಹಂತಗಳು
- ಈ ಮಾದರಿಯನ್ನು ಬೋಧನಾ ಕಲಿಕಾ ಚಕ್ರವೆಂತಲೂ ಕರೆಯಲಾಗುತ್ತದೆ.
- ಪಿಯಾಜೆ ಅವರ ಕಾರ್ಯವನ್ನು ಅಧರಿಸಿ 1960 ರಂದು  ರಾಬರ್ಟ್ ಕಾರ್ಪ್ಲಸ್ ಅವರು ಈ ಬೋಧನಾ ಕಲಿಕಾ ಮಾದರಿಯನ್ನು ಪರಿಚಯ ಮಾಡಿದರು
- ಈ ಮಾದರಿಯ ಪಾಠಯೋಜನೆಯು ರಚನಾವಾದ ಆಧಾರದ ಮೇಲೆ ರೂಪಗೊಂಡಿದೆ.

**5 E ಮಾದರಿಯ ವಿನ್ಯಾಸ**

- **E -ENGAGE (**ತೊಡಗಿಸಿಕೊಳ್ಳವುದು) (ಅವದಿ- 5-15 ನಿಮಿಷ)
- **E :- EXPLORATION (**ಅನ್ವೇಷಣೆ)
- (ಅವಧಿ:- 10 20 ನಿಮಿಷಗಳು)
- **E :- EXPLANATION (**ವ್ಯಕ್ತಪಡಿಸುವುದು)
- (ಅವಧಿ :- 15 ರಿಂದ 25 ನಿಮಿಷ )
- **E:- ELBA RATION (** ಅನ್ವಯಿಸುವುದು)
- ಅವಧಿ :- 10 ರಿಂದ 30 ನಿಮಿಷ ಸಮಯ ನೀಡಬಹುದು
- **E :- EVALUATION (**ಮೌಲ್ಯಮಾಪನ)

JSS CAREER ACADEMY

- ಈ ಹಂತಕ್ಕೆ 5 ನಿಮಿಷಬೇಕು.

## ಘಟಕ ಯೋಜನೆ

ಘಟಕ ಯೋಜನೆ ಅರ್ಥ : ಘಟಕವೆಂದರೆ ನಿರ್ದಿಷ್ಟ ಅವಧಿಯಲ್ಲಿ ಪರಿಣಾಮಕಾರಿಯಾಗಿ ಬೋಧಿಸಲು ಬೇಕಾಗಿರುವ ಎಲ್ಲಾ ಸಾಮಾಗ್ರಿಗಳನ್ನು ಚಟುವಟಿಕೆಗಳನ್ನು ಸನ್ನಿವೇಶಗಳನ್ನು, ಬೋಧನಾ ವಿಧಾನ ಹಾಗೂ ತಂತ್ರಗಳನ್ನು ಒಳಗೊಂಡಿರುವುದು.

### ಸಂಪನ್ಮೂಲಗಳ ಘಟಕ

- ಇದು ಬೋಧನಾ ಕಾರ್ಯದಲ್ಲಿ ವ್ಯಾಪಕವಾದ ಕಾರ್ಯಯೋಜನೆ ಆಗಿದೆ.
- ಸಂಪನ್ಮೂಲ ಘಟಕವು ಶಿಕ್ಷಕರ ಜ್ಞಾನ ಹಾಗೂ ಬೋಧನಾ ಸಾಮರ್ಥ್ಯದವನ್ನು ಉತ್ತಮಗೊಳಿಸಲು ಸಂಪೂರ್ಣ ಘಟಕಕ್ಕೆ ವ್ಯಾಪಕವಾಗಿ ಅಂದರೆ ಕಲಿಕಾ ಚಟುವಟಿಕೆಯ ಸುದಿರ್ಘವಾದ ಸರ್ವಕಾಲಿಕ ಯೋಜನೆ ಆಗಿದೆ.

### ಸಂಪನ್ಮೂಲ ಘಟಕ ಯೋಜನೆ ಮಹತ್ವ

- ಬೋಧನೆಯ ಯಶಸ್ವಿಗೆ ಬೇಕಾದ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು.
- ಶಿಕ್ಷಕರು ಪಾಠವನ್ನು ಹೇಗೆ ವ್ಯವಸ್ಥೆವಾಗಿ ಬೋದಿಸಬೇಕುವೆಂದು ಮಾರ್ಗದರ್ಶನ ಮಾಡುವುದು.
- ವಿದ್ಯಾರ್ಥಿಯಲ್ಲಿ ಸಮಗ್ರ ಜ್ಞಾನ ಬೆಳೆಯುವುದು.
- ಕ್ರಿಯಾತ್ಮಕ ಹಾಗೂ ರಚನಾತ್ಮಕ ವಾಗಿ ಜೋಡಿಸಲ್ಪಟ್ಟ ಪರಿಕಲ್ಪನೆಯ ಸ್ಪಷ್ಟಸ್ವರೂಪ ಆಗಿದೆ.
- ಕಲಿಕಾ ಚಟುವಟಿಕೆಗಳ ಭಂಡಾರವಾಗಿದೆ.

### ಸಂಪನ್ಮೂಲ ಘಟಕ ಯೋಜನೆಯ ಹಂತಗಳು

- ಘಟಕದ ಶಿರೋನಾಮೆ
- ಘಟಕದ ಮಹತ್ವ ಹಾಗೂ ವ್ಯಾಪ್ತಿ
- ಪ್ರಧಾನ ಪ್ರಾಕಲ್ಪನೆ ಮತ್ತು ಸಾಮನ್ಯೀಕರಣ
- ಬೋಧನಾ ಉದ್ದೇಶಗಳು
- ಪಾಠೋಪಕರಣಗಳು
- ವಿಷಯ ವಿಶ್ಲೇಷಣೆ
- ಕಲಿಕಾ ಚಟುವಟಿಕೆಗಳು

JS CAREER ACADEMY

- ಮೌಲ್ಯಮಾಪನ (ಘಟಕ ಪರೀಕ್ಷೆ)
- ಸೂಚಿತ ಚಟುವಟಿಕೆ
- ಪರಾಮರ್ಶನ ಗ್ರಂಥಗಳು
- ಮೌಲ್ಯಮಾಪನವು
- ಇದೊಂದು ನಿರಂತರವಾದ ಪ್ರಕ್ರಿಯಾಗಿದೆ.

## ಮೌಲ್ಯಮಾಪನ

ವ್ಯಾಖ್ಯೆ:-

**ಕ್ವಿಲ್ವಿನಾ ಮತ್ತು ಹನ್ನಾ** : ವಿದ್ಯಾರ್ಥಿಗಳ ಶಾಲಾ ಪ್ರಗತಿಯ ಮೂಲಕ ಅವರ ವರ್ತನೆಯಲ್ಲಿ ಪರಿವರ್ತನೆ ಕುರಿತಾಗಿ ಸಾಕ್ಷಿಗಳನ್ನು ಸಂಗ್ರಹಿಸುವುದು ಮತ್ತು ಅವುಗಳನ್ನು ಅರ್ಥೈಸುವ ವಿಷಯ ಪ್ರಕ್ರಿಯೆಯೇ ಮೌಲ್ಯಮಾಪನ ಎಂದು ಹೇಳಿದವರು.

ಪರಿಕಲ್ಪನೆ

**ಮೌಲ್ಯ ಎಂದರೆ :- ಬೆಲೆ ನಿರ್ಧರಿಸುವುದು.**

**ಮಾಪನ ಎಂದರೆ :- ಒಂದು ವಸ್ತುವಿನ** ಗಾತ್ರವನ್ನು ಅಳತೆ ಮಾಡುವುದು..

- ಈ ಪದವನ್ನು ಮೊದಲಬಾರಿಗೆ ಬಳಕೆ ಮಾಡಿದವರು ;- ರೆಬನ್ ಸನ್
- ರೆಬನಸನ್ ಅವರು ಮೌಲ್ಯಮಾಪನದ ತ್ರಿಮುಖ ಸಂಬಂಧವನ್ನು ಗುರುತಿಸಿದರು.

ಮೌಲ್ಯಮಾಪನದ ತ್ರಿಮುಖ ಸಂಬಂಧ

- **ಉದ್ದೇಶಗಳು 2) ಅನುಭವ 3) ಮೌಲ್ಯಮಾಪನ**
- ಶಿಕ್ಷಣ ಕ್ಷೇತ್ರದಲ್ಲಿ ಹಾಕಿಕೊಂಡಿರುವ ಗುರಿ ಎಷ್ಟರ ಮಟ್ಟಿಗೆ ಸಾದಿಸಲ್ಪಟ್ಟಿವೇ ಎಂಬುದನ್ನು ನಿರ್ಣಯಿಸುವ ಕ್ರಮವೇ ಮೌಲ್ಯಮಾಪನ ಆಗಿದೆ.

ವ್ಯಾಖ್ಯೆ:-

- ವಿದ್ಯಾರ್ಥಿಯ ಜ್ಞಾನ, ತಿಳುವಳಿಕೆ, ಕೌಶಲ್ಯ, ಮತ್ತು ಅಭಿವ್ಯಕ್ತಿಯಲ್ಲಿ ಯಾವ ರೀತಿಯ ಬದಲಾವಣೆ ಆಗಿವೆ, ಎಂಬುದನ್ನು ಪ್ರಕಟಿಸುವುದೇ ಆಗಿದೆ..ಎಂದು ಹೇಳಿದರು :- ಆರ್ ಕೆ ಕಪೂರ್

ಪ್ರಯೋಜನೆಗಳು :-

- ಬೋಧನೆಯ ಮಟ್ಟವನ್ನು ಸುಧಾರಿಸುವುದು.
- ಉತ್ತಮ ಕಲಿಕೆ ಸಾಧ್ಯ

JSS CAREER ACADEMY

- ಪಠ್ಯಕ್ರಮ ಪುನರ ರಚನೆ ಮಾಡವುದಕ್ಕೆ ಸಹಾಯಕ.
- ವಿದ್ಯಾರ್ಥಿಯ ಸಾಧನೆಯನ್ನು ಅಳತೆ ಮಾಡುವುದು.
- ವಿದ್ಯಾರ್ಥಿಯ ದೌರ್ಬಲ್ಯ ಕಂಡು ಹಿಡಿಯುವುದು ಇತ್ಯಾದಿ

ಉತ್ತಮ ಪರೀಕ್ಷೆಯ ಲಕ್ಷಣಗಳು

ವ್ಯಾಪಕತೆ :-

- ಅಳೆಯುವ ಸಾಧನವು ವಿದ್ಯಾರ್ಥಿಗಳ ಸರ್ವಧರ್ಮಗಳನ್ನು ಅಳೆಬೇಕು ಅದನ್ನೇ ವ್ಯಾಪಕತೆ ಎನ್ನವರು
- ಉಪಯೋಗಾರ್ಹತೆ ಇರಬೇಕು
- ಸ್ಪಷ್ಟವಾಗಿರಬೇಕು
- ಶ್ರೇಣಿಯಾತ್ಮಕವಾಗಿರಬೇಕು
- ಅವು ಹೆಚ್ಚು ಅಂಕಗಳಿಸುವಂತೆ ಇರಬೇಕು
- ಪ್ರಾಯೋಗಿಕೆ ಇರಬೇಕು.
- ವಿಶ್ವಸನೀಯತೆ ಇರಬೇಕು
- ಸಮಂಜಸತೆ
- ವಸ್ತುನಿಷ್ಠ ಇರಬೇಕು

# ಸಹಕಾರ ಕಲಿಕೆ

ಇದೊಂದು ಬೋಧಾನ ವಿಧಾನವಾಗಿದ್ದು .ಈ ಬೋಧಾನ ವಿಧಾನವನ್ನು ಮೊದಲ ಬಾರಿಗೆ ರೋಜ್ ಮತ್ತು ಸ್ಮೀತ್ ಅವರು ಮೊದಲ ಬಾರಿಗೆ 1995 ರಲ್ಲಿ ಗುರುತಿಸಿದರು. ಇದರಲ್ಲಿ ವಿದ್ಯಾರ್ಥಿಗಳ ಶಿಕ್ಷಕನ/ರ ಮಾರ್ಗದರ್ಶನದೊಂದಿಗೆ ಗುಂಪುಗಳಲ್ಲಿ ಕೆಲಸ ಮಾಡಿ ಸಾಮಾನ್ಯ ಕಲಿಕೆಯ ಗುರಿಯನ್ನು ಸಾದಿಸಲು ಸಣ್ಣ ಸಣ್ಣ ಗುಂಪುಗಳಲ್ಲಿ ಕೆಲಸ ಮಾಡುತ್ತಾರೆ.ಇದು ವಿದ್ಯಾರ್ಥಿಗಳಿಗೆ ಕಲಿಯಲು ಮತ್ತು ಕಲಿಸಲು ಅನುಕೂಲ ಮಾಡಿಕೊಡುತ್ತದೆ.ಉದಾ;- ಮಂದ ವಿದ್ಯಾರ್ಥಿಗಳು ಪ್ರತಿಭಾವಂತ ಮಕ್ಕಳಿಂದ ಕಲಿಯಲು ಅನುಕೂಲ ಮಾಡಿಕೊಡುತ್ತೆದೆ.ಪ್ರತಿಯೊಬ್ಬನ ಯಶಸ್ಸು ಆ ಗುಂಪಿನ ಯಶಸ್ಸು ಅವಲಂಬಿಸಿರುವುದು.ಅಂದರೆ ವ್ಯಯಕ್ತಿಕ ಯಶಸ್ಸಿನ ಬದಲಾಗಿ ಗುಂಪಿನ ಯಶಸ್ಸಿನ ಮೇಲೆ ಕೇಂದ್ರಿಕರಿಸುವುದು.ಈ ಕಲಿಕೆಯನ್ನು ಪರಿಚಯ ಮಾಡಿದ ಶಿಕ್ಷಣ ತಜ್ಞೆ ಜಾನ್ ಡ್ಯೂಯಿ ಆಗಿದ್ದು.ಇದರ ಮುಖ್ಯ ಗುರಿ ಸಾಮಾಜಿಕ ಮತ್ತು ಶೈಕ್ಷಣಿಕೆ ಕಲಿಕೆಯ ಅನುಭವ ನೀಡುವುದು.

JSS CAREER ACADEMY

ಸಹಕಾರ ಕಲಿಕೆ ಎಂದರೇನು ?

ಒಂದು ಅಥವಾ ಎರಡುಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಕಲಿಕೆಯಲ್ಲಿ ಸಕ್ರಿಯವಾಗಿ ಪರಸ್ಪರ ತೊಡಗಿಕೊಂಡು ಕಲಿಕೆಯನ್ನು ವಿನಮಯ ಅಥವಾ ಹೊಸ ವಿಷಯವನ್ನು ತನ್ನಾದಿಗಿಸಿಕೊಳ್ಳುವ ಪ್ರಕ್ರಿಯ.

ಸಹಕಾರ ಕಲಿಕೆಯ ವಿಧಗಳು

1. ಔಪಚಾರಿಕ ಸಹಕಾರ ಕಲಿಕೆ
2. ಅನೌಪಚಾರಿಕ ಸಹಕಾರ ಕಲಿಕೆ

ಸಹಕಾರಿ ಕಲಿಕೆಯ ತಂತ್ರಗಳು :

ಡಿ ಡಬ್ಲ್ಯೂ ಜಾನಸನ್ ಮತ್ತು ಆರ್ ಟಿ ಜಾನಸನ ಅವರ ಪ್ರಕಾರ ಐದು ಮೂಲತಂತ್ರಗಳನ್ನು ಹೊಂದಿದೆ

1. ಧನಾತ್ಮಕ ಪರಸ್ಪತ ಆವಲಂಬನೆ
2. ವೈಯಕ್ತಿಕ ಮತ್ತು ಗುಂಪು ಹೊಣೆಗಾರಿಕೆ
3. ಸಣ್ಣ ಗುಂಪಿನ ಕೌಶಲ್ಯ
4. ಮುಖಾಮುಖಿ ಪರಸ್ಪರಾನುವರ್ತನೆ
5. ಗುಂಪು ಸಂಸ್ಕರಣೆ / ಪ್ರಕ್ರಿಯ

ಸಹಕಾರ ಕಲಿಕೆಯ ತಂತ್ರಗಳು

1. ಜೊತೆಗೂಡಿ ಕಲಿಕೆ ತಂತ್ರ
   - 
2. ಜಿಗಸಾ ಒಗಟು ತಂತ್ರ
3. ಚಿಂತಿಸು
4. ಗುಂಪು ತನಿಖೆ
5. ಮೂರು ಹಂತದ ಸಂದರ್ಶನ

JSS CAREER ACADEMY

ಸಹಕಾರ ಕಲಿಕೆಯ ಅನುಕೂಲಗಳು

1. ಇದು ವಿದ್ಯಾರ್ಥಿ ಕೇಂದ್ರಿತ ಬೋಧನಾ ವಿಧಾನ
2. ಎಲ್ಲಾ ವಿದ್ಯಾರ್ಥಿಗಳು ಸಮಾನವಾಗಿ ಭಾಗವಹಿಸುತ್ತಾರೆ .
3. ಏಕಾಲಿಕ ಸಂವಹನ ಇರುವುದು
4. ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥೀಗಳು ಸಕ್ರಿಯವಾಗಿ ತೊಡಡಗಿಕೊಳ್ಳುತ್ತಾರೆ.
5. ಇದು ವಿದ್ಯಾರ್ಥಿಯಲ್ಲಿ ಸ್ವಯಂ ಗೌರವ ನಿರ್ಮಿಸುವುದು
6. ವಿದ್ಯಾರ್ಥಿಯಲ್ಲಿ ಸಾಮಾಜಿಕ ಕೌಶಲುವನ್ನು ಅಭಿವೃದ್ಧಿ ಪಡಿಸುವುದು ಉದಾ ಹೊಂದಾಣಿಕೆ ಕೌಶಲ್ಯ
7. ವಿದ್ಯಾರ್ಥೀಗಳು ಮತ್ತು ಶಿಕ್ಷಕರು ಕಲಿಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದರಿಂದ ಉನ್ನತ ಮಟ್ಟದ ಕಲಿಕೆ ಉಂಟಾಗುವುದು
8. ಕಲಿಕೆಯ ಆತಂಕವನ್ನು ಹೊಗಲಾಡಿಸಿ ನೈಜ ಕಲಿಕಾ ವಾತವರಣ ಉಂಟು ಮಾಡುವುದು.
9. ವಿದ್ಯಾರ್ಥಿಯಲ್ಲಿ ಆತ್ಮ ವಿಶ್ವಾಸವನ್ನು ಹೆಚ್ಚಿಸುವುದು
10. ಕಲಿಕೆ ಆಸಕ್ತಿ ದಾಯಕ ಆಗುವುದು
11. ಕಲಿಕೆ ಮನೋಭಾವನ]ನೆಯನ್ನು ಬದಲಾವಣೆ ಮಾಡುವುದು
12. ಇದು ವಿದ್ಯಾರ್ತಿಯಲ್ಲಿ ನಾಯಕತ್ವ ಗುಣವನ್ನು ಬಲಪಡಿಸುವುದು
13. ಪ್ರಜಾಪ್ರಭುತ್ವವನ್ನು ಮೌಲ್ಯವನ್ನು ಪೋಷಣೆ ಮಾಡುವುದು
14. ವಿದ್ಯಾರ್ಥಿಗಳ ಆಲಿಸುವಿಕೆ / ಸಂವಹನ ಕೌಶಲ್ಯ ಮತ್ತು ಜ್ಞಾನ ಭಂಡಾರ ಹೆಚ್ಚಿಸುವುದು.

ಆನಾನಕೂಲಗಳು

1. ಎಲ್ಲಾ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವುದು ಅಸಂಭವ
2. ವಿದ್ಯಾರ್ಥಿಗಳ ಮೇಲೆ ಶಿಕ್ಷಕರ ನಿಯಂತ್ರಣ ಇಲ್ಲದಿರುವುದು ಆಗ ವಿದ್ಯಾರ್ಥಿಗಳು ಅನಪೇಕ್ಷಿತ/ ಕಲಿಕೇತರ ಕೆಲಸಗಳಲ್ಲಿ ತೊಡಗಬಹುದು.
3. ಸಮಯ ಸಾಕಷ್ಟು ವ್ಯಯವಾಗುವುದು
4. ಈ ವಿಧಾನವು ಮಂದ ಅಥವಾ ನಾಚಿಕೆ ಸ್ವಭಾವದ ಹಾಗೂ ಸೃಜನಾತ್ಮಕ ವಿದ್ಯಾರ್ಥಿಗಳಿಗೆ ಸರಿ ಹೊಂದಲಾರದು

JSS CAREER ACADEMY

5.

JSS CAREER ACADEMY

### ಅನುಗಮನ ಹಾಗೂ ನಿಗಮನ ಪದ್ಧತಿಗಳ ನಡುವಿನ ವ್ಯತ್ಯಾಸಗಳು

| ಅನುಗಮನ ಪದ್ಧತಿ | ನಿಗಮನ ಪದ್ಧತಿ |
|---|---|
| 1. ಇದು ಉದಾಹರಣೆಯಿಂದ ತತ್ತ್ವದೆಡೆಗೆ ನಿರ್ದಿಷ್ಟತೆಯಿಂದ ಸಾಮಾನ್ಯದೆಡೆಗೆ, ಗೊತ್ತಿದ್ದರಿಂದ ಗೊತ್ತಿಲ್ಲದೆಡೆಗೆ ಸಾಗುವ ವಿಧಾನವಾಗಿದೆ. | 1. ಇದು ನಿರ್ದಿಷ್ಟ ತತ್ತ್ವದಿಂದ ಉದಾಹರಣೆಯೆಡೆಗೆ ಸಾಮಾನ್ಯದಿಂದ ನಿರ್ದಿಷ್ಟತೆಯೆಡೆಗೆ ಗೊತ್ತಿಲ್ಲದೆಡೆಯಿಂದ ಗೊತ್ತಿದ್ದೆಡೆಗೆ ಸಾಗುವ ವಿಧಾನವಾಗಿದೆ. |
| 2. ಇದು ಮನೋವೈಜ್ಞಾನಿಕವಾಗಿ ಸುಭದ್ರವಾದದ್ದು | 2. ಇದು ಮನೋವೈಜ್ಞಾನಿಕವಾಗಿ ಅಭದ್ರವಾದದ್ದು |
| 3. ಇದು ಸ್ಮರಣಾಶಕ್ತಿಯನ್ನು ಉದ್ದೀಪನಗೊಳಿಸುವುದು. | 3. ಇದು ಸ್ಮರಣಾಶಕ್ತಿಯನ್ನು ಉದ್ದೀಪನಗೊಳಿಸುವುದಿಲ್ಲ. |
| 4. ಇದು ವಿದ್ಯಾರ್ಥಿಗಳಲ್ಲಿ ಸ್ವಂತಿಕೆ ಬೆಳೆಸುವುದು. | 4. ಇದು ವಿದ್ಯಾರ್ಥಿಗಳಲ್ಲಿ ಸ್ವಂತಿಕೆ ಬೆಳೆಸುವುದಿಲ್ಲ. |
| 5. ಸೃಜನಶೀಲತೆಯನ್ನು ಬೆಳೆಸುವುದು. | 5. ಅಷ್ಟೇನೂ ಸೃಜನಶೀಲತೆಯನ್ನು ಬೆಳೆಸು ವುದಿಲ್ಲ. |
| 6. ವಿದ್ಯಾರ್ಥಿಗಳನ್ನು ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಗಳಲ್ಲಿ ಚಟುವಟಿಕೆಯಿಂದಿರಲು ಸಹಾಯ ಮಾಡುವುದು. | 6. ಇದರಲ್ಲಿ ವಿದ್ಯಾರ್ಥಿಗಳು ಹೆಚ್ಚು ಚಟುವಟಿಕೆಯಿಂದಿರಲಾರರು. |
| 7. ಇದು ಪ್ರತ್ಯಕ್ಷ ಅನುಭವಗಳನ್ನು, ಮೂರ್ತ ಉದಾಹರಣೆಗಳನ್ನು ಒದಗಿಸುವುದು. | 7. ಇದು ಪ್ರತ್ಯಕ್ಷ ಅನುಭವಗಳನ್ನು ಮೂರ್ತ ಉದಾಹರಣೆಗಳನ್ನು ಒದಗಿಸಲಾರದು. |
| 8. ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧವನ್ನು ಹೆಚ್ಚಿಗೊಳಿಸುವುದು. | 8. ಶಿಕ್ಷಕ ವಿದ್ಯಾರ್ಥಿಗಳ ನಿಕಟ ಸಂಬಂಧ ಬೆಳೆಯಲಾರದು. |
| 9. ಇದರ ಗತಿ ನಿಧಾನವಾಗಿದೆ. | 9. ಇದು ತೀವ್ರಗತಿ ವಿಧಾನ. |

**ಪಾಠ ಯೋಜನೆ ಮತ್ತು ಘಟಕ ಯೋಜನೆಗಳ ನಡುವಿನ ವ್ಯತ್ಯಾಸ**

| ಪಾಠ ಯೋಜನೆ | ಘಟಕ ಯೋಜನೆ |
|---|---|
| 1) ಇದು ಬಿಡಿ ಬಿಡಿಯಾದ ಪಾಠಗಳನ್ನು ಒಳಗೊಂಡಿರುತ್ತದೆ. | 1) ಎರಡು ಅಥವಾ ಎರಡಕ್ಕಿಂತ ಹೆಚ್ಚು ಪಾಠಗಳನ್ನು ಒಳ-ಗೊಂಡಿರುತ್ತದೆ. |
| 2) ಇಲ್ಲಿ ವಿಷಯದ ನಿರಂತರತೆ ಇಲ್ಲ. | 2) ವಿಷಯದ ನಿರಂತರತೆ ಇರುತ್ತದೆ. ಯಾಕೆಂದರೆ ಸಹ ಉಪಘಟಕಗಳ ನಡುವೆ ಸಂಬಂಧ ಇರುತ್ತದೆ. |
| 3) ಇದು ತರಬೇತಿ ಹೊಂದುತ್ತಿರುವ ಶಿಕ್ಷಕರಿಗೆ ಸೂಕ್ತ, ಯಾಕೆಂದರೆ ಅದರಲ್ಲಿ ಪ್ರತಿಯೊಂದು ವಿವರವಾಗಿ ಬರೆಯಲ್ಪಟ್ಟಿರುತ್ತದೆ. | 3) ಘಟಕ ಯೋಜನೆಯು ಸೇವಾವಧಿಯಲ್ಲಿರುವ ಶಿಕ್ಷಕರಿಗೆ ಸೂಕ್ತ. |
| 4) ವಿಷಯದ ಅರೆ ಬರೆ ಜ್ಞಾನವನ್ನು ಒದಗಿಸುತ್ತದೆ. | 4) ವಿಷಯದ ಸಮಗ್ರ ಜ್ಞಾನವನ್ನು ಒದಗಿಸುತ್ತದೆ. |
| 5) ಪ್ರತಿಯೊಂದು ಬಿಡಿ ಪಾಠಕ್ಕೂ ಶಿಕ್ಷಕ ಪಾಠ ಯೋಜನೆ ತಯಾರಿಸಬೇಕು. | 5) ಇದರಲ್ಲಿ ಒಮ್ಮೆ ಮಾತ್ರ ಇಡೀ ಘಟಕ ಯೋಜನೆ ತಯಾರಿಸಬೇಕು. |
| 6) ಇದು ಶಿಕ್ಷಕರಿಗೆ ದೈಹಿಕ ಮತ್ತು ಮಾನಸಿಕ ಹೊರೆ ಹೇರುತ್ತದೆ. | 6) ಇದು ದೈಹಿಕ ಮತ್ತು ಮಾನಸಿಕ ಹೊರೆ ಹೇರುವುದಿಲ್ಲ. |
| 7) ಇದನ್ನು ತಯಾರಿಸಲು ಹೆಚ್ಚು ಸಮಯ ಅಪವ್ಯಯ ಆಗುವುದಿಲ್ಲ. | 7) ಘಟಕ ಯೋಜನೆ ತಯಾರಿಸಲು ಹೆಚ್ಚು ಸಮಯ ತೆಗೆದು ಕೊಳ್ಳುತ್ತದೆ. |
| 8) ಇದು ವೆಚ್ಚದಾಯಕ. | 8) ಇದು ಮಿತವ್ಯಯ. |

**ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳ ನಡುವಿನ ವ್ಯತ್ಯಾಸ :**

| ಪಠ್ಯ ಚಟುವಟಿಕೆ Curricular Activities | ಸಹಪಠ್ಯ ಚಟುವಟಿಕೆ Co-Curricular Activitses |
|---|---|
| 1. ಪಠ್ಯ ಚಟುವಟಿಕೆ ವಿಷಯ ಬೋಧನೆಗೆ ಮಾತ್ರ ಮಹತ್ವವನ್ನು ನೀಡುತ್ತವೆ. | 1. ಸಹಪಠ್ಯ ಚಟುವಟಿಕೆಗಳು ವಿಷಯ ಬೋಧನೆಯನ್ನು ಬಿಟ್ಟು ಶಾಲೆಯಲ್ಲಿ ಕೈಗೊಳ್ಳುವ ಎಲ್ಲ ಚಟುವಟಿಕೆಗಳಿಗೆ ಮಹತ್ವವನ್ನು ನೀಡುತ್ತವೆ. |
| 2. ಇವು ವಿಷಯ ಜ್ಞಾನವನ್ನು ವಿದ್ಯಾರ್ಥಿಗಳು ಗಳಿಸಿ ಕೊಳ್ಳಲು ಸಹಾಯ ಮಾಡುತ್ತವೆ. | 2. ಇವು ಶಾರೀರಿಕ ಹಾಗೂ ಮಾನಸಿಕ ಆರೋಗ್ಯ ಮತ್ತು ಕೆಲ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ. |
| 3. ಪಠ್ಯ ಚಟುವಟಿಕೆಯ ಪ್ರತಿ ಪುಸ್ತಕಗಳಿರುತ್ತವೆ. | 3. ಇವುಗಳಿಗೆ ಪಠ್ಯವಸ್ತುಗಳಿರುವುದಿಲ್ಲ. |
| 4. ಪಠ್ಯ ಚಟುವಟಿಕೆಗಳು ವರ್ಗದ ಕೋಣೆಯಲ್ಲಿ ಸಂಘಟಿಸಲ್ಪಡುತ್ತವೆ. | 4. ಇವುಗಳು ಶಾಲೆಯ ಒಳಗೆ ಹಾಗೂ ಹೊರಗೆ ನಡೆಸಲ್ಪಡುತ್ತವೆ. |
| 5. ಇಲ್ಲಿ ಎಲ್ಲಾ ವಿಷಯಗಳಿಗೆ ಪರೀಕ್ಷೆಗಳಿದ್ದು ಇವುಗಳಿಗೆ ಅತಿಯಾದ ಮಹತ್ವ ನೀಡಲಾಗಿದೆ. | 5. ಇವುಗಳಿಗೆ ಪರೀಕ್ಷೆಗಳಿಲ್ಲ, ಕೆಲವಕ್ಕೆ ನೆಪಮಾತ್ರಕ್ಕೆ ಪರೀಕ್ಷೆಗಳು ನಡೆಯುತ್ತಲಿವೆ. |
| 6. ಇವುಗಳು ಸಹಪಠ್ಯ ಚಟುವಟಿಕೆಗಳಿಗೆ ಪೂರಕವಾಗಿಲ್ಲ. | 6. ಸಹಪಠ್ಯ ಚಟುವಟಿಕೆಗಳು ಪಠ್ಯ ಚಟುವಟಿಕೆಗಳಿಗೆ ಪೂರಕವಾಗಿವೆ. |
| 7. ಶಿಕ್ಷಕರು ಪಠ್ಯಚಟುವಟಿಕೆಗಳಿಗೆ ಅತಿಯಾದ ಮಹತ್ವ. | 7. ಇವುಗಳನ್ನು ಕೆಲವೊಮ್ಮೆ ಲಘುವಾಗಿ ಕಾಣುತ್ತಾರೆ. |
| 8. ಇವುಗಳು ತಾತ್ವಿಕ ಜ್ಞಾನ ನೀಡುತ್ತವೆ. | 8. ಇವುಗಳು ಪ್ರಾಯೋಗಿಕ ಜ್ಞಾನ ನೀಡುತ್ತವೆ. |

ಇತಿಹಾಸ ಬೋಧನೆಯಲ್ಲಿ ದೃಕ್ ಮತ್ತು ಶ್ರವಣೋಪಕರಣಗಳ ನಡುವಿನ ವ್ಯತ್ಯಾಸ:

| ದೃಕ್ ಉಪಕರಣಗಳು | ಶ್ರವಣೋಪಕರಣಗಳು |
|---|---|
| 1. ಚಕ್ಷುರಿಂದ್ರಿಯವನ್ನು ಆಕರ್ಷಿಸಿ ಅಧ್ಯಯನವನ್ನು ಮಾಡಿಸುವ ಉಪಕರಣಗಳು ಚಾಕ್ಷುಷೋಪಕರಣಗಳಾಗಿವೆ. (ವೀಕ್ಷಿಸುವುದರ ಮೂಲಕ ಕಲಿಕೆಯನ್ನು ಉಂಟು ಮಾಡುವ ಸಾಧನಕ್ಕೆ ದೃಕ್ ಉಪಕರಣ ಎನ್ನುವರು.) | 1. ಶ್ರವಣೇಂದ್ರಿಯವನ್ನು ಆಕರ್ಷಿಸಿ ಅಧ್ಯಯನವನ್ನು ಕೈಗೊಳ್ಳುವಂತೆ ಮಾಡುವ ಉಪಕರಣಗಳು ಶ್ರವಣೋಪಕರಣಗಳಾಗಿವೆ. (ಆಲಿಸುವುದರ ಮೂಲಕ ಕಲಿಕೆಯನ್ನುಂಟು ಮಾಡುವ ಉಪಕರಣಕ್ಕೆ ಶ್ರವಣೋಪಕರಣ ಎನ್ನುವರು.) |
| 2. ಪಟಗಳು, ಚಿತ್ರಗಳು, ನಕಾಶೆಗಳು, ಮಾದರಿಗಳು, ಕಾಲಸೂಚಿ, ಗೋಳ, ಕರಿಹಲಗೆ, ಪ್ರದರ್ಶನ ಫಲಕ ಇತ್ಯಾದಿಗಳು ಉದಾಹರಣೆಗಳಾಗಿವೆ. | 2. ಶ್ರವಣೋಪಕರಣಗಳಿಗೆ ರೇಡಿಯೋ, ಟೇಪರಿಕಾರ್ಡರ್ ಗ್ರಾಮಫೋನ್ ಇತ್ಯಾದಿಗಳು ಉಪಕರಣಗಳಾಗಿವೆ. |
| 3. ಸಾಮಾನ್ಯವಾಗಿ ವಿದ್ಯಾರ್ಥಿಯು ಚಕ್ಷುರಿಂದ್ರಿಯದಿಂದ 83% ಜ್ಞಾನವನ್ನು ಹೊಂದುವನು. | 3. ಸಾಮಾನ್ಯವಾಗಿ ವಿದ್ಯಾರ್ಥಿಯು ಶ್ರವಣೇಂದ್ರಿಯದಿಂದ 11% ಜ್ಞಾನವನ್ನು ಹೊಂದುವನು. |
| 4. ಸಾಮಾನ್ಯವಾಗಿ ವಿದ್ಯಾರ್ಥಿಯು ಚಕ್ಷುರಿಂದ್ರಿಯದಿಂದ ಗ್ರಹಣ ಮಾಡಿರುವುದರಲ್ಲಿ 30% ನೆನಪಿನಲ್ಲಿಟ್ಟುಕೊಳ್ಳುವನು. | 4. ಸಾಮಾನ್ಯವಾಗಿ ವಿದ್ಯಾರ್ಥಿಯು ಶ್ರವಣದಿಂದ ಗ್ರಹಣ ಮಾಡಿರುವುದನ್ನು 20% ಸ್ಮರಣೆಯಲ್ಲಿ ಇಟ್ಟುಕೊಳ್ಳುವನು. |
| 5. ದೃಕ್ ಉಪಕರಣಗಳನ್ನು ಇತಿಹಾಸ ಶಿಕ್ಷಕರೇ ವಿದ್ಯಾರ್ಥಿಗಳ ಹಾಗೂ ಇತರ ಶಿಕ್ಷಕರ ಸಹಾಯದಿಂದ ತಯಾರಿಸಬಹುದಾಗಿದೆ. | 5. ಶ್ರವಣ ಸಾಧನಗಳನ್ನು ಖರೀದಿಸಿ ತರಬೇಕಾಗುವುದು. |
| 6. ದೃಕ್ ಉಪಕರಣಗಳಲ್ಲಿ ಬಹುತೇಕ ಉಪಕರಣಗಳು ಇತಿಹಾಸ ಪ್ರತಿಯೊಂದು ಪಾಠಕ್ಕೆ ಅತಿ ಅಗತ್ಯವಾಗಿವೆ. | 6. ಶ್ರವಣೋಪಕರಣಗಳನ್ನು ಇತಿಹಾಸ ಪ್ರತಿಯೊಂದು ಪಾಠಕ್ಕೂ ಬಳಸಲು ಸಾಧ್ಯವಿಲ್ಲ. |
| 7. ದೃಕ್ ಉಪಕರಣಗಳನ್ನು ಪಾಠದಲ್ಲಿ ಯೋಗ್ಯವಾಗಿ ಬಳಕೆ ಮಾಡಿಕೊಳ್ಳುವುದಕ್ಕೆ ಇತಿಹಾಸದ ಶಿಕ್ಷಕನಿಗೆ ವಿಶೇಷ ತರಬೇತಿಯ ಅಗತ್ಯವಿಲ್ಲ. | 7. ಶ್ರವಣೋಪಕರಣವನ್ನು ಪರಿಣಾಮಕಾರಿಯಾಗಿ ಇತಿಹಾಸ ಬೋಧನೆಯಲ್ಲಿ ಬಳಕೆ ಮಾಡಿಕೊಳ್ಳಲು ಇತಿಹಾಸದ ಶಿಕ್ಷಕನಿಗೆ ವಿಶೇಷ ತರಬೇತಿಯ ಅಗತ್ಯವಿದೆ. |
| 8. ದೃಕ್ ಉಪಕರಣಗಳು ಪ್ರತಿಯೊಂದು ಶಾಲೆಯಲ್ಲೂ ಲಭ್ಯವಿದೆ. | 8. ಶ್ರವಣೋಪಕರಣಗಳು ಪ್ರತಿಯೊಂದು ಶಾಲೆಯಲ್ಲಿ ಲಭ್ಯವಿದೆಯೆಂದು ಹೇಳಲು ಬರುವುದಿಲ್ಲ. |
| 9. ದೃಕ್ ಉಪಕರಣಗಳು ತಾಂತ್ರಿಕ ಉಪಕರಣಗಳಲ್ಲ. | 9. ಶ್ರವಣ ಉಪಕರಣಗಳು ತಾಂತ್ರಿಕ ಉಪಕರಣಗಳಾಗಿವೆ. |
| 10. ದೃಕ್ ಉಪಕರಣಗಳು ಸರಳವಾಗಿವೆ. | 10. ಶ್ರವಣೋಪಕರಣಗಳು ಕಠಿಣತೆಯ ಗುಣವನ್ನು ಹೊಂದಿವೆ. |
| 11. ದೃಕ್ ಉಪಕರಣಗಳು ದೀರ್ಘಕಾಲ ಬಳಕೆಗೆ ಬರುತ್ತವೆ. | 11. ಶ್ರವಣೋಪಕರಣಗಳು ದೀರ್ಘಕಾಲ ಬಾಳಿಕೆ ಬರುತ್ತವೆಂದು ಹೇಳಲು ಬರುವುದಿಲ್ಲ. |
| 12. ದೃಕ್ ಉಪಕರಣಗಳು ವಿದ್ಯಾರ್ಥಿಗಳ ಗಮನ ಬೇರೆಡೆಗೆ ಹೋಗಲು ಬಿಡುವುದಿಲ್ಲ. | 12. ಶ್ರವಣೋಪಕರಣಗಳು ವಿದ್ಯಾರ್ಥಿಗಳ ಗಮನವನ್ನ ಪಾಠದುದ್ದಕ್ಕೂ ಹಿಡಿದಿಟ್ಟುಕೊಳ್ಳುತ್ತವೆಂದು ಹೇಳಲು ಬರುವುದಿಲ್ಲ. |

ಇಂದಿನ ಶಿಕ್ಷಣದಲ್ಲಿ ದೃಕ್ ಹಾಗೂ ಶ್ರವಣೋಪಕರಣಗಳ ಜೊತೆಗೆ ದೃಕ್ ಶ್ರವಣೋಪಕರಣಗಳಾದ ದೂರದರ್ಶನ, ಚಲನಚಿತ್ರ, ಗಣಕಯಂತ್ರ, ಪ್ರವಾಸ, ಮೊದಲಾದವು ಪರಿಣಾಮಕಾರಿಯಾದ ಸಾಧನಗಳಾಗಿವೆ. ದೃಕ್ ಶ್ರವಣೋಪಕರಣಗಳನ್ನು ಶಿಕ್ಷಕನ ಆತ್ಮೀಯ ಮಿತ್ರನೆಂದು ಹೇಳಬಹುದಾಗಿದೆ. ವಿದ್ಯಾರ್ಥಿಗಳು ಚಕ್ಷುರಿಂದ್ರಿಯ ಹಾಗೂ ಶ್ರವಣೇಂದ್ರಿಯಗಳನ್ನು ಈ ಉಪಕರಣಗಳು ಆಕರ್ಷಿಸುವುದರಿಂದ ಅಧ್ಯಯನವು ಅರ್ಥವತ್ತಾಗಿ ಮತ್ತು ಆಸಕ್ತಿದಾಯಕವಾಗುವದು.

## 2. ಸ್ತಬ್ಧ ಚಿತ್ರಗಳು (Still Pictures) :

ತಂತ್ರಾಂಶ ಆಧಾರಿತ ಮಾಧ್ಯಮಗಳಲ್ಲಿ ಸ್ತಬ್ಧಚಿತ್ರಗಳು ಪ್ರಮುಖ ಪಾತ್ರವಹಿಸ್ತ ಇವುಗಳನ್ನು ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿಯೂ ಹೆಚ್ಚಾಗಿ ಬಳಸಲಾಗುತ್ತಿದೆ.

ಸ್ತಬ್ಧ ಚಿತ್ರಗಳೆಂದರೆ "ಅತ್ಯಂತ ವೇಗವಾಗಿ ಒಂದು ಸನ್ನಿವೇಶದಲ್ಲಿರುವ ಮಾಹಿ ಭಾವನೆ, ಅಥವಾ ಅನುಭವಗಳನ್ನು ವ್ಯಕ್ತಪಡಿಸುವ ಒಂದು ನಿಶ್ಚಲವಾದ ತಂತ್ರಾಂಶ ಆಧಾರಿತ ಚಿತ್ರವನ್ನು ಸ್ತಬ್ಧಚಿತ್ರಗಳು" ಎನ್ನುವರು.

### ವ್ಯಾಖ್ಯೆಗಳು (Definitions) :

**ಆಕ್ಸ್‌ಫರ್ಡ್ ನಿಘಂಟಿನ** ಪ್ರಕಾರ "ದೃಶ್ಯಾತ್ಮಕವಾಗಿ ಮಾಹಿತಿ ನೀಡುವ ನಿಶ್ಚಲ ವಾದ ತಂತ್ರಜ್ಞಾನ ಆಧಾರಿತ ಚಿತ್ರವನ್ನು ಸ್ತಬ್ಧ ಚಿತ್ರ" ಎಂದರ್ಥ.

**ಕನ್ನಡ ನಿಘಂಟಿನ** ಪ್ರಕಾರ ಸ್ಪಷ್ಟ ದೃಶ್ಯ ಸಾರಾಂಶವನ್ನು ನಿರೂಪಿಸುವ ತಂತ್ರಜ್ಞಾ ಆಧಾರಿತ ಚಿತ್ರಗಳೇ ಸ್ತಬ್ಧ ಚಿತ್ರಗಳೆನ್ನುವರು..

### ವಿಧಗಳು (Types of Still Pictures) :

ವಿಧಗಳು
- 1. ವ್ಯಂಗ್ಯಚಿತ್ರ ಆಧಾರಿತ ಸ್ತಬ್ಧಚಿತ್ರಗಳು
- 2. ವ್ಯಂಗ್ಯಚಿತ್ರ ಮತ್ತು ಸಂಭಾಷಣೆ ಆಧಾರಿತ ಸ್ತಬ್ಧಚಿತ್ರ
- 3. ನೈಜಚಿತ್ರ ಆಧಾರಿತ ಸ್ತಬ್ಧಚಿತ್ರಗಳು
- 4. ಕಾಲ್ಪನಿಕ ಚಿತ್ರ ಆಧಾರಿತ ಸ್ತಬ್ಧ ಚಿತ್ರಗಳು
- 5. ಸಾಂದರ್ಭಿಕ ಸ್ತಬ್ಧ ಚಿತ್ರಗಳು

## A

ಪ್ರಬಂಧ ಮಾದರಿ ಮತ್ತು ವಸ್ತುನಿಷ್ಠ ಮಾದರಿ ಪರೀಕ್ಷೆಗಳ ನಡುವಿನ ವ್ಯತ್ಯಾಸ

| ಪ್ರಬಂಧ ಮಾದರಿ ಪರೀಕ್ಷೆ | ವಸ್ತುನಿಷ್ಠ ಮಾದರಿ ಪರೀಕ್ಷೆ |
|---|---|
| 1) ವಿದ್ಯಾರ್ಥಿಗಳ ಜ್ಞಾನ ತಿಳುವಳಿಕೆ ಅಭಿರುಚಿ ಅರಿಯಲು ಸಾಧ್ಯ. | 1) ವಿದ್ಯಾರ್ಥಿಗಳ ನಿಜವಾದ ಬುದ್ಧಿವಂತಿಕೆಯನ್ನು ಅರಿಯಲು ಸಾಧ್ಯ. |
| 2) ವಿದ್ಯಾರ್ಥಿಗಳ ಆಲೋ-ಚನಾ ಶಕ್ತಿ ಮತ್ತು ಸ್ಮರಣ ಶಕ್ತಿಯನ್ನು ಬೆಳೆಸುವು-ದಿಲ್ಲ. | 2) ವಿದ್ಯಾರ್ಥಿಗಳ ಆಲೋಚನಾ ಶಕ್ತಿಯನ್ನು ಮತ್ತು ಸ್ಮರಣೆ ಶಕ್ತಿಯನ್ನು ಹೆಚ್ಚಿಸುತ್ತದೆ. |
| 3) ಮೌಲ್ಯಮಾಪನದಲ್ಲಿ ಪಕ್ಷಪಾತಕ್ಕೆ ಅವಕಾಶವಿದೆ. | 3) ಮೌಲ್ಯಮಾಪನದಲ್ಲಿ ಪಕ್ಷ-ಪಾತಕ್ಕೆ ಅವಕಾಶವಿಲ್ಲ. |
| 4) ಸಮಂಜಸ, ಸಮರ್ಪಕ ಮತ್ತು ನಿಖರ ಉತ್ತರಗಳಿಗೆ ಅವಕಾಶವಿಲ್ಲ. | 4) ಅಸಮಂಜಸ ಉತ್ತರಗಳಿಗೆ ಅವಕಾಶವಿಲ್ಲ. |
| 5) ಅಂಕ ನೀಡಿಕೆಯು ವ್ಯಕ್ತಿ-ನಿಷ್ಠವಾಗಿದೆ. | 5) ಅಂಕ ನೀಡಿಕೆ ವಸ್ತು-ನಿಷ್ಠವಾಗಿದೆ. |
| 6) ಇದು ನೈದಾನಿಕ ಮೌಲ್ಯ ಹೊಂದಿಲ್ಲ. | 6) ಇದು ನೈದಾನಿಕ ಮೌಲ್ಯ ಹೊಂದಿದೆ. |
| 7) ಸಮಯದ ಅಪವ್ಯಯವಾಗುತ್ತದೆ. | 7) ಸಮಯದ ಉಳಿತಾಯ ಆಗುತ್ತದೆ. |
| 8) ಇದು ಸಿಂಧುತ್ವ ವಿಶ್ವಸನೀಯತೆ ವ್ಯಾಪಕತೆ ಹೊಂದಿ-ರುವುದಿಲ್ಲ. | 8) ಇದು ವಿಶ್ವಸನೀಯತೆ ವ್ಯಾಪ ಕತೆ ಸಮಂಜಸತೆ ಹೊಂದಿ-ರುತ್ತದೆ. |
| 9) ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ ಬರವಣಿಗೆಯ ಕುಶಲತೆ ವಿವರಣಾ ಸಾಮರ್ಥ್ಯ ವಿಮರ್ಶಾತ್ಮಕ ಕಲೆಯನ್ನು ಅಳೆಯಲು ಸಾಧ್ಯವಿದೆ. | 9) ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ ವಿವರಣಾ ಸಾಮರ್ಥ್ಯ ಬರೆಯುವ ಕೌಶಲ್ಯ ಅಳೆಯಲು ಸಾಧ್ಯವಿಲ್ಲ. |
| 10) ಇದು ವಿದ್ಯಾರ್ಥಿಗಳ ಜ್ಞಾಪಕ ಶಕ್ತಿಗೆ ಹೆಚ್ಚು ಒತ್ತಡ ಹೇರುವುದಿಲ್ಲ. | 10) ಇದು ವಿದ್ಯಾರ್ಥಿಗಳ ಜ್ಞಾಪಕ ಶಕ್ತಿಗೆ ಹೆಚ್ಚು ಒತ್ತಡ ಹೇರುವುದು. |
| 11) ಈ ರೀತಿಯ ಪರೀಕ್ಷೆಯನ್ನೂ ತಯಾರಿಸಲು ಅನುಭವಿ ಶಿಕ್ಷಕರ ಅಗತ್ಯತೆ ಇಲ್ಲ. | 11) ಈ ರೀತಿಯ ಪ್ರಶ್ನೆಗಳಿಗೆ ಪತ್ರಿಕೆ ತಯಾರಿಸಲು ಬುದ್ಧಿವಂತ ಮತ್ತು ಅನುಭವಿ ಶಿಕ್ಷಕರಿಂದ ಸಾಧ್ಯ. |
| 12) ಇಲ್ಲಿ ಗಿಳಿಪಾಠಕ್ಕೆ ಅವಕಾಶವಿದೆ. | 12) ಗಿಳಿಪಾಠಕ್ಕೆ ಅವಕಾಶವಿಲ್ಲ. |
| 13) ವಿದ್ಯಾರ್ಥಿಗಳು ತಕ್ಷಣ ಕಾಫಿ ಹೊಡೆದು ಬರೆಯಲು ಸಾಧ್ಯವಿಲ್ಲ. | 13) ವಿದ್ಯಾರ್ಥಿಗಳು ತಕ್ಷಣ ಕಾಫಿ ಹೊಡೆದು ಹೆಚ್ಚು ಅಂಕ ಗಳಿಸುವ ಸಾಧ್ಯತೆ ಇದೆ. |
| 14) ಇದರಲ್ಲಿ ಊಹಿಸಿ ಬರೆಯಲು ಅವಕಾಶವಿಲ್ಲ ಮತ್ತು ಇದು ಆಸಕ್ತಿಯುತವೂ ಮತ್ತು ಪ್ರತಿ ಫಲನ ವಿವೇಚ-ನಾಶಕ್ತಿ ಒಳಗೊಂಡಿರುವುದಿಲ್ಲ. | 14) ಇದು ಆಸಕ್ತಿಯುತವೂ ಹಾಗೂ ಪ್ರತಿಫಲನ ವಿವೇಚನಾ ಶಕ್ತಿಯನ್ನು ಒಳಗೊಂಡಿದೆ ಹಾಗೂ ಊಹಿಸಿ ಬರೆಯಲು ಅವಕಾಶವಿದೆ. |

ರಿ ತಪ್ಪು ಪರೀಕ್ಷೆ :

ಇಂಥ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಸರಿಯಾದ ಉತ್ತರವನ್ನು ಗುರುತಿಸಬೇಕು. ಇದರಲ್ಲಿ ವಾಕ್ಯಗಳನ್ನು ಕೊಟ್ಟು ದ್ಯಾರ್ಥಿಗಳಿಗೆ ಅವು ತಪ್ಪೋ ಸರಿಯೋ ಎಂದು ಗುರುತಿಸಲು ಹೇಳುತ್ತಾರೆ. ಇದು ಗುರುತಿಸುವ ಪ್ರಕಾರದಲ್ಲೇ ಪ್ರಸಿದ್ಧಿ ಪಡೆದ

# ಆಪ್ತ ಸಲಹೆಗಾರರು ..................

- ಬಸವರಾಜ ಹಿಪ್ಪರಗಿ (ಕನ್ನಡ ಉಪನ್ಯಾಸಕರು)
- ದಾನಮ್ಮ ಮಟ್ಟಿಕಲ್ಲು ( ಸಮಾಜಶಾಸ್ತ್ರ ಉಪನ್ಯಾಸಕರು)
- ಮಹಾಂತೇಶ ಕಾಸಿನಕುಂಟಿ ( ಎಮ್, ಎ ಇಂಗ್ಲೀಷ್)
- ಪುನೀತ್ ಹತ್ತಿಕಟ್ಟಿಗಿ (ಸಮಾಜ ವಿಜ್ಞಾನ ಶಿಕ್ಷಕರು-ಕೊಪ್ಪಳ)
- ಮಂಜುನಾಥ್ ಎಸ್ ಎಸ್ ( ರಾಜ್ಯಶಾಸ್ತ್ರ ಉಪನ್ಯಾಸಕರು)